Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 18-12-2020



Edit with WPS Office

# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಸಂಜೆ ವಾಣಿ
11. ಈ ಸಂಜೆ

Edit with WPS Office

ಪ್ರಜಾವಾಣಿ

ಹೈಕೋರ್ಟ್ ಆದೇಶ ಪ್ರಶ್ನಿಸಿ 'ಸುಪ್ರೀಂ'ಗೆ ಸಲ್ಲಿಸಿರುವ ಅರ್ಜಿಗಳು

# ಬಿಬಿಎಂಪಿ ಚುನಾವಣೆ: ಇಂದು ವಿಚಾರಣೆ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಮೂರು ಪ್ರತ್ಯೇಕ ಅರ್ಜಿಗಳ ವಿಚಾರಣೆ
- ಕರ್ನಾಟಕ ಸರ್ಕಾರ, ಇತರರಿಂದ ಅರ್ಜಿ ಸಲ್ಲಿಕೆ

ನವದೆಹಲಿ: 198 ವಾರ್ಡ್‌ಗಳಿಗೆ ಅನ್ವಯಿಸಿ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಚುನಾವಣೆ ನಡೆಸಬೇಕು ಎಂಬ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ, ಇತರರು ಸಲ್ಲಿಸಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಿಚಾರಣೆಗೆ ತೆಗೆದುಕೊಳ್ಳಲಿದೆ.

ಮುಖ್ಯ ನ್ಯಾಯಮೂರ್ತಿ ಎಸ್‌.ಎ. ಬೊಬಡೆ ನೇತೃತ್ವದ, ನ್ಯಾಯಮೂರ್ತಿಗಳಾದ ಎ.ಎಸ್‌.ಬೋಪಣ್ಣ ಮತ್ತು ವಿ. ರಾಮಸುಬ್ರಹ್ಮಣಿಯನ್ ಅವರು ಇರುವ ಪೀಠವು ಈ ಕುರಿತ ಮೂರು ಪ್ರತ್ಯೇಕ ಅರ್ಜಿಗಳ ವಿಚಾರಣೆ ನಡೆಸಲಿದೆ. ಕರ್ನಾಟಕ ಸರ್ಕಾರ, ಡಾ.ಬಿ.ಆರ್. ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿ ಮತ್ತು ಭಾಸ್ಕರ್ ಅರ್ಜಿಗಳನ್ನು ಸಲ್ಲಿಸಿದ್ದರು.

ಚುನಾವಣೆ ವೇಳಾಪಟ್ಟಿಯನ್ನು ಪ್ರಕಟಿಸುವುದು ಸೇರಿ ನಿಗದಿತ, ಗರಿಷ್ಠ ಆರು ವಾರಗಳ ಅವಧಿಯಲ್ಲಿ ಬಿಬಿಎಂಪಿ ಚುನಾವಣೆಯನ್ನು ಪೂರ್ಣಗೊಳಿಸಬೇಕು ಎಂದೂ ಹೈಕೋರ್ಟ್ ಆದೇಶಿಸಿತ್ತು. ಸೆಪ್ಟೆಂಬರ್ 23, 2020ರ ಅಧಿಸೂಚನೆ ಆಧರಿಸಿ ಚುನಾವಣೆಗೆ ಆದೇಶಿಸಲಾಗಿತ್ತು. ಈ ಆದೇಶದ ಸಿಂಧುತ್ವನ್ನು ಅರ್ಜಿದಾರರು ಪ್ರಶ್ನಿಸಿದ್ದರು. ಬಿಬಿಎಂಪಿ ವ್ಯಾಪ್ತಿಯಲ್ಲಿ ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಏರಿಸುವ ಮಸೂದೆಯನ್ನು ರಾಜ್ಯ ವಿಧಾನ ಮಂಡಲವು ಅಂಗೀಕರಿಸಿದೆ. ಈ ಕುರಿತು ಅಧಿಸೂಚನೆಯೂ ಜನವರಿ 14, 2020ರಂದು ಪ್ರಕಟವಾಗಿದೆ ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು.

ಬೆಂಗಳೂರಿನಂತಹ ನಗರದಲ್ಲಿ ಪರಿಶಿಷ್ಟ ಜಾತಿ ಮತ್ತು ಇತರೆ ನಿರ್ಲಕ್ಷಿತ ಸಮುದಾಯಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು ಎಂಬ ಹಿನ್ನೆಲೆಯಲ್ಲಿ ಈ ಕ್ರಮ ವಹಿಸಲಾಗಿದೆ ಎಂಬುದನ್ನು ಅವರು ಅರ್ಜಿಯಲ್ಲಿ ಉಲ್ಲೇಖಿಸಿದ್ದರು.

ರಾಜ್ಯ ಚುನಾವಣಾ ಆಯೋಗ ಮತ್ತು ಇತರರು ಸಲ್ಲಿಸಿದ್ದ ಅರ್ಜಿಗಳನ್ನು ಆಧರಿಸಿ ಹೈಕೋರ್ಟ್ ಇಂಥ ಆದೇಶ ಹೊರಡಿಸಿದೆ. ಇಂಥ ಅರ್ಜಿಯನ್ನು ಸಲ್ಲಿಸುವ ಅಧಿಕಾರ ಆಯೋಗಕ್ಕೆ ಇಲ್ಲ, ಕಾಯ್ದೆಯನ್ವಯ ಬದಲಾವಣೆಗಳನ್ನು ಜಾರಿಗೊಳಿಸುವುದನ್ನು ಬಿಟ್ಟು ಆಯೋಗಕ್ಕೆ ಅನ್ಯ ಮಾರ್ಗವಿಲ್ಲ ಎಂದೂ ಅರ್ಜಿದಾರರು ಪ್ರತಿಪಾದಿಸಿದ್ದರು.

ಬಿಬಿಎಂಪಿಯ ಚುನಾಯಿತ ಸದಸ್ಯರ ಅಧಿಕಾರ ಅವಧಿ ಸೆಪ್ಟೆಂಬರ್ 10, 2020ರಂದು ಅಂತ್ಯಗೊಂಡಿದೆ. ಚುನಾವಣೆ ವಿಳಂಬಕ್ಕೆ ಕೋವಿಡ್ ಪರಿಸ್ಥಿತಿಯೂ ಕಾರಣವಾಗಿತ್ತು ಎಂದು ಅರ್ಜಿದಾರರು ವಾದಿಸಿದ್ದರು.

Edit with WPS Office

ಪ್ರಜಾವಾಣಿ

# ‘ಕೇವಿಯಟ್ ಸಲ್ಲಿಸದೆ ಸರ್ಕಾರಕ್ಕೆ ಸಹಕಾರ’

ಬೆಂಗಳೂರು: ‘ಬಿಬಿಎಂಪಿಗೆ ಶೀಘ್ರವೇ ಚುನಾವಣೆ ನಡೆಸುವಂತೆ ರಾಜ್ಯ ಹೈಕೋರ್ಟ್ ನೀಡಿರುವ ಆದೇಶದ ವಿರುದ್ಧ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ. ಈ ಬಗ್ಗೆ ಮೊದಲೇ ತಿಳಿದಿದ್ದರೂ ರಾಜ್ಯ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ನಲ್ಲಿ ಕೇವಿಯಟ್ ಸಲ್ಲಿಸಿಲ್ಲ ಏಕೆ’ ಎಂದು ಕಾಂಗ್ರೆಸ್ ಮುಖಂಡ ಅಬ್ದುಲ್ ವಾಜಿದ್ ಪ್ರಶ್ನಿಸಿದ್ದಾರೆ.

‘ಒಂದು ತಿಂಗಳ ಒಳಗೆ ಬಿಬಿಎಂಪಿ ವಾರ್ಡ್‌ವಾರು ಮೀಸಲಾತಿ ಪಟ್ಟಿ ಪ್ರಕಟಿಸಬೇಕು. ಅದಾಗಿ ಆರು ವಾರಗಳ ಒಳಗೆ ಚುನಾವಣೆ ಪ್ರಕ್ರಿಯೆ ಆರಂಭಿಸಬೇಕು ಎಂದು ಹೈಕೋರ್ಟ್ ಡಿ.4ರಂದು ಆದೇಶ ಮಾಡಿದೆ. ಅದರ ಪ್ರಕಾರ ಚುನಾವಣೆ ನಡೆಯುವಂತೆ ನೋಡಿಕೊಳ್ಳುವುದು ರಾಜ್ಯ ಚುನಾವಣಾ ಆಯೋಗದ ಕರ್ತವ್ಯ. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವುದಾಗಿ ಕಂದಾಯ ಸಚಿವ ಆರ್.ಅಶೋಕ ಹೇಳಿಕೆ ನೀಡಿದ್ದರು. ಚುನಾವಣೆ ಮತ್ತಷ್ಟು ವಿಳಂಬ ಆಗುವುದನ್ನು ತಪ್ಪಿಸಲು ರಾಜ್ಯ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ನಲ್ಲಿ ಕೇವಿಯಟ್ ಸಲ್ಲಿಸಬೇಕಿತ್ತು’ ಎಂದು ಅಭಿಪ್ರಾಯಪಟ್ಟರು.

‘ರಾಜ್ಯ ಸರ್ಕಾರಕ್ಕೆ ರಾಜ್ಯ ಚುನಾವಣಾ ಆಯೋಗವು ಪರೋಕ್ಷ ಸಹಕಾರ ನೀಡುತ್ತಿದೆ. ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕಾದ ಚುನಾವಣಾ ಆಯೋಗ ಸರ್ಕಾರದ ಕೈಗೊಂಬೆಯಾಗಿದೆ’ ಎಂದು ಆರೋಪಿಸಿದರು.

‘ಬಿಬಿಎಂಪಿ ಚುನಾವಣೆಯನ್ನು ಮತ್ತಷ್ಟು ಕಾಲ ಮುಂದೂಡಲು ಸರ್ಕಾರ ಇನ್ನಿಲ್ಲದ ಕಸರತ್ತು ನಡೆಸುತ್ತಿದೆ. ಹೈಕೋರ್ಟ್ ಆದೇಶ ನೀಡಿದ ಬಳಿಕವಾದರೂ ಸರ್ಕಾರ ಚುನಾವಣೆ ನಡೆಸಬೇಕಿತ್ತು. ಸರ್ಕಾರ ಏನೆಲ್ಲ ತಂತ್ರ ಹೂಡಿದರೂ ಅದಕ್ಕೆ ಸುಪ್ರೀಂ ಕೋರ್ಟ್ ಕೂಡ ಸೊಪ್ಪು ಹಾಕುವುದಿಲ್ಲ. ನಮಗೆ ಸುಪ್ರೀಂ ಕೋರ್ಟ್‌ನಲ್ಲೂ ನ್ಯಾಯ ಸಿಗಲಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಬಿಬಿಎಂಪಿಗೆ ಚುನಾವಣೆ ನಡೆಸಲು ನಿರ್ದೇಶನ ನೀಡಬೇಕು ಎಂದು ಕೋರಿ ಅಬ್ದುಲ್ ವಾಜಿದ್ ಹಾಗೂ ಶಿವರಾಜು ಹೈಕೋರ್ಟ್ ಮೊರೆ ಹೋಗಿದ್ದರು.

Edit with WPS Office

ಪ್ರಜಾವಾಣಿ


# ನೆಲಗದರನಹಳ್ಳಿ ರಸ್ತೆ ಅಭಿವೃದ್ಧಿಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ನೆಲಗದರನಹಳ್ಳಿ ಮುಖ್ಯ ರಸ್ತೆ ವಿಸ್ತರಣೆಗೆ ಕೊನೆಗೂ ಕಾಲ ಕೂಡಿ ಬಂದಿದೆ. ಅಗತ್ಯ ಇರುವ ಜಾಗವನ್ನು ಟಿಡಿಆರ್ (ಅಭಿವೃದ್ಧಿ ಹಕ್ಕು ಪ್ರಮಾಣಪತ್ರ) ಪಡೆದು ಬಿಟ್ಟುಕೊಡಲು ಬಹುತೇಕ ಆಸ್ತಿ ಮಾಲೀಕರು ಒಪ್ಪಿದ್ದಾರೆ.

8ನೇ ಮೈಲಿಯಿಂದ ಗಂಗಾ ಇಂಟರ್ ನ್ಯಾಷನಲ್ ಶಾಲೆ ವರೆಗಿನ 2.4 ಕಿಲೋ ಮೀಟರ್ ಉದ್ದದ ರಸ್ತೆಯಲ್ಲಿ ಬೆಳಿಗ್ಗೆ ಮತ್ತು ಸಂಜೆ ವಾಹನ ಚಾಲನೆ ಮಾಡುವುದೆಂದರೆ ಸಾಹಸ ಕೆಲಸ. ಹೆಸರಿಗೆ 30 ಅಡಿ ರಸ್ತೆ ಇದಾಗಿದ್ದು, ಕೆಲವು ಕಡೆ 15 ಅಡಿ ಮತ್ತು 20 ಅಡಿಯಷ್ಟೇ ಉಳಿದುಕೊಂಡಿದೆ. ಇಕ್ಕಟ್ಟಿನಿಂದ ಕೂಡಿದ ರಸ್ತೆಯಿಂದ ವಾಹನ ಸವಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು.

ನೆಲಗದರನಹಳ್ಳಿ ಸುತ್ತಮುತ್ತಲ ನಿವಾಸಿಗಳು ತುಮಕೂರು ಮುಖ್ಯರಸ್ತೆ, ಮೆಟ್ರೊ ನಿಲ್ದಾಣ ತಲುಪಲು ಇದೇ



ನೆಲಗದರನಹಳ್ಳಿ ಮುಖ್ಯರಸ್ತೆ

ಪ್ರಮುಖ ರಸ್ತೆ. ನೆಲಗದರನಹಳ್ಳಿಯಿಂದ 8ನೇ ಮೈಲಿಯ ನಾಗಸಂದ್ರ ಕ್ರಾಸ್ ತನಕ ಪ್ರತಿನಿತ್ಯ ಬಸ್‌ಗಳು, ಲಾರಿಗಳು ಸೇರಿ ಸಾವಿರಾರು ವಾಹನಗಳು ಸಂಚರಿಸುತ್ತವೆ.

ಬೆಳಿಗ್ಗೆ ಮತ್ತು ಸಂಜೆ ಸಂಚಾರ ದಟ್ಟಣೆ ಉಂಟಾಗುವುದು ಇಲ್ಲಿ ಸಾಮಾನ್ಯ. ಸಂಚಾರ ದಟ್ಟಣೆ ಸಮಯದಲ್ಲಿ ದೊಡ್ಡ ವಾಹನವೊಂದು ಈ ರಸ್ತೆಗೆ ಪ್ರವೇಶಿಸಿತೆಂದರೆ ಗಂಟೆಗಟ್ಟಲೆ ಕಾದು ನಿಲ್ಲಲೇಬೇಕು. ಈ ದಟ್ಟಣೆ ಸೀಳಿಕೊಂಡು ನೆಲಗದರನಹಳ್ಳಿ, ಗಂಗಾ ಇಂಟರ್ ನ್ಯಾಷನಲ್ ಶಾಲೆ ದಾಟಿದರೆ ಅಂದ್ರಹಳ್ಳಿ ಮೂಲಕ ಮಾಗಡಿ ರಸ್ತೆ ತನಕ ಸಾಗುವುದು ಸುಲಭ. ಮುಂದೆ ಅಗಲವಾದ ರಸ್ತೆಯಿದೆ.

60 ಅಡಿ ರಸ್ತೆಯನ್ನಾಗಿ ವಿಸ್ತರಿಸುವ ಯೋಜನೆ 10 ವರ್ಷಗಳಿಂದ ನನೆಗುದಿಗೆ ಬಿದ್ದಿದೆ. ಮೂರು ಬಾರಿ ಶಂಕುಸ್ಥಾಪನೆ ನೆರವೇರಿದ್ದರೂ ಕಾಮಗಾರಿ ಮಾತ್ರ ಆರಂಭವಾಗಿಲ್ಲ. ರಸ್ತೆಗೆ ಚಾಚಿಕೊಂಡಿರುವ ಕಟ್ಟಡಗಳನ್ನು ಬಿಬಿಎಂಪಿ ಅಧಿಕಾರಿಗಳು ಈ ಹಿಂದೆ ಗುರುತು ಮಾಡಿದ್ದರು. ಆದರೆ, ಸ್ವಾಧೀನ ಪ್ರಕ್ರಿಯೆ ಆರಂಭವಾಗಿರಲಿಲ್ಲ.

ಟಿಡಿಆರ್‌ಗೆ ಒಪ್ಪದೆ ಹಣದ ರೂಪದ ಪರಿಹಾರವೇ ಬೇಕೆಂದು ನಿವಾಸಿಗಳು ಪಟ್ಟು ಹಿಡಿದಿದ್ದರು. ಹೀಗಾಗಿ, ಯೋಜನೆ ನನೆಗುದಿಗೆ ಬಿದ್ದಿತ್ತು. ಅಧಿಕಾರಿಗಳು ಮತ್ತು ಶಾಸಕ ಆರ್.ಮಂಜುನಾಥ್ ಸಮ್ಮುಖದಲ್ಲಿ ಆಸ್ತಿ ಮಾಲೀಕರ ಸಭೆ ಮಂಗಳವಾರ ನಡೆಯಿತು. ಹಣದ ರೂಪದ ಪರಿಹಾರವೇ ಬೇಕು ಎಂದು ಮಾಲೀಕರು ಪಟ್ಟು ಮುಂದುವರಿಸಿದರು. ಅಂತಿಮವಾಗಿ ಸಭೆಯಲ್ಲಿದ್ದ ಬಹುತೇಕರು ಟಿಡಿಆರ್‌ಗೆ ಸಮ್ಮತಿಸಿದರು.

'ರಸ್ತೆ ವಿಸ್ತರಣೆ ಆಗಲೇಬೇಕಿದ್ದು, ಟಿಡಿಆರ್ ಪಡೆದು ಜಾಗಬಿಟ್ಟು-ಕೊಡಲು ಶೇ 90ರಷ್ಟು ಜನರು ಒಪ್ಪಿದ್ದಾರೆ. ಹೀಗಾಗಿ, ಯೋಜನೆಗೆ ಮತ್ತೆ ಚಾಲನೆ ದೊರೆಯಲಿದೆ' ಎಂದು ಆರ್. ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

Edit with WPS Office

ಪ್ರಜಾವಾಣಿ

# ಕಾಮಗಾರಿ ಪರಿಶೀಲನೆಗೆ ಕೋರ್ಟ್ ಕಮಿಷನರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಿರುವ ಕಾಮಗಾರಿಯ ಗುಣಮಟ್ಟ ಪರಿಶೀಲನೆಗೆ ಕೋರ್ಟ್ ಕಮೀಷನರ್‌ಗಳನ್ನು ಹೈಕೋರ್ಟ್ ನೇಮಕ ಮಾಡಿ ಆದೇಶಿಸಿದೆ.

ರಸ್ತೆ ಗುಂಡಿ ಸಮರ್ಪಕವಾಗಿ ಮುಚ್ಚಲು ಬಿಬಿಎಂಪಿ ವಿಫಲವಾಗಿದೆ ಎಂದು ಆರೋಪಿಸಿ ಕೋರಮಂಗಲದ ವಿಜಯ್ ಮೆನನ್ ಮತ್ತಿತರರು 2017ರಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ, ಅರ್ಜಿದಾರರ ಪರ ವಕೀಲರನ್ನು ಕೋರ್ಟ್ ಕಮೀಷನರ್ ಆಗಿ ನೇಮಕ ಮಾಡಲಾಗಿದೆ. ಬಿಬಿಎಂಪಿ ರಸ್ತೆ ಗುಂಡಿಗಳನ್ನು ಸಂಪೂರ್ಣವಾಗಿ ಮುಚ್ಚಿದೆ ಎಂದು ನೀಡಿರುವ 74 ರಸ್ತೆಗಳಿಗೆ ಕೋರ್ಟ್ ಕಮೀಷನರ್‌ಗಳು ಭೇಟಿ ನೀಡಿ ಗುಣಮಟ್ಟ ಪರಿಶೀಲಿಸಿ ವರದಿ ಸಲ್ಲಿಸಬೇಕು' ಎಂದು ನಿರ್ದೇಶನ ನೀಡಿತು.

Edit with WPS Office

ಪ್ರಜಾವಾಣಿ

# ಕೆರೆಗಳ ಪುನಶ್ಚೇತನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ



ಬೆಳ್ಳಂದೂರು ಕೆರೆ ಪುನಶ್ಚೇತನ ಕಾಮಗಾರಿಗೆ ಶಾಸಕ ಅರವಿಂದ ಲಿಂಬಾವಳಿ ಚಾಲನೆ ನೀಡಿದರು

ವೈಟ್ ಫೀಲ್ಡ್: ಬಹುದಿನಗಳ ಬೇಡಿಕೆಯಾಗಿದ್ದ ಬೆಳ್ಳಂದೂರು ಹಾಗೂ ವರ್ತೂರು ಕೆರೆಗಳ ಪುನಶ್ಚೇತನ ಕಾಮಗಾರಿಗೆ ಶಾಸಕ ಅರವಿಂದ ಲಿಂಬಾವಳಿ ಗುರುವಾರ ಗುದ್ದಲಿ ಪೂಜೆ ನೆರವೇರಿಸಿದರು.

‘ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕುಖ್ಯಾತಿಯಾಗಿದ್ದ ಬೆಳ್ಳಂದೂರು, ವರ್ತೂರು ಕೆರೆಗಳ ಪರಿಸ್ಥಿತಿ ತುಂಬಾ ಹದಗೆಟ್ಟಿತ್ತು, ಈಗ ಉತ್ತಮ ಸ್ಥಿತಿಯಲ್ಲಿವೆ. ಮುಂದಿನ ದಿನಗಳಲ್ಲಿ ಅಭಿವೃದ್ಧಿ ಕಡೆಗೆ ಮುಖ ಮಾಡಲಿವೆ’ ಎಂದು ಅರವಿಂದ ಲಿಂಬಾವಳಿ ಹೇಳಿದರು.

‘ಹಲವು ಹೋರಾಟಗಳ ಬಳಿಕ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡುವ ಮೂಲಕ ಜನರ ನಂಬಿಕೆ ಉಳಿಸಿಕೊಂಡಿರುವ ಸಂತೋಷವಿದೆ. ಬೆಳ್ಳಂದೂರು ಕೆರೆಯ ಮೊದಲ ಹಂತದ ಅಭಿವೃದ್ಧಿಯನ್ನು ₹103.66 ಕೋಟಿ ವೆಚ್ಚದಲ್ಲಿ, ವರ್ತೂರು ಕೆರೆಯನ್ನು ₹53.81 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವುದು’ ಎಂದರು.

‘ನನ್ನ ಅವಧಿಯಲ್ಲಿ ಕ್ಷೇತ್ರದಲ್ಲಿ 40ಕ್ಕೂ ಹೆಚ್ಚು ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಈ ಕಾರ್ಯ ನಿರಂತರವಾಗಿ ನಡೆಯಲಿದೆ. ತಂತಿಬೇಲಿ, ನಡಿಗೆ ಪಥ, ಮಕ್ಕಳ ಉದ್ಯಾನ ನಿರ್ಮಾಣ ಕಾರ್ಯವನ್ನು ಕೆರೆ ಅಂಗಳದಲ್ಲಿ ಕೈಗೊಳ್ಳಲಾಗುವುದು’ ಎಂದರು. ಮುಖಂಡರಾದ ಮನೋಹರ್ ರೆಡ್ಡಿ, ಜಯಚಂದ್ರರೆಡ್ಡಿ, ಸುರೇಶ್, ರಾಜಾರೆಡ್ಡಿ, ರಾಜೇಶ್, ವರ್ತೂರು ಶ್ರೀಧರ್, ಮಹೇಂದ್ರ ಮೋದಿ ಹಾಜರಿದ್ದರು.

Edit with WPS Office

ಪ್ರಜಾವಾಣಿ

ಬೆಂಗಳೂರು ಮಿಷನ್– 2022 ಸಂವಾದದಲ್ಲಿ ಯಡಿಯೂರಪ್ಪ • ಬಿಬಿಎಂಪಿಯಲ್ಲಿ ತಂತ್ರಾಂಶ ಆಧಾರಿತ ಸೇವೆ

# ಎರಡು ವರ್ಷಗಳಲ್ಲಿ ರಾಜಧಾನಿಯ ಚಹರೆ ಬದಲು

ಪ್ರಜಾವಾಣಿ ವಾರ್ತೆ

[illegible]



[illegible]

## ಆರು ತಿಂಗಳಿಗೊಮ್ಮೆ ಪರಿಶೀಲನೆ

[illegible]

[illegible]

ಪ್ರಜಾವಾಣಿ

### ಸಾರ್ವಜನಿಕರು, ಪ್ರತಿಪಕ್ಷಗಳ ತೀವ್ರ ವಿರೋಧಕ್ಕೆ ಮಣಿದ ಬಿಬಿಎಂಪಿ

# ಕಸ ಸಂಗ್ರಹಕ್ಕೆ ಶುಲ್ಕ ಜಾರಿ ಸದ್ಯಕ್ಕಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕಸ ನಿರ್ವಹಣೆಗಾಗಿ ವಿಧಿಸುವ ಬಳಕೆದಾರರ ಸೇವಾ ಶುಲ್ಕವನ್ನು ವಿದ್ಯುತ್ ಬಿಲ್ ಜೊತೆಗೆ ಸಂಗ್ರಹಿಸುವುದನ್ನು ಸದ್ಯಕ್ಕೆ ಅನುಷ್ಠಾನಗೊಳಿಸದೇ ಇರಲು ಬಿಬಿಎಂಪಿ ನಿರ್ಧರಿಸಿದೆ.

ಕಸ ಬಳಕೆದಾರರ ಸೇವಾ ಶುಲ್ಕವನ್ನು ವಿದ್ಯುತ್ ಬಿಲ್ ಜೊತೆಗೆ ಸಂಗ್ರಹಿಸುವ ಬಗ್ಗೆ ಬಿಬಿಎಂಪಿ ಇತ್ತೀಚೆಗೆ ಪ್ರಸ್ತಾವನೆಯನ್ನು ಸಿದ್ಧಪಡಿಸಿತ್ತು. ಈ ಕುರಿತು ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ಇತ್ತೀಚೆಗೆ ಪತ್ರ ಬರೆದಿದ್ದರು.

ಈ ಪ್ರಸ್ತಾವನೆಗೆ ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾಗಿತ್ತು. ಕಾಂಗ್ರೆಸ್, ಆಮ್ ಆದ್ಮಿ ಪಕ್ಷಗಳು ಬಿಬಿಎಂಪಿಯ ಈ ನಿರ್ಧಾರವನ್ನು ಖಂಡಿಸಿ ಪ್ರತಿಭಟನೆ ನಡೆಸಿದ್ದರು.

‘ಕಸ ಬಳಕೆದಾರರ ಸೇವಾ ಶುಲ್ಕವನ್ನು ವಿದ್ಯುತ್ ಬಿಲ್ ಜೊತೆ ಸಂಗ್ರಹಿಸುವುದು ಪ್ರಸ್ತಾವದ ಹಂತದಲ್ಲಷ್ಟೇ ಇತ್ತು. ಈ ಬಗ್ಗೆ ಯಾವುದೇ ನಿರ್ಧಾರಗಳನ್ನು ಕೈಗೊಂಡಿರಲಿಲ್ಲ. ಸದ್ಯಕ್ಕೆ ಇದನ್ನು ಅನುಷ್ಠಾನಗೊಳಿಸದಿರಲು ನಿರ್ಧರಿಸಿದ್ದೇವೆ’ ಎಂದು ಮಂಜುನಾಥ ಪ್ರಸಾದ್ ತಿಳಿಸಿದರು.

2019ರ ಜು.30ರಂದು ಪಾಲಿಕೆ ಸಭೆಯಲ್ಲಿ ಅಂಗೀಕಾರಗೊಂಡ ಬಿಬಿಎಂಪಿಯ ಪೌರ ಕಸ ನಿರ್ವಹಣೆ ಉಪನಿಯಮಗಳ ಕುರಿತು ರಾಜ್ಯಪತ್ರದಲ್ಲಿ 2020ರ ಜೂನ್ 4ರಂದು ಅಧಿಸೂಚನೆ ಪ್ರಕಟವಾಗಿದೆ. ನಿತ್ಯ 100 ಕೆ.ಜಿಗಿಂತ ಕಡಿಮೆ ಕಸ ಉತ್ಪಾದಿಸುವ ಮನೆಗಳು /ಕಟ್ಟಡ ಸಮುಚ್ಚಯಗಳು ಮತ್ತು 100 ಕೆ.ಜಿ.ಗಿಂತ ಕಡಿಮೆ ಕಸ ಉತ್ಪಾದಿಸುವ ಹಾಗೂ 5000 ಚದರ ಅಡಿಗಿಂತ ಕಡಿಮೆ ವಿಸ್ತೀರ್ಣದ ವಾಣಿಜ್ಯ ಮತ್ತು ಇತರ ಕಟ್ಟಡಗಳಿಗೆ ಇದರ ನಿಯಮ 15 ಇ ಮತ್ತು ಜೆಡ್ ಎಫ್ ಪ್ರಕಾರ ಶುಲ್ಕ ನಿಗದಿ ಮಾಡಲಾಗಿದೆ.

## 23ಕ್ಕೆ ‘ಬಿಬಿಎಂಪಿ ಚಲೋ’ ಹೋರಾಟ



ಬೆಂಗಳೂರು: ಕಸ ಸಂಗ್ರಹಕ್ಕೆ ಮಾಸಿಕ ಶುಲ್ಕ ಸಂಗ್ರಹ ಮಾಡಲು ಮುಂದಾಗಿರುವ ಬಿಬಿಎಂಪಿ ನಡೆಯನ್ನು ವಿರೋಧಿಸಿ ಕಮ್ಯೂನಿಸ್ಟ್ ಪಕ್ಷವು (ಮಾರ್ಕ್ಸ್‌ವಾದಿ) ಡಿ.23ರಂದು ಬೆಳಿಗ್ಗೆ 10.30ಕ್ಕೆ ‘ಬಿಬಿಎಂಪಿ ಚಲೋ’ ಹೋರಾಟ ಹಮ್ಮಿಕೊಂಡಿದೆ.

‘ಕಸ ನಿರ್ವಹಣೆ ಶುಲ್ಕ ಹಾಗೂ ರಸ್ತೆ ಸಾರಿಗೆ ಕರ ಸಂಗ್ರಹ ವಿರೋಧಿಸಿ ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿಗಳು ಸಹಿ ಸಂಗ್ರಹಿಸುತ್ತಿವೆ. ಇದನ್ನು ಬಿಬಿಎಂಪಿ ಆಡಳಿತಾಧಿಕಾರಿಗೆ ಸಲ್ಲಿಸಲಾಗುತ್ತದೆ. ಆಸ್ತಿ ತೆರಿಗೆ ಸಂದಾಯ ಮಾಡುವಾಗಲೇ ಘನ ತ್ಯಾಜ್ಯ ಕರವನ್ನು ಪಾವತಿಸಿದ್ದರೂ ಈಗ ಮತ್ತೆ ಬಳಕೆದಾರರ ಶುಲ್ಕ ವಿಧಿಸುತ್ತಿರುವುದು ಖಂಡನೀಯ. ಕೋವಿಡ್ ಮತ್ತು ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಜನತೆಗೆ ಇನ್ನಷ್ಟು ಸಮಸ್ಯೆಯನ್ನು ತಂದೊಡ್ಡಲಾಗುತ್ತಿದೆ’ ಎಂದು ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ.ಎಸ್. ಉಮೇಶ್ ತಿಳಿಸಿದ್ದಾರೆ.

‘₹ 940 ಕೋಟಿಯ ಕಸ ನಿರ್ವಹಣೆಯ ವ್ಯವಹಾರವನ್ನು ಬಿಬಿಎಂಪಿ ಆಡಳಿತದಿಂದ ಹೊರಗುಳಿಸಿ, ಕಾರ್ಪೊರೇಟ್ ಕಂಪನಿಗಳ ಮೂಲಕ ಸಾರ್ವಜನಿಕ ಹಣ ಲೂಟಿ ಹೊಡೆಯಲು ಅವಕಾಶ ಮಾಡಿಕೊಡಲಾಗುತ್ತಿದೆ. ವಾಹನ ಮಾಲೀಕರು ಈಗಾಗಲೇ ರಸ್ತೆ ತೆರಿಗೆ ಪಾವತಿಸಿದ್ದರೂ ತನ್ನ ವ್ಯಾಪ್ತಿಯ ರಸ್ತೆಗಳ ನಿರ್ವಹಣೆಗೆಂದು ಆಸ್ತಿ ತೆರಿಗೆಯ ಮೇಲೆ ಶೇ 2ರಷ್ಟು ರಸ್ತೆ ಸಾರಿಗೆ ಕರವನ್ನು ವಿಧಿಸಲು ಬಿಬಿಎಂಪಿ ಮುಂದಾಗಿದೆ. ಇದು ಪಾಲಿಕೆಯ ದಿವಾಳಿಕೋರತನವನ್ನು ತೋರುತ್ತದೆ’ ಎಂದು ಪಕ್ಷದ ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಎಸ್. ಪ್ರತಾಪ್ ಸಿಂಹ ಬೇಸರ ವ್ಯಕ್ತಪಡಿಸಿದ್ದಾರೆ.

Edit with WPS Office

ಪ್ರಜಾವಾಣಿ

# ‘ಕಸಮುಕ್ತ ಶಿವಾಜಿನಗರ’ ವಿಶೇಷ ಅಭಿಯಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶಿವಾಜಿನಗರ ವಾರ್ಡ್‌ನಲ್ಲಿ ಕಸ ವಿಲೇವಾರಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಬಿಬಿಎಂಪಿಯು ‘ಕಸಮುಕ್ತ ಶಿವಾಜಿ ನಗರ’ ಅಭಿಯಾನ ಹಮ್ಮಿಕೊಂಡಿದೆ.

ಈ ಅಭಿಯಾನದ ಅನುಷ್ಠಾನದ ಕುರಿತು ಪೌರಕಾರ್ಮಿಕರು, ಕಸ ವಿಲೇವಾರಿ ಗುತ್ತಿಗೆದಾರರು, ಆಟೊಟಿಪ್ಪರ್ ಚಾಲಕರು/ ಸಹಾಯಕರು, ಸ್ವಯಂಸೇವಕರು ಹಾಗೂ ಇತರೆ ಸಂಬಂಧಪಟ್ಟ ಅಧಿಕಾರಿ/ ಸಿಬ್ಬಂದಿಗಳಿಗೆ ಶಿವಾಜಿನಗರದಲ್ಲಿ ಗುರುವಾರ ತರಬೇತಿ ನೀಡಲಾಯಿತು.

ಶಾಸಕ ರಿಜ್ವಾನ್ ಅರ್ಷದ್, ‘ರಸೆಲ್ ಮಾರುಕಟ್ಟೆ ಇರುವ ಈ ವಾರ್ಡ್‌ನಲ್ಲಿ ಹೆಚ್ಚು ವಾಣಿಜ್ಯ ಪ್ರದೇಶಗಳಿದ್ದು, ಇಲ್ಲಿ ಹೆಚ್ಚು ಕಸ ಉತ್ಪತ್ತಿ ಆಗುತ್ತದೆ. ಹಾಗಾಗಿ ಸಮರ್ಪಕ ಕಸ ವಿಲೇವಾರಿ ಪ್ರಕ್ರಿಯೆಗೆ ಈ ವಾರ್ಡ್‌ನಿಂದಲೇ ಚಾಲನೆ ನೀಡಲಾಗುತ್ತಿದೆ. ಪಾಲಿಕೆಯ ಪೌರಕಾರ್ಮಿಕರು ನಿತ್ಯ ಮನೆ-ಮನೆಗೆ ತೆರಳಿ ಕಸ ಸಂಗ್ರಹಿಸಲಿದ್ದಾರೆ. ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಕಸ ಹಾಕಿದವರಿಗೆ ದಂಡ ವಿಧಿಸಲಾಗುತ್ತದೆ. ಜೊತೆಗೆ ಬೀದಿಗಳ ಕಸ ಗುಡಿಸಲಾಗುತ್ತದೆ. ಕಸ ಸುರಿಯುವ ಸ್ಥಳಗಳನ್ನು (ಬ್ಲ್ಯಾಕ್ ಸ್ಪಾಟ್) ಗುರುತಿಸಿ ಸ್ವಚ್ಛಮಾಡಿ ಆ ಸ್ಥಳವನ್ನು ಸುಂದರೀಕರಣ ಮಾಡಲಾಗವುದು’ ಎಂದು ಅವರು ಹೇಳಿದರು.

ವಿಶೇಷ ಆಯುಕ್ತ (ಕಸ ವಿಲೇವಾರಿ) ಡಿ.ರಂದೀಪ್, ‘ಕಸ ವಿಲೇವಾರಿಗಾಗಿ ಪಾಲಿಕೆಯು ಶಿವಾಜಿನಗರ ವಾರ್ಡ್‌ನಲ್ಲಿ ತಳಮಟ್ಟದ ಯೋಜನೆ ರೂಪಿಸಿದೆ. ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡಲು ಪ್ರತಿ 750 ಮನೆಗಳಿಗೆ ಒಂದರಂತೆ ಬ್ಲಾಕ್ ರಚಿಸಲಾಗಿದೆ. ಈಗಾಗಲೇ 200 ಸ್ವಯಂಸೇವಕರು ಈ ಯೋಜನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಜನಪ್ರತಿನಿಧಿಗಳು, ಸಾರ್ವಜನಿಕರು ಸಹಕಾರ ನೀಡಿದರೆ ಶೀಘ್ರವೇ ಇಲ್ಲಿನ ಕಸದ ಸಮಸ್ಯೆ ನಿವಾರಣೆಯಾಗಲಿದೆ’ ಎಂದರು.

ಜಂಟಿ ಆಯುಕ್ತ (ಕಸ ವಿಲೇವಾರಿ) ಸರ್ಫರಾಜ್ ಖಾನ್, ‘ಆಟೊ ಟಿಪ್ಪರ್ ಚಾಲಕರು/ಸಹಾಯಕರು ಕಸ ಸಂಗ್ರಹಿಸಲು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಮನೆಗಳಿಗೆ ಹೋಗಬೇಕು. ಹಸಿ, ಒಣ ಹಾಗೂ ನೈರ್ಮಲ್ಯ (ಸ್ಯಾನಿಟರಿ) ಕಸಗಳನ್ನು ಬೇರ್ಪಡಿಸಿ ಕೊಡುವ ಬಗ್ಗೆ ಮಾಹಿತಿ ನೀಡಬೇಕು. ಯಾವ ದಿನ ಒಣ ಕಸ ಸಂಗ್ರಹಿಸಲಾಗುತ್ತದೆ ಎಂಬ ಮುಂಚಿತವಾಗಿ ತಿಳಿಸಬೇಕು’ ಎಂದು ಸಿಬ್ಬಂದಿಗೆ ನಿರ್ದೇಶನ ನೀಡಿದರು.

Edit with WPS Office

ಪ್ರಜಾವಾಣಿ

# ‘ಕಸಮುಕ್ತ ಶಿವಾಜಿನಗರ’ ವಿಶೇಷ ಅಭಿಯಾನ

ಪ್ರಜಾವಾಣಿ ವಾರ್ತೆ

---

**ಬೆಂಗಳೂರು:** ಶಿವಾಜಿನಗರ ವಾರ್ಡ್‌ನಲ್ಲಿ ಕಸ ವಿಲೇವಾರಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಬಿಬಿಎಂಪಿಯು ‘ಕಸಮುಕ್ತ ಶಿವಾಜಿ ನಗರ’ ಅಭಿಯಾನ ಹಮ್ಮಿಕೊಂಡಿದೆ.

ಈ ಅಭಿಯಾನದ ಅನುಷ್ಠಾನದ ಕುರಿತು ಪೌರಕಾರ್ಮಿಕರು, ಕಸ ವಿಲೇವಾರಿ ಗುತ್ತಿಗೆದಾರರು, ಆಟೊಟಿಪ್ಪರ್ ಚಾಲಕರು/ ಸಹಾಯಕರು, ಸ್ವಯಂಸೇವಕರು ಹಾಗೂ ಇತರೆ ಸಂಬಂಧಪಟ್ಟ ಅಧಿಕಾರಿ/ ಸಿಬ್ಬಂದಿಗಳಿಗೆ ಶಿವಾಜಿನಗರದಲ್ಲಿ ಗುರುವಾರ ತರಬೇತಿ ನೀಡಲಾಯಿತು.

ಶಾಸಕ ರಿಜ್ವಾನ್ ಅರ್ಷದ್, ‘ರಸೆಲ್ ಮಾರುಕಟ್ಟೆ ಇರುವ ಈ ವಾರ್ಡ್‌ನಲ್ಲಿ ಹೆಚ್ಚು ವಾಣಿಜ್ಯ ಪ್ರದೇಶಗಳಿದ್ದು, ಇಲ್ಲಿ ಹೆಚ್ಚು ಕಸ ಉತ್ಪತ್ತಿ ಆಗುತ್ತದೆ. ಹಾಗಾಗಿ ಸಮರ್ಪಕ ಕಸ ವಿಲೇವಾರಿ ಪ್ರಕ್ರಿಯೆಗೆ ಈ ವಾರ್ಡ್‌ನಿಂದಲೇ ಚಾಲನೆ ನೀಡಲಾಗುತ್ತಿದೆ. ಪಾಲಿಕೆಯ ಪೌರಕಾರ್ಮಿಕರು ನಿತ್ಯ ಮನೆ-ಮನೆಗೆ ತೆರಳಿ ಕಸ ಸಂಗ್ರಹಿಸಲಿದ್ದಾರೆ. ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಕಸ ಹಾಕಿದವರಿಗೆ ದಂಡ ವಿಧಿಸಲಾಗುತ್ತದೆ. ಜೊತೆಗೆ ಬೀದಿಗಳ ಕಸ ಗುಡಿಸಲಾಗುತ್ತದೆ. ಕಸ ಸುರಿಯುವ ಸ್ಥಳಗಳನ್ನು (ಬ್ಲ್ಯಾಕ್ ಸ್ಪಾಟ್) ಗುರುತಿಸಿ ಸ್ವಚ್ಛಮಾಡಿ ಆ ಸ್ಥಳವನ್ನು ಸುಂದರೀಕರಣ ಮಾಡಲಾಗವುದು’ ಎಂದು ಅವರು ಹೇಳಿದರು.

ವಿಶೇಷ ಆಯುಕ್ತ (ಕಸ ವಿಲೇವಾರಿ) ಡಿ.ರಂದೀಪ್, ‘ಕಸ ವಿಲೇವಾರಿಗಾಗಿ ಪಾಲಿಕೆಯು ಶಿವಾಜಿನಗರ ವಾರ್ಡ್‌ನಲ್ಲಿ ತಳಮಟ್ಟದ ಯೋಜನೆ ರೂಪಿಸಿದೆ. ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡಲು ಪ್ರತಿ 750 ಮನೆಗಳಿಗೆ ಒಂದರಂತೆ ಬ್ಲಾಕ್ ರಚಿಸಲಾಗಿದೆ. ಈಗಾಗಲೇ 200 ಸ್ವಯಂಸೇವಕರು ಈ ಯೋಜನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಜನಪ್ರತಿನಿಧಿಗಳು, ಸಾರ್ವಜನಿಕರು ಸಹಕಾರ ನೀಡಿದರೆ ಶೀಘ್ರವೇ ಇಲ್ಲಿನ ಕಸದ ಸಮಸ್ಯೆ ನಿವಾರಣೆಯಾಗಲಿದೆ’ ಎಂದರು.

ಜಂಟಿ ಆಯುಕ್ತ (ಕಸ ವಿಲೇವಾರಿ) ಸರ್ಫರಾಜ್ ಖಾನ್, ‘ಆಟೊ ಟಿಪ್ಪರ್ ಚಾಲಕರು/ಸಹಾಯಕರು ಕಸ ಸಂಗ್ರಹಿಸಲು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಮನೆಗಳಿಗೆ ಹೋಗಬೇಕು. ಹಸಿ, ಒಣ ಹಾಗೂ ನೈರ್ಮಲ್ಯ (ಸ್ಯಾನಿಟರಿ) ಕಸಗಳನ್ನು ಬೇರ್ಪಡಿಸಿ ಕೊಡುವ ಬಗ್ಗೆ ಮಾಹಿತಿ ನೀಡಬೇಕು. ಯಾವ ದಿನ ಒಣ ಕಸ ಸಂಗ್ರಹಿಸಲಾಗುತ್ತದೆ ಎಂಬ ಮುಂಚಿತವಾಗಿ ತಿಳಿಸಬೇಕು’ ಎಂದು ಸಿಬ್ಬಂದಿಗೆ ನಿರ್ದೇಶನ ನೀಡಿದರು.

Edit with WPS Office

ಕನ್ನಡಪ್ರಭ

# ಬೆಂಗಳೂರಿನ ಅಭಿವೃದ್ಧಿಗಾಗಿ ಮಿಷನ್-2022

## ವಿಶ್ವ ದರ್ಜೆಯ ನಗರವಾಗಿಸುವ ಯೋಜನೆ ಘೋಷಿಸಿದ ಸಿಎಂ ಬೆಂಗಳೂರಿನ ಸಮಸ್ಯೆಗೆ ಪರಿಹಾರ, ದೂರದೃಷ್ಟಿಯ ಅಭಿವೃದ್ಧಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ದೇಶ ಸ್ವಾತಂತ್ರ್ಯಗೊಂಡು 2022ಕ್ಕೆ 75 ವರ್ಷ ಪೂರ್ಣಗೊಳ್ಳುವ ಹಿನ್ನೆಲೆಯಲ್ಲಿ ಬೆಂಗಳೂರನ್ನು ವಿಶ್ವ ದರ್ಜೆ ನಗರವನ್ನಾಗಿಸುವ ಉದ್ದೇಶದೊಂದಿಗೆ ರಾಜ್ಯ ಸರ್ಕಾರ 'ಬೆಂಗಳೂರು ಮಿಷನ್-2022' ಕಾರ್ಯಯೋಜನೆಯನ್ನು ಘೋಷಿಸಿದೆ.

ವಿಧಾನಸೌಧದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ 'ಬೆಂಗಳೂರು ಮಿಷನ್-2022' ಕಾರ್ಯಯೋಜನೆಯ ನೀಲ ನಕ್ಷೆಯನ್ನು ರಾಜ್ಯದ ಜನರ ಮುಂದಿಟ್ಟ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು, ಬೆಂಗಳೂರು ಕೇವಲ ರಾಜ್ಯದ ರಾಜಧಾನಿ ಮಾತ್ರವಲ್ಲ, ಇದು ಲಕ್ಷಾಂತರ ಕನಸಿನ ನಗರ. ಆರ್ಥಿಕ ರಾಜಧಾನಿ. ಉದ್ಯಮ ಹಾಗೂ ಉದ್ಯೋಗ ಸೃಷ್ಟಿಸುವ ವಿಶ್ವ ಮಾನ್ಯತೆ ಪಡೆದ ನಗರ. ಈ ಮಹಾನಗರಕ್ಕೆ ವಿಶ್ವ ದರ್ಜೆಯ ಸೌಲಭ್ಯ ಕಲ್ಪಿಸುವುದು ಸರ್ಕಾರದ ಮಹೋದ್ದೇಶ. ಈ ಗುರಿಯನ್ನು ಮುಂದಿನ ಎರಡು ವರ್ಷದಲ್ಲಿ ಸಾಧಿಸುವ ಮಹತ್ವಾಕಾಂಕ್ಷೆಯನ್ನು ರಾಜ್ಯ ಸರ್ಕಾರ ಹೊಂದಿದೆ. ಇದಕ್ಕಾಗಿ ಮಿಷನ್-2022 ರೂಪಿಸಲಾಗಿದೆ ಎಂದರು.

ಬೆಂಗಳೂರು ನಗರ ಎದುರಿಸುತ್ತಿರುವ ಪ್ರಮುಖ ಸವಾಲು, ಸಮಸ್ಯೆಗಳನ್ನು ಕೇಂದ್ರೀಕರಿಸಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. ನಾಗರಿಕ ಸಮಸ್ಯೆಗಳನ್ನು ಕೂಲಂಕಷವಾಗಿ ಅಧ್ಯಯನ ನಡೆಸಿ, ಸ್ಪಷ್ಟ ಮುನ್ನೋಟದೊಂದಿಗೆ ಸಿದ್ಧಪಡಿಸಿರುವ ಈ ಕಾರ್ಯಯೋಜನೆಯು ಬೆಂಗಳೂರನ್ನು ಎಲ್ಲ ಆಯಾಮಗಳಲ್ಲಿಯೂ ವಿಶ್ವ ದರ್ಜೆಯ ನಗರವಾಗಿ ಮಾರ್ಪಡಿಸಲಿದೆ ಎಂದು ತಿಳಿಸಿದರು.

ಬೆಂಗಳೂರಿನ ಪ್ರಗತಿ ವಿಚಾರದಲ್ಲಿ ಅತೀವ ಕಾಳಜಿಯನ್ನು ರಾಜ್ಯ ಸರ್ಕಾರ ಹೊಂದಿದೆ. ವಿಜ್ಞಾನದ ರಾಜಧಾನಿ, ಮಾಹಿತಿ ತಂತ್ರಜ್ಞಾನದ ಪರಮೋಚ್ಚ ನೆಲೆ, ಭಾರತದ ಸಿಲಿಕಾನ್ ಕಣಿವೆ ಇತ್ಯಾದಿ ವಿಶೇಷಣಗಳುಳ್ಳ ಬೆಂಗಳೂರಿನ ಹಿರಿಮೆಗೆ ಮುಕ್ಕಾಗದಂತೆ ಯೋಜನೆಗಳನ್ನು ರೂಪಿಸಲು ಸರ್ಕಾರದ್ದು ಬದ್ಧವಾಗಿದೆ. ಸಂಚಾರ [illegible] ಪ್ರಮ, ಹಾಗು ಬೆಂಗಳೂರು ಕಾರ್ಯಕ್ರಮ ಮೂಲಕ ನಗರದಲ್ಲಿ ಹೆಚ್ಚು ಹಸಿರು ಪ್ರದೇಶ ಸೃಷ್ಟಿಸಿ ಉದ್ಯಾನ ನಗರಿಯ ಗರಿಮೆಯನ್ನು ಪುನರ್ ಸ್ಥಾಪಿಸುವುದು ನಮ್ಮ ಉದ್ದೇಶ.



### ಮಿಷನ್ 2022ನಲ್ಲಿ ಏನಿದೆ?

- ಸುಗಮ ಸಂಚಾರಕ್ಕಾಗಿ ರಸ್ತೆಗಳ ಅಭಿವೃದ್ಧಿ
- 25 ಕೆರೆಗಳ ಪುನಶ್ಚೇತನಕ್ಕೆ ಕ್ರಮ
- ತ್ಯಾಜ್ಯ ವಿಂಗಡಣೆ, ವೈಜ್ಞಾನಿಕ ನಿರ್ವಹಣೆಗೆ ಕ್ರಮ
- ಉದ್ಯಾನ, ಕೆರೆಅಂಗಳ ಮೂಲಕ ಬೆಂಗಳೂರಿಗಿದ್ದ ಗ್ರೀನ್‌ಸಿಟಿ ಹೆಗ್ಗಳಿಕೆ ಮರುಸ್ಥಾಪನೆ
- ಸಾರ್ವಜನಿಕರ ಜತೆ ಸಂಪರ್ಕಕ್ಕೆ ಡಿಜಿಟಲ್ ವೇದಿಕೆ
- ರಾಜಕಾಲುವೆ ಒತ್ತುವರಿ ತೆರವು ಮುಂದುವರಿಕೆ
- ಪಾರ್ಕಿಂಗ್ ಸಮಸ್ಯೆ ನಿವಾರಿಸಲು ಪಾರ್ಕಿಂಗ್ ನೀತಿ



Edit with WPS Office

ಕನ್ನಡಪ್ರಭ

# ಬೆಂಗಳೂರು ಅಭಿವೃದ್ಧಿಗಾಗಿ ಮಿಷನ್‌-2022 ಯೋಜನೆ

2ನೇ ಪುಟದಿಂದ

ಜನರ ಜತೆಗೆ ಬೆಂಗಳೂರನ್ನು ಸ್ವಚ್ಛ, ಸುಂದರ ನಗರವನ್ನಾಗಿ ಮಾರ್ಪಡಿಸುವುದು, ಜನರ ಕುಂದು ಕೊರತೆಗಳಿಗೆ ಶೀಘ್ರ ಸ್ಪಂದಿಸುವುದು, [illegible] ಸರ್ಕಾರದ ಗುರಿ ಎಂದು ತಿಳಿಸಿದರು.

**ಮೋದಿ ಸಂಕಲ್ಪ:** ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ದೆಹಲಿಗೆ ನೀಡಿದ ಪ್ರಥಮ ಭೇಟಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರು ಮಹಾನಗರದ ವೈಶಿಷ್ಟ್ಯದ ಬಗ್ಗೆ ಪ್ರಸ್ತಾಪಿಸಿ ಅಭಿವೃದ್ಧಿಯಲ್ಲಿ ಬೆಂಗಳೂರು ನಗರ ಮುನ್ನಡೆಯಬೇಕೆಂದು ಸೂಚಿಸಿದ್ದರು. ಅಲ್ಲದೆ, ಪ್ರತಿ ಬಾರಿಯ ಭೇಟಿ ವೇಳೆಯಲ್ಲಿಯೂ ಬೆಂಗಳೂರು ಮಹಾನಗರದ ಅಭ್ಯುದಯಶೀಲತೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಾಯುಯಾನ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಕ್ಷೇತ್ರದ ಆವಿಷ್ಕಾರಗಳು, ಅಂತಾರಾಷ್ಟ್ರೀಯ ಮಟ್ಟದ ಸಂಶೋಧನಾ ಕೇಂದ್ರಗಳು ಮತ್ತು ಉನ್ನತ ಅಧ್ಯಯನ ಸಂಸ್ಥೆಗಳ ಬಗ್ಗೆ ವಿಶೇಷ ಕಾಳಜಿಯಿಂದ ಪ್ರಸ್ತಾಪಿಸುತ್ತಿದ್ದರು ಎಂದು ಹೇಳಿದರು.

**ಮೆಟ್ರೋ ಸಾಮರ್ಥ್ಯ 10 ಲಕ್ಷಕ್ಕೆ ವೃದ್ಧಿ:** ನಮ್ಮ ಮೆಟ್ರೋ ಪ್ರಸ್ತುತ ಪ್ರತಿನಿತ್ಯ 7 ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯುವ ಸಾಮರ್ಥ್ಯ ಹೊಂದಿದೆ. ಇದನ್ನು 2022ರ ವೇಳೆಗೆ 10 ಲಕ್ಷ ಪ್ರಯಾಣಿಕರನ್ನು ಕೊಂಡೊಯ್ಯುವ ಸಾಮರ್ಥ್ಯಕ್ಕೆ ಹೆಚ್ಚಿಸುವುದು ಸರ್ಕಾರದ ಉದ್ದೇಶವಾಗಿದೆ. ಅತಿ ಹೆಚ್ಚು ಸಂಚಾರ ದಟ್ಟಣೆ ಇರುವ ಹೊರ ವರ್ತುಲ ರಸ್ತೆ ಸೇರಿದಂತೆ 12 ಪ್ರಮುಖ ರಸ್ತೆಗಳನ್ನು ಗುರುತಿಸಲಾಗಿದೆ. ಕೇಂದ್ರ ವಾಣಿಜ್ಯ ಕಾರಿಡಾರ್ ಒಳಗೊಂಡಂತೆ ಈ ರಸ್ತೆಗಳನ್ನು ಟೆಂಡರ್‌ಶ್ಯೂರ್ ಮೂಲಕ ಅಭಿವೃದ್ಧಿ ಪಡಿಸಲಾಗುವುದು. ರಸ್ತೆ ರಸ್ತೆಗಳು ಅತ್ಯುತ್ತಮ ದರ್ಜೆಗೆ, ಸಂಚಾರ ಪಥಗಳು ಅಗಲವಾಗಿ ಮತ್ತು ಸಮರ್ಪಕ ಹೊಂದಿದ ಸೈಕಲ್ ವ್ಯವಸ್ಥೆಗಳು ಸಹ ವಾಹನಗಳ ಸುಗಮ ಸಂಚಾರಕ್ಕೆ ಅನುವುಮಾಡಿಕೊಡಲಿದೆ ಎಂದು ಅಭಿಪ್ರಾಯಪಟ್ಟರು.



Edit with WPS Office

# 'ಬೆಂದ'ಕಾಳೂರಿಗೆ ನವಚೈತನ್ಯ

**ಸಂಚಾರ ದಟ್ಟಣೆ ನಿವಾರಣೆ, ರಸ್ತೆ ಅಭಿವೃದ್ಧಿಗೆ ಕ್ರಮ | ಸಾರ್ವಜನಿಕ ಸಾರಿಗೆ, ಎಲೆಕ್ಟ್ರಿಕಲ್ ವಾಹನಗಳಿಗೆ ಉತ್ತೇಜನ**
**ತ್ಯಾಜ್ಯ ನಿರ್ವಹಣೆಗೆ ಹೈಟೆಕ್ ಸ್ಪರ್ಶ | ನಾಗರಿಕ ಸೇವೆಗೆ ಡಿಜಿಟಲ್ ವೇದಿಕೆ | ಬೆಂಗ್ಳೂರು ಮಿಷನ್ 2022 ಘೋಷಣೆ**

ಬೆಂಗಳೂರು ಅಭಿವೃದ್ಧಿಗಾಗಿ ರೂಪಿಸಿರುವ ಬೆಂಗಳೂರು ಮಿಷನ್-2022 ಕಾರ್ಯಯೋಜನೆಯ ನೀಲಿನಕ್ಷೆಯಲ್ಲಿ, ಸುಗಮ ಸಂಚಾರ, ಸ್ವಚ್ಛ ಬೆಂಗಳೂರು, ಹಸಿರು ಬೆಂಗಳೂರು ಮತ್ತು ಜನಸಂಪರ್ಕ ಆದ್ಯತೆ ನೀಡಿ ಬೆಂಗಳೂರು ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ಭವಿಷ್ಯದಲ್ಲಿ ಬೆಂಗಳೂರು ಹೇಗಿರಬೇಕು ಎಂದು ರೂಪಿಸಿರುವ ನೀಲನಕ್ಷೆಯ ಬಗ್ಗೆ ಬಿಬಿಎಂಪಿ ವಿಶೇಷ ಆಧಿಕಾರಿ ಗೌರವ ಗುಪ್ತಾ ಅವರು ವಿಸ್ತೃತವಾಗಿ ವಿವರಿಸಿದ್ದು ಹೀಗೆ...




ವಿಧಾನಸೌಧದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ 'ಬೆಂಗಳೂರು ಮಿಷನ್-2022' ಕಾರ್ಯಯೋಜನೆಯ ನೀಲ ನಕ್ಷೆಯನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬಿಡುಗಡೆಗೊಳಿಸಿದರು.

## 'ನನ್ನ ಕಸ ನನ್ನ ಜವಾಬ್ದಾರಿ'



ಬೆಂಗಳೂರು ಎದುರಿಸುತ್ತಿರುವ ಸವಾಲುಗಳಲ್ಲಿ ವ್ಯವಸ್ಥಿತ ತ್ಯಾಜ್ಯ ನಿರ್ವಹಣೆಯೂ ಒಂದು. ತ್ಯಾಜ್ಯ ವಿಂಗಡಣೆ, ವೈಜ್ಞಾನಿಕ ನಿರ್ವಹಣೆಗೆ ರಾಜ್ಯ ಸರ್ಕಾರವು ಒತ್ತು ನೀಡಿದೆ. 1.3 ಕೋಟಿಗೂ ಹೆಚ್ಚು ಜನಸಂಖ್ಯೆ ಇದ್ದು, ಪ್ರತಿದಿನ ಸುಮಾರು 5800 ಮೆಟ್ರಿಕ್ ಟನ್ ತ್ಯಾಜ್ಯ ಉತ್ಪತ್ತಿ ಆಗುತ್ತಿದೆ. ಪರಿಣಾಮಕಾರಿಯಾಗಿ ತ್ಯಾಜ್ಯ ನಿರ್ವಹಣೆ ಮಾಡಲು ಇದಕ್ಕೆ ವ್ಯವಸ್ಥಿತ ರೂಪ ನೀಡಲು ಉದ್ದೇಶಿಸಲಾಗಿದೆ. ತಂತ್ರಜ್ಞಾನ ನೆರವಿನಿಂದ ಘನತ್ಯಾಜ್ಯ ಸಂಗ್ರಹ ಮತ್ತು ಸಾಗಾಣಿಕೆಯನ್ನು ನಿರ್ವಹಿಸುವುದು ಹಾಗೂ ನಿಗಾ ವಹಿಸುವುದು. ಅಲ್ಲದೇ, ವ್ಯವಸ್ಥೆಯ ಮೇಲೆ ಹೆಚ್ಚಿನ ನಿಗಾವಹಿಸಲು ಜಿಪಿಎಸ್ ಅಳವಡಿಕೆಗೆ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗಿದೆ. ವೈಜ್ಞಾನಿಕ ತ್ಯಾಜ್ಯ ವಿಲೇವಾರಿಗೆ ಸಮುದಾಯದ ಸಹಯೋಗ, ಸಹಭಾಗಿತ್ವ ಅತ್ಯಂತ ಪ್ರಮುಖವಾದುದು. ಈ ಹಿನ್ನೆಲೆಯಲ್ಲಿ 'ನನ್ನ ಕಸ ನನ್ನ ಜವಾಬ್ದಾರಿ' ಎಂಬ ತತ್ವವನ್ನು ಪ್ರತಿಯೊಬ್ಬ ನಾಗರಿಕರೂ ಅಳವಡಿಸಿಕೊಳ್ಳಬೇಕಾದದ್ದು ಅತಿ ಅಗತ್ಯವಾಗಿದೆ. ಇದಕ್ಕಾಗಿ ಸಮುದಾಯದಲ್ಲಿ ಹಂತಹಂತವಾಗಿ ತರಬೇತಿಗಳನ್ನು ಏರ್ಪಡಿಸಲಾಗುವುದು. ಪ್ರತಿ ವಲಯದಲ್ಲಿ ಗೊಬ್ಬರ ತಯಾರಿಕೆ ಮತ್ತು ಹಸಿತ್ಯಾಜ್ಯ ಮನೆಗಳ ಹಂತದಲ್ಲಿ ಸಮುದಾಯಕ್ಕೆ ಮಾಹಿತಿ ಮತ್ತು ಮಾರ್ಗದರ್ಶನ ನೀಡಲು ಕಲಿಕಾ ಕೇಂದ್ರಗಳ ಸ್ಥಾಪನೆ, ಸ್ಥಳೀಯವಾಗಿಯೇ ಗೊಬ್ಬರ ಪರಿವರ್ತನಾ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಮನೆಯಲ್ಲಿಯೇ ಹಸಿ ತ್ಯಾಜ್ಯ ಸಂಸ್ಕರಣೆಯನ್ನು ಪ್ರೋತ್ಸಾಹಿಸಲಾಗುವುದು.

## ಆನ್‌ಲೈನ್‌ನಲ್ಲಿ ಸೇವೆ



ದಿನೇ ದಿನೇ ಬೆಳೆಯುತ್ತಿರುವ ನಗರದಲ್ಲಿ ನಾಗರಿಕರೊಂದಿಗೆ ನಿರಂತರ ಸಂವಹನ ನಡೆಸಲು, ನಾಗರಿಕ ಸೇವೆಗಳನ್ನು ಒದಗಿಸಲು ಮತ್ತು ಸಾರ್ವಜನಿಕ ಕುಂದುಕೊರತೆ ನಿವಾರಿಸಲು ಸರ್ಕಾರವು ಪರಿಣಾಮಕಾರಿ ಡಿಜಿಟಲ್ ವೇದಿಕೆ ನಿರ್ಮಿಸುವ ಗುರಿಯನ್ನು ಹೊಂದಿದೆ. ನಾಗರಿಕರೊಂದಿಗೆ ಸ್ಥಳೀಯ ಆಡಳಿತ ಸಂಸ್ಥೆಯ ಸಂಪರ್ಕ, ಬಾಂಧವ್ಯವೂ ಉತ್ತಮವಾಗಿರಬೇಕು. ಬಿಬಿಎಂಪಿ ಮತ್ತು ಇತರ ಪ್ರಮುಖ ಇಲಾಖೆಗಳು ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ ಬಗೆಹರಿಸಬೇಕು. ಜನರ ದೈನಂದಿನ ಬದುಕಿಗೆ ಅಗತ್ಯ ಸೇವಾ ಸೌಲಭ್ಯಗಳಾದ ಖಾತಾ, ತೆರಿಗೆ ಪಾವತಿ, ಜನನ ಮತ್ತು ಮರಣ ಪ್ರಮಾಣಪತ್ರ ವಿತರಣೆ, ವ್ಯಾಪಾರ ಪರವಾನಗಿ ಮುಂತಾದ ನಾಗರಿಕ ಸೇವೆಗಳು ಏಕೀಕೃತ ಡಿಜಿಟಲ್ ವೇದಿಕೆಯಲ್ಲಿ ಪಡೆಯಲು ಅನುವು ಮಾಡಿಕೊಡುವುದು. ಅನ್ಯ ನೋಂದಣಿಗೆ ಆನ್‌ಲೈನ್ ಮೂಲಕ ಸಮಯ ನಿಗದಿ ಪಡಿಸುವುದರೊಂದಿಗೆ ಯಾವ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಬೇಕಾದರೂ ನೋಂದಾಯಿಸಿಕೊಳ್ಳಬಹುದಾಗಿದೆ.


## ಸುಗಮ ಸಂಚಾರಕ್ಕೆ ತಂತ್ರಜ್ಞಾನದ ಮೊರೆ

ಬೆಂಗಳೂರು ನಗರದ ವ್ಯಾಪ್ತಿ ಹೆಚ್ಚಾಗುತ್ತಿದ್ದು, ವಾಹನ ದಟ್ಟಣೆಯೂ ಹೆಚ್ಚಿದೆ. ಸಂಚಾರ ದಟ್ಟಣೆ ಬೆಂಗಳೂರಿಗರು ಎದುರಿಸುತ್ತಿರುವ ದೊಡ್ಡ ಸವಾಲಾಗಿದೆ. ಸಾರ್ವಜನಿಕ ಸಾರಿಗೆ ಬಳಕೆಗೆ ಉತ್ತೇಜನ ನೀಡಲು ಆದ್ಯತೆ ನೀಡಲಾಗಿದೆ. ಅತ್ಯುತ್ತಮ ರಸ್ತೆಗಳ ಅಭಿವೃದ್ಧಿ ಮತ್ತು ಸಂಚಾರ ವ್ಯವಸ್ಥೆಯಲ್ಲಿ ತಂತ್ರಜ್ಞಾನದ ಬಳಕೆಯ ಮೂಲಕ ಮುಂದಿನ ದಿನದಲ್ಲಿ ಸುಗಮ ಸಂಚಾರ ವ್ಯವಸ್ಥೆ ರೂಪಿಸಲು ಉದ್ದೇಶಿಸಲಾಗಿದೆ. 12 ಅತಿ ದಟ್ಟಣೆಯ ರಸ್ತೆಗಳನ್ನು ಗುರುತಿಸಿ ಒಟ್ಟು 190 ಕಿ.ಮೀ. ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ, ಅತ್ಯುತ್ತಮ ನಿರ್ವಹಣೆ ಮಾಡುವ ಯೋಜನೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ಮೂಲಕ ಮೂಲಕ ತ್ವರಿತವಾಗಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ರಸ್ತೆ ನಿರ್ಮಾಣ ಕಾರ್ಯ ಶೀಘ್ರ ಪೂರ್ಣಗೊಳಿಸುವುದು. ಬೆಂಗಳೂರು ನಗರದಲ್ಲಿ ವಾರ್ಷಿಕ ನಿರ್ವಹಣಾ ಒಪ್ಪಂದದ ಮೂಲಕ ಸುಮಾರು 400 ಕಿ.ಮೀ. ಉದ್ದದ ಪ್ರಮುಖ ಸಂಪರ್ಕ ರಸ್ತೆಗಳ ಅತ್ಯುತ್ತಮ ನಿರ್ವಹಣೆ. ರಸ್ತೆ ಸುರಕ್ಷತಾ ಪರಿಕರಗಳನ್ನು ಅಳವಡಿಸುವ ಮೂಲಕ ಪ್ರಯಾಣಿಕರ ಸುರಕ್ಷತೆಯನ್ನು ಖಾತ್ರಿ ಪಡಿಸುವುದು ಮತ್ತು ಸಮನ್ವಯ ಹೊಂದಿದ ಸಿಗ್ನಲ್ ದೀಪಗಳ ಅಳವಡಿಕೆ, ವಿದ್ಯುತ್ ಚಾಲಿತ ಸಮೂಹ ಸಾರಿಗೆ ವ್ಯವಸ್ಥೆಗಳಿಗೆ ಉತ್ತೇಜನ ನೀಡಲು ಬೆಂಗಳೂರು ಮಿಷನ್‌ನಲ್ಲಿ ಆದ್ಯತೆ ನೀಡಲಾಗಿದೆ. ಉಪ ನಗರ ರೈಲು ಯೋಜನೆಯಡಿ 1745 ಕೋಟಿ ರು.




ಬೆಟ್ಟದಲ್ಲಿ ಬೈಯಪ್ಪನಹಳ್ಳಿ- ಹೊಸೂರು ಮತ್ತು ಯಶವಂತಪುರ-ಚನ್ನಸಂದ್ರ ಟ್ರ್ಯಾಕ್ ಡಬ್ಲಿಂಗ್ ಕಾಮಗಾರಿ ಪ್ರಗತಿಯಲ್ಲಿದೆ. ಅಲ್ಲದೇ, ಕೇಂದ್ರ ಸರ್ಕಾರವು 15,767 ಕೋಟಿ ರು. ವೆಚ್ಚದಲ್ಲಿ ನಾಲ್ಕು ಕಾರಿಡಾರ್‌ಗಳ ಕಾಮಗಾರಿಗಳಿಗೆ ಮಂಜೂರಾತಿ ನೀಡಿದೆ. ಒಟ್ಟು 148 ಕಿ.ಮೀ. ಉದ್ದದ ಉಪನಗರ ರೈಲು ಯೋಜನೆಯು ಆರು ವರ್ಷದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

## ಸದ್ಯದಲ್ಲೇ ರಾಜಕಾಲುವೆ ಒತ್ತುವರಿ ತೆರವು




ನಗರದಲ್ಲಿ ರಾಜಕಾಲುವೆಗಳ ಒತ್ತುವರಿ ತೆರವಿಗೆ ಹೈಕೋರ್ಟ್ ಅನುಮತಿ ನೀಡಿದ್ದು ಸದ್ಯದಲ್ಲೇ ತೆರವು ಕಾರ್ಯಾಚರಣೆ ನಡೆಸಲಾಗುವುದು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಹೇಳಿದ್ದಾರೆ. ಬೆಂಗಳೂರಿನ ಸುಸ್ಥಿರ ಅಭಿವೃದ್ಧಿಗೆ 'ಬೆಂಗಳೂರು ಮಿಷನ್-2022' ಎಂಬ ಗುರಿಯನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅವರು ನಿಗದಿ ಮಾಡಿದ್ದಾರೆ. ಇದರಂತೆ ನಗರದಲ್ಲಿ ಪ್ರವಾಹಸ್ಥಿತಿಯಲ್ಲಿ ಪ್ರಮುಖ ಕಾರಣವಾಗಿರುವ ಒತ್ತುವರಿ ತೆರವು ಕಾರ್ಯಾಚರಣೆಗೆ ಆದ್ಯತೆ ನೀಡಲಾಗುತ್ತಿದೆ. ಒಟ್ಟು 800 ಕಿ.ಮೀ. ಉದ್ದದ ರಾಜಕಾಲುವೆಗಳಲ್ಲಿ 2,500 ಕಡೆ ಒತ್ತುವರಿಗಳು ಉಂಟಾಗಿತ್ತು. ಈ ಪೈಕಿ 1,300 ರಷ್ಟು ಒತ್ತುವರಿಗಳನ್ನು ಈಗಾಗಲೇ ತೆರವುಗೊಳಿಸಲಾಗಿದೆ. ಉಳಿದಂತೆ ಒತ್ತುವರಿಗಳನ್ನು ತೆರವುಗೊಳಿಸಲು ಹೈಕೋರ್ಟ್ ಅನುಮತಿ ನೀಡಿದೆ. ಕೋವಿಡ್‌ನಿಂದಾಗಿ ವಿಳಂಬ ಧೋರಣೆ ಅನುಸರಿಸಿದ್ದು, ಶೀಘ್ರ ಒತ್ತುವರಿ ತೆರವು ಕಾರ್ಯಾಚರಣೆ ಪ್ರಾರಂಭಿಸಲಾಗುವುದು ಎಂದರು.

## ಬೆಂಗಳೂರಿಗೆ ಮತ್ತೆ ಹಸಿರು ಹೊದಿಕೆ!




ಬೆಂಗಳೂರು ಉದ್ಯಾನಗಳ ನಗರ ಎಂಬ ಹೆಗ್ಗಳಿಕೆಯನ್ನು ಮುಡಿಗೇರಿಸಿಕೊಂಡಿದೆ. ಲಾಲ್‌ಬಾಗ್, ಕಬ್ಬನ್ ಪಾರ್ಕ್‌ನಂತಹ ಸುಂದರ ಉದ್ಯಾನಗಳು, ನೂರಾರು ಕೆರೆಗಳು, ಬೆಂಗಳೂರು ನಗರದ ಸೌಂದರ್ಯವನ್ನು ಹೆಚ್ಚಿಸಿದ್ದವು. ಆದರೆ, ಕಳೆದ 2 ದಶಕಗಳಲ್ಲಿ ನಗರದ ಅತಿ ವೇಗದ ಬೆಳವಣಿಗೆಯಿಂದಾಗಿ ಹಸಿರು ಹೊದಿಕೆ, ಜಲಮೂಲಗಳಿಗೆ ಕುಂದುಂಟಾಗಿದೆ. ಉದ್ಯಾನಗಳು ಮತ್ತು ಕೆರೆಗಳ ಪುನರುಜ್ಜೀವನದ ಮೂಲಕ ಉದ್ಯಾನನಗರಿಯ ಹೆಮ್ಮೆಯನ್ನು ಬೆಂಗಳೂರಿಗೆ ಮರಳಿಸುವುದು ಸರ್ಕಾರದ ಉದ್ದೇಶವಾಗಿದೆ. ನಗರದ ಹೊರವಲಯದಲ್ಲಿ 400 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಎರಡು ಬೃಹತ್ ವೃಕ್ಷೋದ್ಯಾನಗಳ ಅಭಿವೃದ್ಧಿಗೊಳಿಸಲಾಗುವುದು. ಹುರುಳ್ಳಿ, ಜೆ.ಪಿ.ನಗರ, ಕಾಡುಗೋಡಿ, ಮತ್ತಿಕೆರೆಯ ಕಿರು ಅರಣ್ಯಗಳನ್ನು ಜನಸ್ನೇಹಿಯಾಗಿಸುವುದಕ್ಕೆ ಒತ್ತುನೀಡಲಾಗಿದೆ. ಮೈಸೂರು ಲ್ಯಾಂಪ್ಸ್‌ನಂತಹ ಸಾರ್ವಜನಿಕ ಉದ್ದಿಮೆಗಳ ಜಾಗದಲ್ಲಿ ಉದ್ಯಾನವನಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಗೌರವ್ ಗುಪ್ತಾ ತಿಳಿಸಿದರು.

## ನಾಗರಿಕ ಸೇವೆಗೆ ಒಂದೇ ಡಿಜಿಟಲ್ ಪ್ಲಾಟ್‌ಫಾರಂ



ಒಂದೇ ಆನ್‌ಲೈನ್ ವೇದಿಕೆಯಡಿ ಸಾರ್ವಜನಿಕರ ಕುಂದುಕೊರತೆ ನಿವಾರಣೆ ಹಾಗೂ ನಾಗರಿಕ ಸೇವೆಗಳು ಲಭ್ಯವಾಗುವಂತೆ ಮಾಡಲು 'ಏಕೀಕೃತ ಜನಸಂಪರ್ಕ ವೇದಿಕೆ' ಸೃಷ್ಟಿಸಲಾಗುವುದು ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ ಗುಪ್ತಾ ಹೇಳಿದ್ದಾರೆ. 'ಬೆಂಗಳೂರು ಮಿಷನ್-2022' ಉದ್ದೇಶಿಸಿ ಮಾತನಾಡಿದ ಅವರು, ಸಾರ್ವಜನಿಕರಿಗೆ ಖಾತೆ, ಆಸ್ತಿ ತೆರಿಗೆ ಪಾವತಿ, ಜನನ ಮತ್ತು ಮರಣ ಪ್ರಮಾಣಪತ್ರಗಳ ವಿತರಣೆ, ವ್ಯಾಪಾರ ಪರವಾನಗಿ ವಿತರಣೆ ಮೊದಲಾದ ನಾಗರಿಕ ಸೇವೆಗಳ ಏಕೀಕೃತ ಡಿಜಿಟಲ್ ವೇದಿಕೆಯಲ್ಲಿ ಒದಗಿಸಲಾಗುವುದು ಎಂದರು. ಇನ್ನು ನಾಗರಿಕರಿಗೆ ರಸ್ತೆ ಕುರಿತ ಮಾಹಿತಿ, ನಾಗರಿಕ ಸೇವೆಗಳು, ವಿವಿಧ ಯೋಜನೆಗಳು, ಸಂಬಂಧಪಟ್ಟ ಅಧಿಕಾರಿಗಳ ವಿವರಗಳನ್ನೂ ಸಹ ಆನ್‌ಲೈನ್‌ನಲ್ಲೇ ಒದಗಿಸಲಾಗುವುದು. ಈ ಮೂಲಕ ಉದ್ಯಾನನಗರ ಸಾರ್ವಜನಿಕರಿಗೆ ಸುಧಾರಿತ ಸೇವೆ ನೀಡಲಾಗುವುದು ಎಂದರು.

## 'ಬೆಂಗಳೂರಿಗೊಂದು ಬೆಳಕಿಂಡಿ'



ಬೆಂಗಳೂರಿನ ಸಂಸ್ಕೃತಿ, ತಂತ್ರಜ್ಞಾನ ಕ್ಷೇತ್ರದ ಸಾಧನೆ ಹಾಗೂ ಇತಿಹಾಸವನ್ನು ಸಾರಲು 'ಬೆಂಗಳೂರಿಗೊಂದು ಬೆಳಕಿಂಡಿ' ಎಂಬ ಯೋಜನೆಯನ್ನು ರೂಪಿಸಲಾಗುತ್ತಿದೆ ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ ಗುಪ್ತಾ ತಿಳಿಸಿದರು. ಇದಕ್ಕಾಗಿ ಸಂಸ್ಕೃತಿ, ಪರಂಪರೆ ಮತ್ತು ಕಲಾ ಕಲಾ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಗುವುದು ಎಂದೂ ಮಾಹಿತಿ ನೀಡಿದರು. ಬೆಂಗಳೂರಿನ ತಂತ್ರಜ್ಞಾನದ ಇತಿಹಾಸವನ್ನು ಪರಿಚಯಿಸಲು ಸಂಚಾರಿ ಡಿಜಿಟಲ್ ಪ್ರಾತ್ಯಕ್ಷಿಕೆಯನ್ನು ಸ್ಥಾಪಿಸಲಾಗುವುದು. ಉದ್ಯಮಶೀಲತೆ, ನಾವೀನ್ಯತೆ, ಹೈಟೆಕ್ ತಂತ್ರಜ್ಞಾನ ಉದ್ಯಮಗಳ ಮುನ್ನಡೆಯನ್ನು ಬಿಂಬಿಸುವ 'ಬೆಂಗಳೂರು ಆವಿಷ್ಕಾರ ಕೇಂದ್ರ' ಸ್ಥಾಪನೆ ಮಾಡಲಾಗುವುದು ಎಂದರು. 15 ದಿನಕ್ಕೊಮ್ಮೆ ಸಭೆ: ನಗರದಲ್ಲಿ ಸಂಚಾರದಟ್ಟಣೆ ಮತ್ತಿತರ ಸಮಸ್ಯೆಗಳಿಗೆ ಬಿಬಿಎಂಪಿ, ಬಿಡಿಎ, ಬೆಸ್ಕಾಂ, ಜಲಮಂಡಳಿ ನಡುವಿನ ಸಮನ್ವಯತೆ ಕೊರತೆ ಕಾರಣ. ಹೀಗಾಗಿ 15 ದಿನಗಳಿಗೊಮ್ಮೆ ಎಲ್ಲಾ ಸಂಸ್ಥೆಗಳ ಜತೆ ಸಮನ್ವಯ ಸಭೆ ನಡೆಸಲಾಗುವುದೆಂದು ವಿಜಯಭಾಸ್ಕರ್ ಹೇಳಿದ್ದಾರೆ.




Edit with WPS Office

ಕನ್ನಡಪ್ರಭ



**1** 12 ಅತಿ ದಟ್ಟಣೆಯ ರಸ್ತೆಗಳನ್ನು ಗುರುತಿಸಿ ಒಟ್ಟು 190 ಕಿ.ಮೀ.ಉದ್ದದ ರಸ್ತೆಗಳನ್ನು ಮೊಬಿಲಿಟಿ, ನಿರ್ವಹಣೆ ಯೋಜನೆಯ ತ್ವರಿತ ಅನುಷ್ಠಾನ

**2** ಬೆಂಗಳೂರಿನಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಬಾಕಿ ಉಳಿದಿರುವ ರಸ್ತೆ ನಿರ್ಮಾಣ ಕಾರ್ಯ ಶೀಘ್ರ ಪೂರ್ಣಗೊಳಿಸುವುದು

**3** ನಗರದಲ್ಲಿ ವಾರ್ಷಿಕ ನಿರ್ವಹಣಾ ಒಪ್ಪಂದದ ಮೂಲಕ ಸುಮಾರು 400 ಕಿ.ಮೀ.ಉದ್ದದ ಪ್ರಮುಖ ಸಂಪರ್ಕ ರಸ್ತೆಗಳ ಅಚ್ಚುಕಟ್ಟು ನಿರ್ವಹಣೆ

**4** ತಂತ್ರಜ್ಞಾನ ನೆರವಿನಿಂದ ಘನತ್ಯಾಜ್ಯ ಸಂಗ್ರಹ ಮತ್ತು ಸಾಗಾಣಿಕೆಯನ್ನು ನಿರ್ವಹಿಸುವುದು ಹಾಗೂ ನಿಗಾ ವಹಿಸುವುದು

**5** ಹಸಿರು ಹೊದಿಕೆ ಸಲುವಾಗಿ ನಗರದ ಹೊರವಲಯದಲ್ಲಿ 400 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಎರಡು ಟ್ರೀ ಪಾರ್ಕ್ ವೃಕ್ಷೋದ್ಯಾನಗಳ ಅಭಿವೃದ್ಧಿ

**6** ತುರಹಳ್ಳಿ, ಜೆ.ಪಿ.ನಗರ, ಕಾಡುಗೋಡಿ, ಮತ್ತಿಕೆರೆಯ ಕಿರು ಅರಣ್ಯಗಳನ್ನು ಚಟುವಟಿಕೆಯುಕ್ತಗೊಳಿಸುವುದಕ್ಕೆ ಒತ್ತು

**7** ಬೆಂಗಳೂರಿನ ಸಂಸ್ಕೃತಿ, ತಂತ್ರಜ್ಞಾನ ಕ್ಷೇತ್ರದ ಸಾಧನೆ ಹಾಗೂ ಇತಿಹಾಸವನ್ನು ಸಾರಲು 'ಬೆಂಗಳೂರಿಗೊಂದು ದೇಗುಲ' ಯೋಜನೆ

**8** ಉದ್ಯಮ, ಶಾವಿನ್ಯತೆ, ಜೈವಿಕ ತಂತ್ರಜ್ಞಾನ ಉದ್ಯಮಗಳ ಮುನ್ನಡೆಯನ್ನು ಬಿಂಬಿಸುವ 'ಬೆಂಗಳೂರು ಆವಿಷ್ಕಾರ ಕೇಂದ್ರ' ಸ್ಥಾಪನೆ

## ಚುನಾವಣೆ ಮುಂದೂಡಿಕೆ ನಮ್ಮ ಉದ್ದೇಶವಲ್ಲ: ಸಚಿವ ಅಶೋಕ್ ಸ್ಪಷ್ಟನೆ

**ಬೆಂಗಳೂರು:** ವಿಶ್ವಮಾನ್ಯ ಪಡೆದಿರುವ, ಒಂದು ಕೋಟಿಗಿಂತ ಹೆಚ್ಚು ಜನಸಂಖ್ಯೆ ಇರುವ ಕಾರಣಕ್ಕಾಗಿ ಬೆಂಗಳೂರಿಗೆ ಪ್ರತ್ಯೇಕ ಕಾಯ್ದೆ ತರಲಾಗಿದೆಯೇ



ಹೊರತು ಚುನಾವಣೆ ಮುಂದೂಡಿಕೆ ಮಾಡಲು ಅಲ್ಲ ಎಂದು ಕಂದಾಯ ಸಚಿವ ಆರ್.ಅಶೋಕ್ ಸ್ಪಷ್ಟಪಡಿಸಿದ್ದಾರೆ. ವಿಧಾನಸೌಧದಲ್ಲಿ ನಡೆದ 'ಬೆಂಗಳೂರು ಮಿಷನ್-2021' ವಿಚಾರ ಕುರಿತ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ಈವರೆಗೆ ರಾಜ್ಯದ ಇತರ ನಗರಗಳಿಗೆ ನಡೆಸುವಂತೆ ಕೆಎಂಸಿ ಕಾಯ್ದೆ ಪ್ರಕಾರ ಚುನಾವಣೆ ನಡೆಸಲಾಗುತ್ತಿತ್ತು. ಆದರೆ, ಜನಸಂಖ್ಯೆ ಒಂದು ಕೋಟಿಗೂ ಅಧಿಕವಾಗಿರುವ ಹಿನ್ನೆಲೆಯಲ್ಲಿ ಪ್ರತ್ಯೇಕ ಕಾಯ್ದೆ ತಂದು ಚುನಾವಣೆಗೆ ಹೋಗುತ್ತಿದ್ದೇವೆ. ಬಿಬಿಎಂಪಿ ವಿಧೇಯಕ ಅಂಗೀಕಾರವಾಗಿದೆ ಎಂದು ಹೇಳಿದರು. ಮುಖ್ಯಮಂತ್ರಿಗಳು ಈಗಾಗಲೇ ಬೆಂಗಳೂರು ನಗರದಲ್ಲಿ ಪ್ರಗತಿ ಕಾರ್ಯಗಳ ವೀಕ್ಷಣೆ ಮಾಡುವ ಸಂಬಂಧ ನಾಲ್ಕು ಬಾರಿ ಪ್ರದಕ್ಷಿಣೆ ಮಾಡಿದ್ದಾರೆ. ಕೋವಿಡ್ ಹಿನ್ನೆಲೆಯಲ್ಲಿ ನಗರ ಪ್ರದಕ್ಷಿಣೆ ಕಾರ್ಯಕ್ರಮ ಸ್ಥಗಿತಗೊಂಡಿದ್ದು, ಮುಂದಿನ ದಿನದಲ್ಲಿ ಮತ್ತೆ ಆರಂಭಿಸಲಾಗುತ್ತದೆ ಎಂದರು.

## ಮಾರ್ಚ್, ಏಪ್ರಿಲ್ ವೇಳೆಗೆ ಸ್ಮಾರ್ಟ್‌ಸಿಟಿ ರಸ್ತೆಗಳು ಪೂರ್ಣ: ಸಚಿವ ಬೈರತಿ

**ಬೆಂಗಳೂರು:** ಸ್ಮಾರ್ಟ್‌ಸಿಟಿ ಯೋಜನೆಯಡಿ ಬೆಂಗಳೂರಿನಲ್ಲಿ ನಡೆಯುತ್ತಿರುವ ಪ್ರಮುಖ ರಸ್ತೆಗಳ



ಕಾಮಗಾರಿಗಳು ಮುಂದಿನ ವರ್ಷ ಮಾರ್ಚ್ ಅಥವಾ ಏಪ್ರಿಲ್ ತಿಂಗಳ ವೇಳೆಗೆ ಪೂರ್ಣಗೊಳ್ಳಲಿವೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ತಿಳಿಸಿದ್ದಾರೆ. ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಅವಧಿಯನ್ನು ನಿಗದಿಸಲಾಗಿತ್ತು. ಆದರೆ, ಕೋವಿಡ್ ಮತ್ತು ಮಳೆಯಿಂದಾಗಿ ವಿಳಂಬವಾಗಿದೆ. ಪ್ರಮುಖ ರಸ್ತೆಗಳ ಕಾಮಗಾರಿಯನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸುವ ಕುರಿತು ಸಭೆ ನಡೆಸಲಾಗಿದೆ. 2021ರ ಮಾರ್ಚ್ ಅಥವಾ ತಿಂಗಳ ವೇಳೆಗೆ ಪೂರ್ಣಗೊಳಿಸಲು ಗಡುವು ನೀಡಲಾಗಿದೆ ಎಂದರು.

Edit with WPS Office

ಕನ್ನಡಪ್ರಭ

ಹೊಸ ಭರವಸೆ | 2 ವರ್ಷದಲ್ಲಿ ಬೆಂಗಳೂರಿನ ಚಿತ್ರಣ ಬದಲಿಸಲು ದಿಟ್ಟ ಹೆಜ್ಜೆ: ಸಿಎಂ ಯಡಿಯೂರಪ್ಪ

# 6 ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಂಗಳೂರು ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಸಕಾರಾತ್ಮಕ ಹೆಜ್ಜೆಗಳನ್ನು ಅನುಷ್ಠಾನಗೊಳಿಸುವಲ್ಲಿ ಬದ್ಧವಾಗಿದ್ದು, 'ಬೆಂಗಳೂರು ಮಿಷನ್ 2021' ಕಾರ್ಯಕ್ರಮದಡಿ ಕಾಮಗಾರಿ ಪ್ರಗತಿಯನ್ನು ಆರು ತಿಂಗಳಿಗೊಮ್ಮೆ ಪರಿಶೀಲನೆ ಮತ್ತು ಸ್ಥಳ ವೀಕ್ಷಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಪ್ರಾಯಿಸಿದ್ದಾರೆ.

ವಿಧಾನಸೌಧದಲ್ಲಿ ಗುರುವಾರ 'ಬೆಂಗಳೂರು ಮಿಷನ್-2021' ಕಾರ್ಯಯೋಜನೆ ಬಿಡುಗಡೆ ಬಳಿಕ ಮಾಧ್ಯಮ ಸಂವಾದ ನಡೆಸಿದ ಅವರು, ಮುಂದಿನ ಎರಡು ವರ್ಷದಲ್ಲಿ ಬೆಂಗಳೂರಿನ ಭವಿಷ್ಯದ ಚಿತ್ರಣವನ್ನು ಬದಲಿಸುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆ ಇಡಲಾಗಿದೆ ಎಂದರು.

ಕಾಮಗಾರಿಗಳ ಪ್ರಗತಿಯ ಬಗ್ಗೆ ಮಾಧ್ಯಮದವರ ಜತೆಗೂಡಿ ಪರಿಶೀಲನೆ ನಡೆಸಲಾಗುತ್ತದೆ. ಪ್ರತಿ ಆರು ತಿಂಗಳಿಗೊಮ್ಮೆ ಈ ಕೆಲಸ ಮಾಡಲಾಗುವುದು. ಅಲ್ಲದೇ, ಸ್ಥಳ ಪರಿಶೀಲನೆ ನಡೆಸಿ ಅಭಿವೃದ್ಧಿಯ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಗುವುದು ಎಂದು ತಿಳಿಸಿದರು.




- ಕಾಮಗಾರಿಗಳ ಪ್ರಗತಿಯ ಬಗ್ಗೆ ಮಾಧ್ಯಮದವರ ಜತೆಗೂಡಿ ಪರಿಶೀಲನೆ
- ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಕ್ಕಾಗಿ ಹಣದ ಸಮಸ್ಯೆ ಎದುರಾಗದಂತೆ ಕ್ರಮ

ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಕ್ಕಾಗಿ ಹಣದ ಸಮಸ್ಯೆ ಎದುರಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಬಜೆಟ್‌ನಲ್ಲಿಯೂ ಅಗತ್ಯ ಅನುದಾನವನ್ನು ಮೀಸಲಿರಿಸಲಾಗುವುದು. ಕಾಮಗಾರಿಗಳ ಅನುಷ್ಠಾನಕ್ಕಾಗಿ ಕಾಲಮಿತಿ ನಿಗದಿಯಾಗಿದೆ. ಜನರಿಗೆ ನೀಡಿರುವ ಭರವಸೆಯಂತೆ ಯೋಜನೆಯನ್ನು ಮರೆಯುವುದಿಲ್ಲ. ಎರಡು ವರ್ಷದಲ್ಲಿ ನಮ್ಮ ಗುರಿ ತಲುಪಲಿದ್ದೇವೆ. ಮುಂದಿನ ದಿನದಲ್ಲಿ ಬೆಂಗಳೂರು ಸ್ವಚ್ಛ, ಸುಂದರವಾಗಿ ರೂಪುಗೊಳ್ಳುವುದರಲ್ಲಿ ಸಂಶಯ ಇಲ್ಲ ಎಂದು ನುಡಿದರು.



Edit with WPS Office

ಕನ್ನಡಪ್ರಭ

**ಕೆರೆಗಳ ಪುನಶ್ಚೇತನ** | ರಾಜಕಾಲುವೆ ಅಭಿವೃದ್ಧಿ ಸೇರಿದಂತೆ ಜಲಮೂಲಗಳ ಸಂರಕ್ಷಣೆಗೆ ಒತ್ತು: ಗುಪ್ತಾ

# ಜಲಮೂಲಗಳ ಸಂರಕ್ಷಣೆಗೆ ಕೆ-100

• **ಕನ್ನಡಪ್ರಭ ವಾರ್ತೆ** ಬೆಂಗಳೂರು

[illegible]



## ಶೀಘ್ರದಲ್ಲೇ ಪಾರ್ಕಿಂಗ್ ನೀತಿ

[illegible]



Edit with WPS Office

ಕನ್ನಡಪ್ರಭ

# ಸದ್ಯಕ್ಕಿಲ್ಲ ಕಸ ಶುಲ್ಕದ ಹೊರೆ

## ತೀವ್ರ ವಿರೋಧ ಹಿನ್ನೆಲೆ | ₹200 ತ್ಯಾಜ್ಯ ಶುಲ್ಕ ಪ್ರಸ್ತಾವನೆ ಕೈಬಿಟ್ಟ ಪಾಲಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಾಗರಿಕರಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ತ್ಯಾಜ್ಯ ಸಂಗ್ರಹಣೆಗೆ ಸೇವಾ ಶುಲ್ಕ ವಿಧಿಸುವ ಪ್ರಸ್ತಾವನೆಯನ್ನು ಬಿಬಿಎಂಪಿ ಕೈ ಬಿಟ್ಟಿದ್ದು, ಸದ್ಯಕ್ಕೆ ಯಾವುದೇ ಶುಲ್ಕ ವಿಧಿಸುವುದಿಲ್ಲ ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ ಗುಪ್ತಾ ಸ್ಪಷ್ಟಪಡಿಸಿದ್ದಾರೆ.

ವಿಧಾನಸೌಧದಲ್ಲಿ ಗುರುವಾರ ನಡೆದ 'ಮಿಷನ್ ಬೆಂಗಳೂರು-2022' ಕಾರ್ಯಕ್ರಮದಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಬೆಂಗಳೂರಿನಲ್ಲಿ ಮನೆ-ಮನೆಯಿಂದ ಕಸ ಸಂಗ್ರಹಿಸಲು ಹೊಸದಾಗಿ ಯಾವುದೇ ಶುಲ್ಕ ವಿಧಿಸುವುದಿಲ್ಲ, ಪ್ರಸ್ತುತ ಇರುವ ವ್ಯವಸ್ಥೆಯನ್ನೇ ಇನ್ನೂ ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತೇವೆ. ಇತ್ತೀಚೆಗೆ ವರದಿಯಾಗಿರುವಂತೆ ಹೊಸದಾಗಿ ಹೆಚ್ಚುವರಿ ಶುಲ್ಕ ಸಂಗ್ರಹ ಮಾಡುವ ಪ್ರಸ್ತಾವನೆ ಸರ್ಕಾರ ಹಾಗೂ ಬಿಬಿಎಂಪಿ ಮುಂದಿಲ್ಲ ಎಂದು ಹೇಳಿದರು.

'ಬಿಬಿಎಂಪಿಯ ಕಸ ನಿರ್ವಹಣೆ ಉಪ ನಿಯಮ-2020ರ' ಅನ್ವಯ ಕಸ ಸಂಗ್ರಹಣೆ ಸೇವಾ ಶುಲ್ಕ ವಸೂಲಿ ಮಾಡಲು ಮುಂದಾಗಿದ್ದ ಬಿಬಿಎಂಪಿ ತನ್ನ ನಿರ್ಧಾರದಿಂದ ಹಿಂದೆ ಸರಿದಿದೆ. ನಿಯಮಗಳ ಪ್ರಕಾರ



- ಮನೆ, ಹೋಟೆಲ್, ಮಾಲ್‌ಗಳಿಗೆ ಭಾರೀ ಕಸ ಶುಲ್ಕಕ್ಕೆ ಮುಂದಾಗಿದ್ದ ಬಿಬಿಎಂಪಿ
- ತಿಂಗಳಿಗೆ ₹200ರಿಂದ ₹14000 ಸೇವಾ ಶುಲ್ಕ ವಿಧಿಸಲು ಸಿದ್ಧತೆ ಮಾಡಿಕೊಂಡಿದ್ದ ಪಾಲಿಕೆ
- ಕರೆಂಟ್ ಬಿಲ್ ಜತೆ ಕಸ ಶುಲ್ಕ ಸಂಗ್ರಹಿಸಲು ಯೋಜನೆ
- ಸಾರ್ವಜನಿಕರು, ಪ್ರತಿಪಕ್ಷಗಳಿಂದ ತೀವ್ರ ವಿರೋಧ ವ್ಯಕ್ತ, ಹೋರಾಟ
- ಕೊನೆಗೆ ತನ್ನ ನಿರ್ಧಾರದಿಂದ ಹಿಂದೆ ಸರಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



ನಗರದಲ್ಲಿ ಮನೆ-ಮನೆಯಿಂದ ಕಸ ಸಂಗ್ರಹಿಸಲು ಹೊಸದಾಗಿ ಯಾವುದೇ ಶುಲ್ಕ ವಿಧಿಸುವುದಿಲ್ಲ, ಪ್ರಸ್ತುತ ಇರುವ ವ್ಯವಸ್ಥೆಯನ್ನೇ ಇನ್ನೂ ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತೇವೆ.

• **ಗೌರವ್ ಗುಪ್ತಾ** ಬಿಬಿಎಂಪಿ ಆಡಳಿತಾಧಿಕಾರಿ

ತ್ಯಾಜ್ಯ ಉತ್ಪಾದಕರಾದ ಹೋಟೆಲ್, ಕಲ್ಯಾಣ ಮಂಟಪ, ಆಸ್ಪತ್ರೆ, ಶಾಪಿಂಗ್ ಮಾಲ್‌ಗಳಿಂದ ಹೊಸ ವರ್ಷದಿಂದ ಕಸ ಸಂಗ್ರಹಕ್ಕಾಗಿ ಪ್ರತಿ ತಿಂಗಳು ಕನಿಷ್ಠ 200 ರು.ನಿಂದ 14 ಸಾವಿರ ರು. ತನಕ ಶುಲ್ಕ ವಸೂಲಿಗೆ ಬಿಬಿಎಂಪಿ ಸಿದ್ಧತೆ ಮಾಡಿಕೊಂಡಿತ್ತು. ಈಗಾಗಲೇ ಕೊರೋನಾ ಸಂಕಷ್ಟದಿಂದ ಪರದಾಡುತ್ತಿರುವಾಗ ಹೆಚ್ಚುವರಿ ಶುಲ್ಕ ವಿಧಿಸುತ್ತಿರುವ ಬಗ್ಗೆ ಸಾರ್ವಜನಿಕ ವಲಯ ಹಾಗೂ ಪ್ರತಿಪಕ್ಷಗಳಿಂದ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಹೀಗಾಗಿ ಸೇವಾ ಶುಲ್ಕವನ್ನು ಬೆಸ್ಕಾಂ ಬಿಲ್‌ನೊಂದಿಗೆ ಪ್ರತಿ ತಿಂಗಳು ಸಂಗ್ರಹಿಸುವ ನಿರ್ಧಾರದಿಂದ ಹಿಂದೆ ಸರಿದಿದೆ.

Edit with WPS Office



# ರಸ್ತೆಗೆ ಮೆಡಿಕಲ್ ಕಸ ಸುರಿದ ಲ್ಯಾಬ್‌ಗೆ ₹50 ಸಾವಿರ ದಂಡ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸ್ಯಾನಿಟರಿ ಮತ್ತು ವೈದ್ಯಕೀಯ ತ್ಯಾಜ್ಯಗಳನ್ನು ರಸ್ತೆ ಬದಿ ಸುರಿದಿದ್ದ ಲ್ಯಾಬ್‌ವೊಂದಕ್ಕೆ ಬಿಬಿಎಂಪಿ ಮಾರ್ಷಲ್‌ಗಳು 50 ಸಾವಿರ ರು.ದಂಡ ವಿಧಿಸಿದ್ದಾರೆ. ರಾಜಾಜಿನಗರದ 1ನೇ ಬ್ಲಾಕ್‌ನಲ್ಲಿರುವ ಲೈಫ್ ಸೆಲ್ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿನ ಲ್ಯಾಬ್ ಕೊಟ್ಟಿಗೆಪಾಳ್ಯದ ಪೈಪ್‌ಲೈನ್ ರಸ್ತೆ ಬದಿ ವೈದ್ಯಕೀಯ ತ್ಯಾಜ್ಯ ಸುರಿದು ಹೋಗಿತ್ತು. ಸದರಿ ತ್ಯಾಜ್ಯ ಹಾಕಿದ ಲ್ಯಾಬ್ ಪತ್ತೆ ಹಚ್ಚಿದ ಪಾಲಿಕೆ ಮಾರ್ಷಲ್‌ಗಳು ದಂಡ ವಸೂಲಿ ಮಾಡಿದ್ದಾರೆ. ವೈದ್ಯಕೀಯ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯುವುದು ಅಕ್ಷಮ್ಯ ಅಪರಾಧ. ಸುರಕ್ಷಿತ ವಿಧಾನದಲ್ಲಿಯೇ ಈ ತ್ಯಾಜ್ಯವನ್ನು ವಿಲೇವಾರಿ ಮಾಡಬೇಕೆಂಬ ನಿಯಮ ಉಲ್ಲಂಘಿಸುವ ಆಸ್ಪತ್ರೆ, ಲ್ಯಾಬ್‌ಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದು. ಸಾರ್ವಜನಿಕರು ಕೂಡ ಎಲ್ಲೆಂದರಲ್ಲಿ ಹಸಿ ಮತ್ತು ಒಣ ಕಸವನ್ನು ಬಿಸಾಡದೆ ತಮ್ಮ ವಾರ್ಡ್‌ಗಳಲ್ಲಿ ಬರುವ ಪಾಲಿಕೆಯ ಆಟೋ ಟಿಪ್ಪರ್‌ಗಳಿಗೆ ಹಾಕಿ ಸ್ವಚ್ಛತೆ ಕಾಪಾಡಬೇಕೆಂದು ಪಾಲಿಕೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

Edit with WPS Office

ಕನ್ನಡಪ್ರಭ

# ಕಸ ಮುಕ್ತ ಮಾಡಲು 'ಪ್ರಾಜೆಕ್ಟ್ ಶಿವಾಜಿನಗರ'

## 750 ಮನೆಗೊಂದರಂತೆ ಬ್ಲಾಕ್: ರಿಜ್ವಾನ್ ಅರ್ಷದ್



ಬಿಬಿಎಂಪಿಯ ಶಿವಾಜಿನಗರ ವಾರ್ಡ್‌-91ರಲ್ಲಿ ಘನ ತ್ಯಾಜ್ಯ ನಿರ್ವಹಣೆ ಯೋಜನೆಯಡಿ ಆರಂಭಿಸಿರುವ 'ಪ್ರಾಜೆಕ್ಟ್ ಶಿವಾಜಿನಗರ' ಕುರಿತ ತರಬೇತಿ ಕಾರ್ಯಕ್ರಮದಲ್ಲಿ ಶಾಸಕ ರಿಜ್ವಾನ್ ಅರ್ಷದ್, ಘನ ತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಿ.ರಂದೀಪ್ ಸೇರಿದಂತೆ ಇತರರಿದ್ದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶಿವಾಜಿನಗರವನ್ನು ಕಸಮುಕ್ತವನ್ನಾಗಿ ಮಾಡಲು 750 ಮನೆಗೊಂದರಂತೆ ಬ್ಲಾಕ್ ರಚಿಸಿ, ನಿತ್ಯ ಮನೆಗೆ ತೆರಳಿ ಕಸ ಸಂಗ್ರಹಿಸುವುದು ಸೇರಿದಂತೆ ಹಲವು ರೀತಿಯಲ್ಲಿ ವೈಜ್ಞಾನಿಕ ಕಸ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ರಿಜ್ವಾನ್ ಅರ್ಷದ್ ಹೇಳಿದರು.

ಗುರುವಾರ ಬಿಬಿಎಂಪಿಯ ಶಿವಾಜಿನಗರ ವಾರ್ಡ್‌-91ರಲ್ಲಿ 'ಪ್ರಾಜೆಕ್ಟ್ ಶಿವಾಜಿನಗರ' ಘನ ತ್ಯಾಜ್ಯ ನಿರ್ವಹಣೆ ಯೋಜನೆ ಜಾರಿಗೊಳಿಸುವ ಸಂಬಂಧ ಆಯೋಜಿಸಲಾಗಿದ್ದ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದ ಅವರು, ವೈಜ್ಞಾನಿಕ ರೀತಿಯಲ್ಲಿ ಕಸ ವಿಲೇವಾರಿ ಮಾಡಲು ವಾರ್ಡ್‌ನಲ್ಲಿ 750 ಮನೆಗೊಂದರಂತೆ ಬ್ಲಾಕ್ ರಚಿಸಲಾಗಿದ್ದು, ಈಗಾಗಲೇ 200 ಸ್ವಯಂ ಸೇವಕರು ಈ ಯೋಜನೆಗೆ ಕೈಜೋಡಿಸಿದ್ದಾರೆ ಎಂದರು.

ಘನ ತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಿ.ರಂದೀಪ್ ಮಾತನಾಡಿ, ಕಸ ಮುಕ್ತ ಶಿವಾಜಿನಗರ ಮಾಡಲು **projectshivajinagar.org** ಗೆ ಭೇಟಿ ನೀಡಿ ಸ್ವಯಂಸೇವಕರಾಗಿ ಎಂದರು.

ಸಮಾರಂಭದಲ್ಲಿ ಜಂಟಿ ಆಯುಕ್ತ(ಘನ ತ್ಯಾಜ್ಯ) ಸರ್ಫರಾಜ್ ಖಾನ್, ಹಾಫೀಜ್, ಶಕೀಲ್ ಅಹಮದ್ ಉಪಸ್ಥಿತರಿದ್ದರು.



Edit with WPS Office

ಕನ್ನಡಪ್ರಭ

# ಬೆಳ್ಳಂದೂರು, ವರ್ತೂರು ಕೆರೆಗಳ ಪುನಶ್ಚೇತನ ಕಾಮಗಾರಿಗೆ ಶಂಕು



[illegible]

[illegible]

ಕನ್ನಡಪ್ರಭ Fri, 18 December 2020
https://kpepaper.asianetnews.com/c/5710

Edit with WPS Office

VK ವಿಜಯ ಕರ್ನಾಟಕ

ಸುಗಮ ಸಂಚಾರ, ಸುಂದರ ನಗರ ನಿರ್ಮಾಣ, ಮೂಲಸೌಕರ್ಯ ಅಭಿವೃದ್ಧಿಯ ಗುರಿ

# ಬೆಂಗಳೂರು ಅಭಿವೃದ್ಧಿಗೆ ಮಿಷನ್ 2022



VK
ವಿಜಯ ಕರ್ನಾಟಕ

ಬೆಂಗಳೂರು ಮಿಷನ್-2022ನಲ್ಲಿ ನಗರದ ಸಮಗ್ರ ಅಭಿವೃದ್ಧಿ ಮತ್ತು ಸೌಂದರ್ಯ ವರ್ಧನೆಯ ದೃಷ್ಟಿಯಿಂದ ವಿಭಾಗಗಳನ್ನು ಗುರುತಿಸಲಾಗಿದೆ. ಈ ಕುರಿತ ವಿವರ ಇಲ್ಲಿದೆ.

# 4 ವಿಭಾಗಗಳಲ್ಲಿ ಸಮಗ್ರ ಅಭಿವೃದ್ಧಿ

## ವಿಭಾಗ 1: ಸುಗಮ ಸಂಚಾರ ಅತ್ಯುತ್ತಮ ರಸ್ತೆ ನಿರ್ವಹಣೆ



- ಅತಿ ಹೆಚ್ಚು ದಟ್ಟಣೆಯ 12 ರಸ್ತೆಗಳನ್ನು (ಒಟ್ಟು 190 ಕಿ.ಮೀ.) ಮೇಲ್ದರ್ಜೆಗೆ ಏರಿಸಲಾಗುವುದು. ಈ ಯೋಜನೆಯನ್ನು ರಾಜ್ಯ ರಸ್ತೆ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಮೂಲಕ ತ್ವರಿತವಾಗಿ ಅನುಷ್ಠಾನಗೊಳಿಸಲಾಗುವುದು.
- ವಾರ್ಷಿಕ ನಿರ್ವಹಣಾ ಒಪ್ಪಂದದ ಮೇರೆಗೆ 400 ಕಿ.ಮೀ. ಉದ್ದದ ಪ್ರಮುಖ ರಸ್ತೆಗಳ ಅತ್ಯುತ್ತಮ ನಿರ್ವಹಣೆ.
- ರಸ್ತೆ ಸುರಕ್ಷತಾ ಪರಿಕರಗಳನ್ನು ಅಳವಡಿಸಿ ಪ್ರಯಾಣಿಕರ ಸುರಕ್ಷತೆ ಖಾತರಿ ಪಡಿಸಲಾಗುವುದು.
- ಸಮನ್ವಯ ಹೊಂದಿದ ಸಿಗ್ನಲ್ ದೀಪಗಳ ಅಳವಡಿಕೆ.

### ಸ್ಮಾರ್ಟ್ ಸಂಚಾರ

- ವಿದ್ಯುತ್ ಚಾಲಿತ ಸಮೂಹ ಸಾರಿಗೆ ವ್ಯವಸ್ಥೆಗೆ ಉತ್ತೇಜನ.
- ಪ್ರಗತಿಯಲ್ಲಿರುವ ಮೆಟ್ರೊ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು.
- ಪ್ರಮುಖ ರಸ್ತೆಗಳಲ್ಲಿ ಬಸ್‌ಗಳಿಗೆ ಆದ್ಯತಾ ಪಥ ಗುರುತಿಸಲಾಗುವುದು.

## ವಿಭಾಗ 2: ಸ್ವಚ್ಛ ಬೆಂಗಳೂರು

ವ್ಯವಸ್ಥಿತ ತ್ಯಾಜ್ಯ ನಿರ್ವಹಣೆಯ ಸವಾಲು ಇದೆ. ಈ ನಿಟ್ಟಿನಲ್ಲಿ ವೈಜ್ಞಾನಿಕವಾಗಿ ಕಸ ವಿಲೇವಾರಿಗೆ ಒತ್ತು ಕೊಡಲಾಗಿದೆ. ಬೆಂಗಳೂರಿನ ಜನಸಂಖ್ಯೆ 1.2 ಕೋಟಿ ಮೀರಿದ್ದು, ನಿತ್ಯ 5,800 ಮೆಟ್ರಿಕ್ ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಶೇ.80ರಷ್ಟು ಮನೆ- ಮನೆ ಸಂಗ್ರಹದ ಮೂಲಕ ಕಸ ವಿಲೇವಾರಿ ಮಾಡಲಾಗುತ್ತಿದೆ. ಜತೆಗೆ ನಾಗರಿಕರ ಸಹಕಾರದೊಂದಿಗೆ ಕಸ ವಿಲೇವಾರಿಯನ್ನು ಇನ್ನಷ್ಟು ದಕ್ಷತೆಯಿಂದ ನಿರ್ವಹಿಸಲಾಗುವುದು.

### ಸಮಗ್ರ ನಗರ ತ್ಯಾಜ್ಯ ನಿರ್ವಹಣೆ

- ನಗರ ತ್ಯಾಜ್ಯ ವಿಲೇವಾರಿಯ ದಕ್ಷ ಹಾಗೂ ಸಮರ್ಥ ನಿರ್ವಹಣೆಗೆ ಸಾಂಸ್ಥಿಕ ರೂಪ ನೀಡಲಾಗುವುದು.
- ಪ್ರಸ್ತುತ ಕಾರ್ಯನಿರ್ವಹಿಸುವ ತ್ಯಾಜ್ಯ ಸಂಸ್ಕರಣಾ ಘಟಕ ಉನ್ನತೀಕರಿಸಿ ಸಾಮರ್ಥ್ಯಕ್ಕೆ ತಕ್ಕಂತೆ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡಲಾಗುವುದು.
- ತಂತ್ರಜ್ಞಾನದ ನೆರವಿನಿಂದ ಘನ ತ್ಯಾಜ್ಯ ಸಂಗ್ರಹ ಮತ್ತು ಸಾಗಾಣಿಕೆ ನಿರ್ವಹಿಸಲಾಗುವುದು. ಜತೆಗೆ ನಿಗಾ ವಹಿಸಲಾಗುವುದು.
- ತ್ಯಾಜ್ಯ ಸುರಿಯುವ ಹಳೆಯ ಸ್ಥಳಗಳ ಅಭಿವೃದ್ಧಿ.
- ಮಾದರಿ ತ್ಯಾಜ್ಯ ಸಂಗ್ರಹ ಕೇಂದ್ರ ರೂಪಿಸಲಾಗುವುದು.

### ನನ್ನ ಕಸ ನನ್ನ ಜವಾಬ್ದಾರಿ

- ಎಲ್ಲ ಹಂತಗಳಲ್ಲಿ ಘನ ತ್ಯಾಜ್ಯದ ಯಶಸ್ವಿ ನಿರ್ವಹಣೆಗಾಗಿ ನಾಗರಿಕರ ಸಹಭಾಗಿತ್ವ ಹೆಚ್ಚಿಸಲಾಗುವುದು. ಈ ಉದ್ದೇಶಕ್ಕೆ ತ್ಯಾಜ್ಯ ನಿರ್ವಹಣೆಗೆ ತರಬೇತಿ ನೀಡಲಾಗುವುದು. ಜತೆಗೆ ಶುಚಿ ಮಿತ್ರರ ತರಬೇತಿ ಕಾರ್ಯಕ್ರಮ ನಡೆಸಲಾಗುವುದು.
- ಪ್ರತಿ ವಲಯದಲ್ಲಿ ಗೊಬ್ಬರ ತಯಾರಿಕೆ ಹಾಗೂ ಶೂನ್ಯ ತ್ಯಾಜ್ಯ ಮನೆಗಳ ಕುರಿತಂತೆ ಸಮುದಾಯಕ್ಕೆ ಮಾಹಿತಿ ಹಾಗೂ ಮಾರ್ಗದರ್ಶನ ನೀಡಲು ಕಲಿಕಾ ಕೇಂದ್ರ ಸ್ಥಾಪನೆ.
- ಸ್ಥಳೀಯವಾಗಿಯೇ ಗೊಬ್ಬರ ತಯಾರಿ ಕೇಂದ್ರ ಸ್ಥಾಪಿಸಿ ಮನೆಯಲ್ಲೇ ಹಸಿ ತ್ಯಾಜ್ಯ ಸಂಸ್ಕರಣೆಗೆ ಪ್ರೋತ್ಸಾಹ.


## ವಿಭಾಗ 3: ಹಸಿರು ಬೆಂಗಳೂರು


- ಕೆಲವು ಸಾರ್ವಜನಿಕ ಉದ್ದಿಮೆಗಳ ಭೂಮಿಯನ್ನು ನಗರದ ಹಸಿರು ಹೊದಿಕೆ ಹೆಚ್ಚಿಸಲು ಮರು ಬಳಕೆ ಮಾಡಲಾಗುವುದು.
- ನಗರದ ಹೊರವಲಯದಲ್ಲಿ 400 ಎಕರೆಗೂ ಹೆಚ್ಚು ಪ್ರದೇಶದಲ್ಲಿ 2 ಬೃಹತ್ ವೃಕ್ಷೋದ್ಯಾನ ಅಭಿವೃದ್ಧಿ. ಮಾದೇನಹಳ್ಳಿ, ಭೂತನಹಳ್ಳಿಯಲ್ಲಿ ಈ ಟ್ರೀ ಪಾರ್ಕ್‌ಗಳು ಬರಲಿವೆ.
- ಹೊರವಲಯದ ತುರಹಳ್ಳಿ, ಜೆಪಿನಗರ, ಕಾಡುಗೋಡಿ ಮತ್ತು ಮುತ್ತೆರೆಯ ಕಿರು ಅರಣ್ಯಗಳನ್ನು ಜನಸ್ನೇಹಿಯಗೊಳಿಸಲಾಗುವುದು.
- ನಗರದಲ್ಲಿ ವಾಯು ಮಾಲಿನ್ಯ ಗುಣಮಟ್ಟ ಪರೀಕ್ಷಾ ಉಪಕರಣಗಳ ಸಂಖ್ಯೆ 500ಕ್ಕೆ ಹೆಚ್ಚಿಸಲಾಗುವುದು.

### ಜಲಮೂಲಗಳ ಸಂರಕ್ಷಣೆ

- ಕೆ-100 ರಾಜಕಾಲುವೆ ಯೋಜನೆ ಮೂಲಕ ರಾಜಕಾಲುವೆಗಳು ಹರಿಯುವ ಪ್ರದೇಶ ಅಭಿವೃದ್ಧಿ.
- ಬೆಂಗಳೂರಿನ 25 ಕೆರೆಗಳ ಪುನಶ್ಚೇತನ. 20 ಕೆರೆಗಳಲ್ಲಿ ನೀರಿನ ಗುಣಮಟ್ಟ ಸಂಬಂಧ ಪ್ರತಿ ಕ್ಷಣ ನಿಗಾ.
- ಕೆರೆಗಳ ಸುತ್ತಲಿನ ಜೀವವೈವಿಧ್ಯ ರಕ್ಷಣೆಗೆ ಆದ್ಯತೆ.
- ಸ್ವಯಂ ಸೇವಕರು ಮತ್ತು ಇತರ ಭಾಗೀದಾರರೊಂದಿಗೆ ಯೋಜನೆ ಅನುಷ್ಠಾನಕ್ಕೆ ಕ್ರಮ.







## ವಿಭಾಗ 4: ಏಕೀಕೃತ ಜನಸಂಪರ್ಕ ವೇದಿಕೆ

- ಖಾತೆ, ಆಸ್ತಿ ತೆರಿಗೆ ಪಾವತಿ, ಜನನ ಮತ್ತು ಮರಣ ಪ್ರಮಾಣ ಪತ್ರಗಳ ವಿತರಣೆ, ವ್ಯಾಪಾರ ಪರವಾನಗಿ ಮುಂತಾದ ನಾಗರಿಕ ಸೇವೆಯನ್ನು ಏಕೀಕೃತ ಡಿಜಿಟಲ್ ವೇದಿಕೆಯಲ್ಲಿ ಒದಗಿಸಲಾಗುವುದು.
- ರಸ್ತೆ ಕುರಿತ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಒದಗಿಸಲಾಗುವುದು.
- ನಾಗರಿಕ ಸೇವೆಗಳು, ನಾನಾ ಯೋಜನೆಗಳು ಹಾಗೂ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳ ಮಾಹಿತಿಯನ್ನು ಈ ವೇದಿಕೆಯಲ್ಲಿ ನೀಡಲಾಗುವುದು.
- ಸಾರ್ವಜನಿಕ ಕುಂದುಕೊರತೆ ನಿವಾರಣೆಗಾಗಿ ಏಕೀಕೃತ ವೇದಿಕೆ ಸಂಬಂಧ ಸಹಾಯವಾಣಿ ಪೋರ್ಟಲ್‌ನ ಮರು ವಿನ್ಯಾಸ ಮಾಡಲಾಗುವುದು. ಈ ಮೂಲಕ ಬೆಂಗಳೂರಿನ ನಾಗರಿಕರಿಗೆ ಸುಧಾರಿತ ಸೇವೆ ಕಲ್ಪಿಸಲಾಗುವುದು.

### ಬೆಂಗಳೂರಿಗೊಂದು ಬೆಳಕಿಂಡಿ

- ಸಂಸ್ಕೃತಿ, ಪರಂಪರೆ ಮತ್ತು ಕರಕುಶಲ ವಸ್ತು ಸಂಗ್ರಹಾಲಯ ಸ್ಥಾಪನೆ.
- ಮನರಂಜನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನ ತಾಣ ಅಭಿವೃದ್ಧಿ ಪಡಿಸಲಾಗುವುದು.
- ಇತಿಹಾಸ, ತಂತ್ರಜ್ಞಾನದ ವಿಚಾರದಲ್ಲಿ ನಗರದ ಹಿನ್ನೆಲೆಯನ್ನು ಪರಿಚಯಿಸುವ ಡಿಜಿಟಲ್ ಪ್ರಾತ್ಯಕ್ಷಿಕೆ ಆಯೋಜಿಸಲಾಗುವುದು. ಮೈಸೂರು ಲ್ಯಾಂಪ್ಸ್ ಆವರಣದಲ್ಲಿ ಕೇಂದ್ರ ನಿರ್ಮಾಣ.
- ಉದ್ಯಮಶೀಲತೆ, ನಾವೀನ್ಯತೆ, ವೈವಿಕ ತಂತ್ರಜ್ಞಾನ ಉದ್ಯಮಗಳ ಮುನ್ನಡೆ ಬಯಸುವ ಬೆಂಗಳೂರು ಇನೋವೇಷನ್ ಸೆಂಟರ್ ತೆರೆಯಲಾಗುವುದು.

...ವೃದ್ಧಿ ಮಂಡಳಿ
...ಂಡ್ಯ)
...ಹೋರ್ಸ್ ರಸ್ತೆ, ಬೆಂಗಳೂರು-560 001.
...: www.kiadb.in
ದಿನಾಂಕ: 16.12.2020

Edit with WPS Office

VK
ವಿಜಯ ಕರ್ನಾಟಕ

# ಕಾಮಗಾರಿ ಗುಣಮಟ್ಟ ಪರಿಶೀಲನೆಗೆ ಕೋರ್ಟ್ ಕಮಿಷನರ್ ನೇಮಕ

■ ವಿಕ ಸುದ್ದಿಲೋಕ ಬೆಂಗಳೂರು

**74 ರಸ್ತೆಗಳಿಗೆ ಭೇಟಿ ನೀಡಿ ಪರಿಶೀಲಿಸಲು ಸೂಚನೆ**

**2017ರಲ್ಲಿ ಸಲ್ಲಿಸಿದ ಪಿಐಎಲ್ ವಿಚಾರಣೆ**

ಬೆಂಗಳೂರು ಮಹಾನಗರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಯ ಗುಣಮಟ್ಟದ ಪರಿಶೀಲನೆಗೆ ಹೈಕೋರ್ಟ್, ಕೋರ್ಟ್ ಕಮಿಷನರ್‌ಗಳನ್ನು ನೇಮಕ ಮಾಡಿದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ, ಅರ್ಜಿದಾರರ ಪರ ವಕೀಲರನ್ನು ಕೋರ್ಟ್ ಕಮಿಷನರ್‌ಗಳನ್ನಾಗಿ ನ್ಯಾಯಾಲಯ ನೇಮಿಸಿದೆ.

ಕೋರಮಂಗಲದ ವಿಜಯ್ ಮೆನನ್ ಮತ್ತಿತರರು 2017ರಲ್ಲಿ ಸಲ್ಲಿಸಿರುವ ಪಿಐಎಲ್ ಕುರಿತು ಸಿಜೆ ಎ.ಎಸ್. ಓಕ್ ನೇತೃತ್ವದ ನ್ಯಾಯಪೀಠ ವಿಚಾರಣೆ ನಡೆಸಿತು.

ಕೋರ್ಟ್ ಕಮಿಷನರ್‌ಗಳು ಬಿಬಿಎಂಪಿ ರಸ್ತೆಗುಂಡಿಗಳನ್ನು ಸಂಪೂರ್ಣವಾಗಿ ಮುಚ್ಚಲಾಗಿದೆ ಎಂದು ನೀಡಿರುವ 74 ರಸ್ತೆಗಳಿಗೆ ಭೇಟಿ ನೀಡಿ ಅಲ್ಲಿ ಗುಣಮಟ್ಟದ ಕಾಮಗಾರಿ ನಡೆದಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ನ್ಯಾಯಾಲಯ ಆದೇಶಿಸಿದೆ.

ಕಳೆದ ವಿಚಾರಣೆ ವೇಳೆ ನ್ಯಾಯಾಲಯ, ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯ ಗುಣಮಟ್ಟದ ಪರಿಶೀಲನೆಗೆ ಐಐಎಸ್ಸಿ ತಜ್ಞರ ತಂಡ ಅಥವಾ 'ನೀರಿ' ಸಂಸ್ಥೆಯನ್ನು ನೇಮಕ ಮಾಡಲು ಕ್ರಮ ಕೈಗೊಳ್ಳುವಂತೆ ಬಿಬಿಎಂಪಿಗೆ ಸೂಚನೆ ನೀಡಿತ್ತು.

ಗುರುವಾರ ಪಾಲಿಕೆ ಪರ ವಾದ ಮಂಡಿಸಿದ ವಕೀಲರಾದ ಕೆ.ಎನ್. ಪುಟ್ಟೇಗೌಡ, ರಸ್ತೆ ಗುಂಡಿ ಮುಚ್ಚುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿದರು. ಅಲ್ಲದೆ, "ನ್ಯಾಯಾಲಯದ ನಿರ್ದೇಶನದಂತೆ ಗುಣಮಟ್ಟದ ಪರಿಶೀಲನೆಗೆ ಐಐಎಸ್ಸಿಯ ತಾಂತ್ರಿಕ ವಿಭಾಗವನ್ನು ನೇಮಕ ಮಾಡಿಕೊಳ್ಳಲು ಮನವಿ ಸಲ್ಲಿಸಲಾಗಿತ್ತು. ಸಂಸ್ಥೆ ಅಂದಾಜು 4.78 ಕೋಟಿ ರೂ. ಮತ್ತು ಶೇ.18ರಷ್ಟು ವೆಚ್ಚವಾಗುತ್ತದೆ ಎಂದು ಹೇಳಿದೆ. ಆ ರಸ್ತೆಗಳ ಕಾಮಗಾರಿಗೆ ಖರ್ಚು ಮಾಡಿರುವ ಮೊತ್ತ 44.15 ಲಕ್ಷ ರೂ. ಆದರೆ, ಗುಣಮಟ್ಟ ಪರಿಶೀಲನೆಗೆ ಅಷ್ಟು ದೊಡ್ಡ ಮೊತ್ತ ಖರ್ಚು ಮಾಡಲಾಗದು" ಎಂದರು.

ಆ ಅಂಶವನ್ನು ಪರಿಗಣಿಸಿದ ನ್ಯಾಯಾಲಯ, ಕೋರ್ಟ್ ಕಮಿಷನರ್‌ಗಳ ನೇಮಕಕ್ಕೆ ಆದೇಶ ಹೊರಡಿಸಿತು.

Edit with WPS Office

VK
ವಿಜಯ ಕರ್ನಾಟಕ

# ಬಿಬಿಎಂಪಿ ಚುನಾವಣೆ: ಇಂದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ





**ವಿಕ ಸುದ್ದಿಲೋಕ** ಬೆಂಗಳೂರು

ಬಿಬಿಎಂಪಿ ಚುನಾವಣೆ ಮುಂದೂಡಿಕೆಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರಕಾರ ಸಲ್ಲಿಸಿರುವ ಮೇಲ್ಮನವಿ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ (ಡಿ. 18) ಕೈಗೆತ್ತಿಕೊಳ್ಳಲಿದೆ.

1976ರ ಕೆಎಂಸಿ ಕಾಯಿದೆಗೆ ತಿದ್ದುಪಡಿ ತರುವ ಮೂಲಕ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸುವ ಉದ್ದೇಶದಿಂದ ಸರಕಾರ ಬಿಬಿಎಂಪಿ ಚುನಾವಣೆಯನ್ನು ಈ ಹಿಂದಿನ ಚುನಾಯಿತ ಕೌನ್ಸಿಲ್ ಅವಧಿ ಮುಗಿಯುವ ಮುನ್ನ ಅಂದರೆ 2010ರ ಸೆ.10ರ ವೇಳೆಗೆ ನಡೆಸಿರಲಿಲ್ಲ. ಚುನಾವಣೆ ವಿಳಂಬ ಪ್ರಶ್ನಿಸಿ ಕಾಂಗ್ರೆಸ್ ಮುಖಂಡರಾದ ಎಂ. ಶಿವರಾಜು ಹಾಗೂ ಅಬ್ದುಲ್ ವಾಜಿದ್ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್‌ನ ವಿಭಾಗೀಯ ಪೀಠ, ವಾರ್ಡ್‌ವಾರು ಮೀಸಲಾತಿಯ ಅಂತಿಮ ಪಟ್ಟಿ ಪ್ರಕಟವಾದ ಆರು ವಾರಗಳ ಒಳಗೆ ಚುನಾವಣೆ ಪೂರ್ಣಗೊಳಿಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿತ್ತು. ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರಕಾರ ಡಿ. 10ರಂದು ಸುಪ್ರೀಂ ನಲ್ಲಿ ಮೇಲ್ಮನವಿ ಸಲ್ಲಿಸಿದೆ.

ಮಹಾನಗರದ ಆಡಳಿತ ಸುಧಾರಣೆಗಾಗಿ ವಾರ್ಡ್‌ಗಳ ಸಂಖ್ಯೆಯನ್ನು ಕನಿಷ್ಠ 243ಕ್ಕೆ ಹೆಚ್ಚಿಸುವ ಉದ್ದೇಶದಿಂದ ಕೆಎಂಸಿ ಕಾಯಿದೆಗೆ ತಿದ್ದುಪಡಿ ತರಲಾಗಿದೆ. ಸರಕಾರ ಸಾಂವಿಧಾನಿಕವಾಗಿ ಜಾರಿಗೆ ತಂದ ಕಾನೂನು ತಿದ್ದುಪಡಿಯ ಸಿಂಧುತ್ವವನ್ನು ಹೈಕೋರ್ಟ್ ಎತ್ತಿಹಿಡಿಯಬೇಕಿತ್ತು. ಕಾನೂನು ತಿದ್ದುಪಡಿಯು ಸಂವಿಧಾನದ 243 (ಯು) ವಿಧಿಯ ಆಶಯಗಳಿಗೆ ವಿರುದ್ಧವಾಗಿಲ್ಲ ಎಂದು ಸರಕಾರ ಮೇಲ್ಮನವಿಯಲ್ಲಿ ಪ್ರಸ್ತಾಪಿಸಿದೆ.

2007ರಲ್ಲಿ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 198ಕ್ಕೆ ಹೆಚ್ಚಿಸಲಾಗಿದೆ. ಆ ನಂತರ ನಗರದ ಜನಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ. ಜನಸಂಖ್ಯೆಗೆ ಅನುಗುಣವಾಗಿ ಪ್ರತಿನಿಧಿತ್ವ ಹೊಂದುವ ಉದ್ದೇಶದಿಂದ ವಾರ್ಡ್‌ಗಳ ಸಂಖ್ಯೆ ಹೆಚ್ಚಿಸುವ ಅಗತ್ಯವಿದೆ. ನಗರದಲ್ಲಿ ಪರಿಣಾಮಕಾರಿ ಆಡಳಿತದ ದೃಷ್ಟಿಯಿಂದಲೂ ಇದು ಅನಿವಾರ್ಯ. ಒಂದು ವೇಳೆ ವಾರ್ಡ್ ಸಂಖ್ಯೆ ಹೆಚ್ಚಳ ಮಾಡುವ ಕಾಯಿದೆ ಜಾರಿಗೆ ಅವಕಾಶ ನೀಡದಿದ್ದರೆ ನಗರಾಡಳಿತ ಅದರ ದುಷ್ಪರಿಣಾಮಗಳನ್ನು 5 ವರ್ಷಗಳ ಕಾಲ ಎದುರಿಸಬೇಕಾಗುತ್ತದೆ.

Edit with WPS Office

ವಿಜಯವಾಣಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ವಿಶ್ವದರ್ಜೆ ಬೆಂಗ್ಳೂರಿಗೆ ಸಂಕಲ್ಪ

## ಮಿಷನ್-2022 ಕಾರ್ಯ ಯೋಜನೆಗೆ ಸಿಎಂ ಬಿ.ಎಸ್.ಯಡಿಯೂರಪ್ಪ ಚಾಲನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ದೇಶದ 75ನೇ ಸ್ವಾತಂತ್ರ್ಯೋತ್ಸವ(2022)ದ ಹೊತ್ತಿಗೆ ಬೆಂಗಳೂರನ್ನು ವಿಶ್ವದರ್ಜೆಯ ಮಹಾನಗರವನ್ನಾಗಿ ರೂಪಿಸುವ ದೃಢ ಸಂಕಲ್ಪ ತೊಟ್ಟಿರುವ ರಾಜ್ಯ ಸರ್ಕಾರ ಇದಕ್ಕೆ ಪೂರಕವಾಗಿ ಸಮಗ್ರ ಕಾರ್ಯಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ. ಬೆಂಗಳೂರಿಗೆ ನವಚೈತನ್ಯ ತುಂಬುವ 'ಬೆಂಗಳೂರು ಮಿಷನ್-2022'ಕ್ಕೆ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಗುರುವಾರ ಚಾಲನೆ ನೀಡುವ ಮೂಲಕ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಯೋಜನೆ ಸಾಕಾರಗೊಳಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಿಟ್ಟರು. ಕರೊನೋತ್ತರ ಬೆಂಗಳೂರು ಮಹಾನಗರ ಹೀಗಿರಬೇಕೆಂಬ ಸ್ಪಷ್ಟ ಪರಿಕಲ್ಪನೆ ಹಾಗೂ ಬೆಳವಣಿಗೆ ವೇಗಕ್ಕೆ ಅನುಗುಣವಾಗಿ 20 ವರ್ಷಗಳ ಮುನ್ನೋಟ ಆಧರಿಸಿ, ಎಲ್ಲ ಆಯಾಮಗಳಲ್ಲೂ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಕಾಳಜಿ, ಆಸಕ್ತಿ ವಹಿಸಿದೆ.

ವಿವರ ಪುಟ 5B

**04** ವಲಯಗಳ ಮೇಲೆ ಹೆಚ್ಚಿನ ಗಮನ

**02** ವರ್ಷದೊಳಗೆ ಬದಲಾಗಲಿದೆ ಚಿತ್ರಣ

ವಿಶ್ವದ ಅತ್ಯುತ್ತಮ ನಗರಗಳಲ್ಲಿ ಬೆಂಗಳೂರು ಒಂದಾಗಬೇಕು ಎಂಬ ಸದಾಶಯದೊಂದಿಗೆ 'ಬೆಂಗಳೂರು ಮಿಷನ್-2022' ಮಹತ್ವಾಕಾಂಕ್ಷಿ ಕಾರ್ಯಯೋಜನೆ ರೂಪಿಸಿ, 2 ವರ್ಷಗಳ ಕಾಲಮಿತಿ ವಿಧಿಸಲಾಗಿದೆ. ಯೋಜನೆಗೆ ಬೇಕಾದ ಹಣಕಾಸಿನ ವ್ಯವಸ್ಥೆ ಮಾಡಲಾಗಿದೆ.
| ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ



'ಬೆಂಗಳೂರು ಮಿಷನ್-2022' ಕಾರ್ಯಯೋಜನೆಗೆ ಚಾಲನೆ ನೀಡಿದ ಸಿಎಂ ಯಡಿಯೂರಪ್ಪ. ಡಿಸಿಎಂ ಅಶ್ವತ್ಥ ನಾರಾಯಣ, ಸಚಿವರಾದ ಸುರೇಶ್ ಕುಮಾರ್, ಅಶೋಕ್, ಬಿ.ಎ.ಬಸವರಾಜ, ಗೋಪಾಲಯ್ಯ, ಡಾ. ಸುಧಾಕರ್ ಮತ್ತಿತರರಿದ್ದರು.

### ಯೋಜನೆಯ ನೀಲಿನಕ್ಷೆ ಸಿದ್ಧ

ಬೆಂಗಳೂರಿನ ಖ್ಯಾತಿಗೆ ಇನ್ನಷ್ಟು ಹೊಳಪು ನೀಡಿ ಹಳೆಯ ಬೇರಿಗೆ ಹೊಸ ತಲೆಮಾರು ಜೋಡಿಸುವ ರೀತಿ ನೀಲಿನಕ್ಷೆ ಸಿದ್ಧಪಡಿಸಿದೆ. ಸುಗಮ ಸಂಚಾರ, ಸ್ವಚ್ಛ, ಹಸಿರು ಹಾಗೂ ಜನ ಸಂಪರ್ಕ ವಲಯ ಗುರುತಿಸಿ, ಜ್ವಲಂತ ಸಮಸ್ಯೆ ಪರಿಹಾರಕ್ಕೆ ಒತ್ತು ನೀಡಿದೆ. ಆ ಮೂಲಕ ಕ್ಷಿಪ್ರಗತಿ ಬೆಳವಣಿಗೆ ಪರಿಣಾಮಗಳಿಗೆ ಪರಿಹಾರ ಕಂಡುಕೊಳ್ಳುವ ಆಶಯ ಹೊಂದಲಾಗಿದೆ. ಬದಲಾವಣೆಗೆ ತಕ್ಕಂತೆ ರೂಪುಗೊಂಡ ಯೋಜನೆ ಅನುಷ್ಠಾನಕ್ಕೆ ಸಂಸ್ಥೆಗಳನ್ನು ಗುರುತಿಸಿ ಜವಾಬ್ದಾರಿ ಒಪ್ಪಿಸಿ, 2 ವರ್ಷ ಕಾಲಮಿತಿ ವಿಧಿಸಲಾಗಿದೆ. ಅನುದಾನವನ್ನು ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆ.

### ಆದ್ಯತಾ ವಲಯ

- ಸುಗಮ ಸಂಚಾರ—ಅತಿ ದಟ್ಟಣೆಯ ಒಟ್ಟು 190 ಕಿ.ಮೀ. ಉದ್ದದ 12 ರಸ್ತೆಗಳನ್ನು ಮೇಲ್ದರ್ಜೆಗೇರಿಸುವುದು
- ಸ್ವಚ್ಛ ಬೆಂಗಳೂರು-ಜನರ ಸಹಕಾರದಿಂದ ತ್ಯಾಜ್ಯ ವಿಲೇವಾರಿಯ ದಕ್ಷ ಹಾಗೂ ಸಮರ್ಥ ನಿರ್ವಹಣೆಗೆ ತಾಂತ್ರಿಕ ರೂಪ ನೀಡುವುದು
- ಹಸಿರು ಬೆಂಗಳೂರು-ಕೆಲ ಸಾರ್ವಜನಿಕ ಉದ್ದಿಮೆಗಳ ಭೂಮಿಯನ್ನು ಹಸಿರು ಹೊದಿಕೆ ಹೆಚ್ಚಿಸಲು ಮರುಬಳಕೆ
- ಜನಸಂಪರ್ಕ- ಏಕೀಕೃತ ಡಿಜಿಟಲ್ ವೇದಿಕೆಯಲ್ಲಿ ಖಾತೆ, ಆಸ್ತಿ ತೆರಿಗೆ ಪಾವತಿ, ಜನನ ಮತ್ತು ಪ್ರಮಾಣಪತ್ರಗಳ ವಿತರಣೆ, ವ್ಯಾಪಾರ ಪರವಾನಗಿಯಂತಹ ಹಲವು ನಾಗರಿಕ ಸೇವೆ ಸೌಲಭ್ಯ

Bengaluru Edition
Dec 18, 2020 Page No. 3
Powered by : eReleGo.com

Edit with WPS Office

ವಿಜಯವಾಣಿ
ಕನ್ನಡ ಪ್ರಭಾ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

ಮುಖ್ಯಮಂತ್ರಿ ಯಡಿಯೂರಪ್ಪ ಪಣ | ಬೆಂಗಳೂರು ಮಿಷನ್-2022 ಕುರಿತು ಮಾಧ್ಯಮ ಸಂವಾದ

# ಅತ್ಯುತ್ತಮ ನಗರವಾಗಿ ಬೆಂಗಳೂರು ಅಭಿವೃದ್ಧಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಹಲವು ಹಿರಿಮೆ-ಗರಿಮೆಗಳಿಗೆ ಪಾತ್ರವಾಗಿರುವ ಬೆಂಗಳೂರು ಮಹಾನಗರವನ್ನು ಆಮೂಲಾಗ್ರವಾಗಿ ಅಭಿವೃದ್ಧಿಪಡಿಸಿ, ಜಗತ್ತಿನ ಅತ್ಯುತ್ತಮ ನಗರಗಳಲ್ಲಿ ಒಂದಾಗಿ ರೂಪಿಸಲು ರಾಜ್ಯ ಸರ್ಕಾರ ಪಣ ತೊಟ್ಟಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ಮಿಷನ್-2022 ಕಾರ್ಯಯೋಜನೆಗೆ ಚಾಲನೆ ನೀಡಿ, ಮಾಧ್ಯಮ ಸಂವಾದದಲ್ಲಿ ಮಾತನಾಡಿದರು. ಕೆಂಪೇಗೌಡರ ದೂರದೃಷ್ಟಿ ಫಲವಾಗಿ 500 ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ಈ ಮಹಾನಗರ ಪ್ರಗತಿಪರ ಧೋರಣೆಗೆ ಪೂರಕವಾಗಿಯೇ ಬೆಳೆದಿದೆ. ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ಉದ್ಯಾನನಗರ, ಉದ್ಯಮ ನಗರ, ಸಿಲಿಕಾನ್ ಸಿಟಿ, ಆರ್ಥಿಕ ರಾಜಧಾನಿ ಹಾಗೂ ಯುವಜನರ ಕನಸಿನ ನಗರವಾಗಿದೆ ಎಂದರು.

ಪ್ರತಿಷ್ಠೆಗೆ ಪೂರಕವಾಗುವಂತೆ ಕ್ಷಿಪ್ರ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಬೆಂಗಳೂರಿನ ಸ್ಥಾನಕ್ಕೆ ಪೂರಕವಾದ ರೀತಿಯಲ್ಲಿ ಮೂಲ ಸೌಕರ್ಯಗಳ ಸುಧಾರಣೆ, ಜ್ವಲಂತ ಸಮಸ್ಯೆಗಳ ನಿವಾರಣೆ ಜತೆಗೆ ದೂರಗಾಮಿ ಪರಿಣಾಮಗಳಿಗೆ ಪರಿಹಾರ ಕಲ್ಪಿಸಲೆಂದು ಸರ್ಕಾರದೊಂದಿಗೆ 'ಬೆಂಗಳೂರು ಮಿಷನ್-2022' ಕಾರ್ಯಯೋಜನೆಯ ಸಿದ್ಧತೆ ಸಿದ್ಧಪಡಿಸಲಾಗಿದೆ ಎಂದು ಯಡಿಯೂರಪ್ಪ ವಿವರಿಸಿದರು. ಸುಗಮ ಸಂಚಾರ, ಸ್ವಚ್ಛ, ಸುಂದರ ನಗರವನ್ನಾಗಿ ರೂಪಿಸಿ, ಸರ್ಕಾರಿ ಯೋಜನೆಗಳು ಮತ್ತು ಸೇವೆಗಳನ್ನು ನಾಗರಿಕರಿಗೆ ಸುಲಭವಾಗಿ ಶೀಘ್ರಗತಿಯ ಉದ್ದೇಶದಿಂದ ತಂತ್ರಜ್ಞಾನದ ಪರಿಣಾಮಕಾರಿ ಬಳಕೆಗೆ ಈ ಯೋಜನೆಯಲ್ಲಿ ಆದ್ಯತೆ ನೀಡಲಾಗಿದೆ ಎಂದರು.

» ಪ್ರಧಾನಿ ಮೋದಿ ಮಾತುಗಳಿಂದ ಪ್ರಭಾವಿತ

ನಗರ ಎದುರಿಸುತ್ತಿರುವ ಪ್ರಮುಖ ಸವಾಲು, ಸಮಸ್ಯೆಗಳನ್ನು ಕೇಂದ್ರೀಕರಿಸಿ, ಕೂಲಂಕಷವಾಗಿ ಅಧ್ಯಯನ ನಡೆಸಿ, ಸ್ಪಷ್ಟ ಮುನ್ನೋಟದೊಂದಿಗೆ ಈ ಯೋಜನೆ ಸಿದ್ಧಪಡಿಸಲಾಗಿದೆ. ವಿಶ್ವದರ್ಜೆಯ ನಗರವಾಗಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ ಎಂದರು.

**ಮೋದಿಯಿಂದ ಪ್ರಭಾವಿತ:** ಪ್ರತಿ ದೇಶದ ಭೇಟಿ ಹಾಗೂ ರಾಜ್ಯಕ್ಕೆ ಬಂದ ಎಲ್ಲ ಸಂದರ್ಭಗಳಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಮಹಾನಗರದ ವೈಶಿಷ್ಟ್ಯದ ಬಗ್ಗೆ ಪ್ರಸ್ತಾಪಿಸಿ, ಅಭಿವೃದ್ಧಿಯಲ್ಲಿ ನಗರ ಮುನ್ನಡೆಯಲ್ಲಿ ಇರಬೇಕು ಎಂದು ಸಲಹೆ ನೀಡಿದ್ದರು. ಉದ್ಯಮಶೀಲತೆ, ಮಾಹಿತಿ-ಜೈವಿಕ ತಂತ್ರಜ್ಞಾನ, ವಿಜ್ಞಾನ-ತಂತ್ರಜ್ಞಾನ, ವಾಯುಯಾನ ಕ್ಷೇತ್ರದ ಆವಿಷ್ಕಾರ, ಅಂತಾರಾಷ್ಟ್ರೀಯಮಟ್ಟದ ಸಂಶೋಧನಾ ಕೇಂದ್ರಗಳು, ಉನ್ನತ ಅಧ್ಯಯನ ಸಂಸ್ಥೆಗಳ ಬಗ್ಗೆ ಮೋದಿ ವಿಶೇಷ ಶ್ಲಾಘನೆ ಪ್ರಭಾವಿತರಾಗಿ ಬೆಂಗಳೂರು ಮುನ್ನಡೆಯ ಅಭಿವೃದ್ಧಿ ಯೋಜನೆಗೆ ದೃಢಸಂಕಲ್ಪ ಮಾಡಿರುವೆ ಎಂದು ಯಡಿಯೂರಪ್ಪ ಹೇಳಿದರು.

**6 ತಿಂಗಳಿಗೊಮ್ಮೆ ಪರಿಶೀಲನೆ:** ಬೆಂಗಳೂರು ಮಿಷನ್-2022 ಅನ್ನು ಕಾಲಮಿತಿಯೊಳಗೆ ಅನುಷ್ಠಾನಕ್ಕೆ ಬದ್ಧವಾಗಿದ್ದೇವೆ. 6 ತಿಂಗಳಿಗೊಮ್ಮೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಪ್ರಗತಿ ಪರಿಶೀಲಿಸಲಾಗುವುದು. ಆ ಮೂಲಕ ಬೆಂಗಳೂರಿಗೆ ಜಾಗತಿಕವಾಗಿ ನಗರದ ಭವ್ಯ ಇತಿಹಾಸ, ಪರಂಪರೆ, ಸಂಸ್ಕೃತಿಯನ್ನು ಸಂರಕ್ಷಿಸಿ ಮತ್ತು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಉದ್ದೇಶ ಹೊಂದಲಾಗಿದೆ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಸಚಿವರಾದ ಆರ್. ಅಶೋಕ್, ಬಿ.ಎ.ಬಸವರಾಜ, ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ್‌ಭಾಸ್ಕರ್, ಹಿರಿಯ ಅಧಿಕಾರಿಗಳಾದ ರಾಕೇಶ್ ಸಿಂಗ್, ಬಿಬಿಎಂಪಿ ಆಡಳಿತಾಧಿಕಾರಿ ಗೌರವ ಗುಪ್ತ ಮಾಧ್ಯಮ ಸಂವಾದದಲ್ಲಿ ಭಾಗವಹಿಸಿದ್ದರು. ಡಿಸಿಎಂ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಸಚಿವರಾದ ಸುರೇಶ್‌ಕುಮಾರ್, ಕೆ.ಗೋಪಾಲಯ್ಯ, ಡಾ.ಕೆ.ಸುಧಾಕರ್ ಉಪಸ್ಥಿತರಿದ್ದರು.

## ಬೆಂಗಳೂರು ಮಿಷನ್-2022 ಪೂರಕ ಅಂಶಗಳು

- ಜನಸಂಖ್ಯೆ 1.2 ಕೋಟಿ
- ಯುವಜನರ (35 ವರ್ಷಕ್ಕಿಂತ ಕಡಿಮೆ) ಪ್ರಮಾಣ ಶೇ.65
- ವಾಹನಗಳ ಸಂಖ್ಯೆ 84.50 ಲಕ್ಷ
- ರಾಜ್ಯದ ಒಟ್ಟು ಆದಾಯದಲ್ಲಿ ಶೇ.50 ಬೆಂಗಳೂರಿನದ್ದು
- ಸಾಕ್ಷರತೆ ಪ್ರಮಾಣದ ಪ್ರಕಾರ ಬೆಂಗಳೂರಿನಲ್ಲಿ ಬಹುಜನ ಪಾಲು ಶೇ.78 ಕಡಿಮೆ
- ಐಟಿ ಉದ್ಯಮಿಗಳ ಸಂಖ್ಯೆ 15 ಲಕ್ಷಕ್ಕೂ ಹೆಚ್ಚು
- ಮೆಟ್ರೋ ರೈಲಿನಲ್ಲಿ ಪ್ರಸ್ತುತ ದಿನಕ್ಕೆ 7 ಲಕ್ಷ ಪ್ರಯಾಣಿಕರ ಸಂಚಾರ ಸಾಮರ್ಥ್ಯ 2022ರ ವೇಳೆಗೆ 10 ಲಕ್ಷಕ್ಕೆ ಹೆಚ್ಚಳ
- ಎಸ್‌ಟಿಪಿಆರ್, ಮೈಸೂರು ಲ್ಯಾಂಡ್ ಫರ್‌ನಲ್ಲಿ ಹೊಸ ಉದ್ಯಾನ ನಿರ್ಮಾಣ
- ಪೆರಿಫೆರಲ್ ರಿಂಗ್ ರಸ್ತೆ-ಹೆಬ್ಬಾಳದಿಂದ ಕೆರೆ 11.4 ಕಿ.ಮೀ. ರಾಜಕಾಲುವೆ ಕೆಲಸದ ಪೂರ್ಣಗೊಳಿಕೆ
- ತ್ಯಾಜ್ಯ ವಿಲೇವಾರಿ ವ್ಯವಸ್ಥೆ ಮೇಲೆ ನಿಗಾವಹಿಸಲು ಜಿಪಿಎಸ್ ಅಳವಡಿಕೆ, ನಿರಂತರವಾಗಿ ಕಾರ್ಯನಿರ್ವಹಿಸಲು ತಂತ್ರಜ್ಞಾನ ಬಳಕೆ
- ತ್ಯಾಜ್ಯ ನೀರಿನ ಸಂಪೂರ್ಣ ಸಂಸ್ಕರಣೆ ಹಾಗೂ ಮರು ಬಳಕೆಗೆ ಆದ್ಯತೆ
- ಬಿಡದಿಯಲ್ಲಿ ಕೆಪಿಸಿಎಲ್ ಸ್ಥಾಪಿಸುತ್ತಿರುವ ತ್ಯಾಜ್ಯ ವಿದ್ಯುತ್ ಘಟಕ 2022ಕ್ಕೆ ಕಾರ್ಯಾರಂಭ ನಿರೀಕ್ಷೆ
- ಐತಿಹಾಸಿಕ ಹೆಗ್ಗುರುತುಗಳಾದ ಹಿನ್ನೆಲೆಯಲ್ಲಿ ಬೆಂಗಳೂರು ಮೂಲ ಸ್ಮಾರಕಗಳು, ಸಂಸ್ಕೃತಿ, ಕರಕುಶಲ ಕಲೆಗಳನ್ನು ಪರಿಚಯಿಸುವ ತಾಣಗಳನ್ನು ಅಭಿವೃದ್ಧಿಪಡಿಸಿ ನಾಗರಿಕರೊಂದಿಗೆ ಬಾಂಧವ್ಯ ಬೆಸೆಯಲು ಆದ್ಯತೆ ಕಲ್ಪಿಸುವುದು





ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಗುರುವಾರ ನಡೆದ ಬೆಂಗಳೂರು ಮಿಷನ್-2022 ಕಾರ್ಯಯೋಜನೆಗೆ ಚಾಲನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ, ಸಚಿವರಾದ ಆರ್. ಅಶೋಕ್, ಸುರೇಶ್‌ಕುಮಾರ್, ಬಿ.ಎ. ಬಸವರಾಜ, ಕೆ. ಗೋಪಾಲಯ್ಯ ಉಪಸ್ಥಿತರಿದ್ದರು.

ವಿಶ್ವಮಟ್ಟದಲ್ಲಿ ತನ್ನದೇ ಆದ ವಿಶೇಷ ಛಾಪು ಮೂಡಿಸಿ ಜಾಗತಿಕ ನಕ್ಷೆಯಲ್ಲಿ ರಾರಾಜಿಸುತ್ತಿರುವ ರಾಜ್ಯ ರಾಜಧಾನಿ ಬೆಂಗಳೂರಿನ ಚಿತ್ರಣ ಇನ್ನೆರಡು ವರ್ಷದಲ್ಲಿ ಸಂಪೂರ್ಣ ಬದಲಾಗಲಿದೆ. ಆರೋಗ್ಯಕರ ಬೆಂಗಳೂರು ಮಹಾನಗರ ಹೀಗಿರಬೇಕೆಂಬ ಸ್ಪಷ್ಟ ಪರಿಕಲ್ಪನೆಯಲ್ಲಿ ರಾಜ್ಯ ಸರ್ಕಾರ 'ಬೆಂಗಳೂರು ಮಿಷನ್-2022' ಮಹತ್ವಾಕಾಂಕ್ಷಿ ಯೋಜನೆ ಆರಂಭಿಸುತ್ತಿದ್ದು, ಎಲ್ಲ ಆಯಾಮಗಳಲ್ಲಿ ಅಭಿವೃದ್ಧಿಗೆ ಹೆಚ್ಚಿನ ಒತ್ತು ಅಡಕವಾಗಿದೆ. ಹೊಸ ಅವಧಿಯ ನೀಲನಕ್ಷೆ ರೂಪಿಸಿದ್ದು, ಅಧಿಕ ಹೊಣೆ ಹೊರುವ ಯೋಜನೆಗಳು ಯೋಜನೆಯ ಅನುಷ್ಠಾನಕ್ಕೆ ಸಿದ್ಧಪಡಿಸಲಾಗಿದ್ದು, ಇದರಿಂದ ಬೆಂಗಳೂರು ಹೇಗಿರಲಿದೆ ಎಂಬ ಸಂಕ್ಷಿಪ್ತ ಚಿತ್ರಣ ಇಲ್ಲಿದೆ.

## ಸ್ವಚ್ಛ ಬೆಂಗಳೂರು

ಸಿಲಿಕಾನ್ ಸಿಟಿಯ ಜನಸಂಖ್ಯೆ 1.2 ಕೋಟಿ ಮೀರಿದೆ. ಪ್ರತಿದಿನ 6 ಸಾವಿರ ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ನಾಗರಿಕರ ಸಹಕಾರದೊಂದಿಗೆ ದಕ್ಷತೆಯಿಂದ ನಿರ್ವಹಿಸುವುದು 'ಸ್ವಚ್ಛ ಬೆಂಗಳೂರು' ಪರಿಕಲ್ಪನೆಯಾಗಿದೆ.

- ತ್ಯಾಜ್ಯ ವಿಲೇವಾರಿಯ ದಕ್ಷ ಹಾಗೂ ಸಮರ್ಥ ನಿರ್ವಹಣೆಗೆ ಸಾಂಸ್ಥಿಕ ರೂಪ ನೀಡುವುದು.
- ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಉನ್ನತೀಕರಿಸಿ ಸಾಮರ್ಥ್ಯಕ್ಕೆ ತಕ್ಕಂತೆ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುವುದು.
- ತಂತ್ರಜ್ಞಾನದ ನೆರವಿನಿಂದ ಘನ ತ್ಯಾಜ್ಯ ಸಂಗ್ರಹ, ಸಾಗಣೆ ನಿರ್ವಹಣೆ ಹಾಗೂ ನಿಗಾವಹಿಸುವುದು.
- ತ್ಯಾಜ್ಯ ಸುರಿಯುವ ಕಪ್ಪುಕಲೆಯ ಸ್ಥಳಗಳ ಅಭಿವೃದ್ಧಿ
- ಮಾದರಿ ತ್ಯಾಜ್ಯ ಸಂಗ್ರಹ ಕೇಂದ್ರಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವುದು.
- 'ನನ್ನ ಕಸ ನನ್ನ ಜವಾಬ್ದಾರಿ' ತತ್ವದಡಿ ಎಲ್ಲ ಹಂತಗಳಲ್ಲಿ ಘನ ತ್ಯಾಜ್ಯದ ಯಶಸ್ವಿ ನಿರ್ವಹಣೆಗೆ ನಾಗರಿಕರ ಸಹಭಾಗಿತ್ವ ಹೆಚ್ಚಿಸಲು ತರಬೇತಿದಾರರು ಹಾಗೂ ಜಾಗೃತಿ ಮೂಡಿಸುವ ತರಬೇತಿ.
- ಪ್ರತಿ ವಾರ್ಡ್‌ನಲ್ಲಿ ಗೊಬ್ಬರ ತಯಾರಿಕೆ ಹಾಗೂ ಹಸಿ ತ್ಯಾಜ್ಯ ಮನೆಗಳ ಕುರಿತು ಸಮುದಾಯಕ್ಕೆ ಮಾಹಿತಿ ಮತ್ತು ಮಾರ್ಗದರ್ಶನ ನೀಡಲು ಕಲಿಕಾ ಕೇಂದ್ರಗಳ ಸ್ಥಾಪನೆ.
- ಕೈಗಾರಿಕಾ ವಲಯಗಳಲ್ಲಿ ಗೊಬ್ಬರ ಖರೀದಿ ಕೇಂದ್ರಗಳನ್ನು ಸ್ಥಾಪಿಸಿ, ಮನೆಯಲ್ಲಿಯೇ ಹಸಿ ತ್ಯಾಜ್ಯ ಸಂಸ್ಕರಣೆಗೆ ಪ್ರೋತ್ಸಾಹಿಸುವುದು.

## ಉತ್ತರ ಸಿಗದ ಪ್ರಶ್ನೆಗಳು

ಬೆಂಗಳೂರಿಗೆ ಸಮಗ್ರತೆಯ ಸ್ಪರ್ಶ ನೀಡಲೆಂದು ರೂಪಿಸಿದ 'ಬೆಂಗಳೂರು ಮಿಷನ್-2022' ಕಾರ್ಯಯೋಜನೆಯ ಅಂದಾಜು ವೆಚ್ಚ, ಸರ್ಕಾರದ ಪಾಲೆಷ್ಟು, ಬೇಕಾದ ಆರ್ಥಿಕ ಸಂಪನ್ಮೂಲ ಕ್ರೋಡೀಕರಣಕ್ಕೆ ಹುಡುಕಿರುವ ಮಾರ್ಗಗಳನ್ನು ರೂಪಿಸಲಾಗಿದೆಯೇ? ಎಂಬ ಪ್ರಶ್ನೆಗಳಿಗೆ ಸಿಎಂ, ಸಚಿವರಾದಿಯಾಗಿ ಹಿರಿಯ ಅಧಿಕಾರಿಗಳಿಂದ ನಿರ್ದಿಷ್ಟವಾದ ಉತ್ತರಗಳು ಸಿಗಲಿಲ್ಲ. ಆರ್ಥಿಕ ಸಂಪನ್ಮೂಲ ಕ್ರೋಡೀಕರಣಕ್ಕೆ ಹಸಿರು ನಿಶಾನೆ ನೀಡಲಾಗಿದೆ. ಬಜೆಟ್‌ನಲ್ಲಿ ಅನುದಾನ ಮೀಸಲಿರಿಸಲಾಗುವುದು, ಕಾರ್ಯಸಾಧ್ಯವಾದ ಯೋಜನೆಯನ್ನು ರೂಪಿಸಲಾಗಿದೆ. ಅನುಷ್ಠಾನಕ್ಕೆ ಏಜೆನ್ಸಿಗಳನ್ನು ಗುರುತಿಸಲಾಗಿದೆ, ಹಣಕಾಸಿನ ಅಡಚಣೆಯಾಗದು ಎಂಬ ಹಾರಿಕೆಯ ಉತ್ತರಗಳೇ ಕೇಳಿಬಂದವು.



## ಸುಗಮ ಸಂಚಾರ


ವೇಗವಾಗಿ ಬೆಳೆಯುತ್ತಿರುವ ಬೆಂಗಳೂರಿನಲ್ಲಿ ವಾಹನಗಳ ಸಂಖ್ಯೆ 45 ಲಕ್ಷ ದಾಟಿರುವ ಅಂದಾಜಿದೆ. ಅತ್ಯುತ್ತಮ ರಸ್ತೆಗಳ ಅಭಿವೃದ್ಧಿ, ಸಾರ್ವಜನಿಕ ಸಾರಿಗೆ ಬಳಕೆಗೆ ಉತ್ತೇಜನ, ಸಂಚಾರ ವ್ಯವಸ್ಥೆಯಲ್ಲಿ ತಂತ್ರಜ್ಞಾನ ಬಳಕೆ ಇತ್ಯಾದಿ ಕ್ರಮಗಳು 'ಸುಗಮ ಸಂಚಾರ'ದ ಭಾಗವಾಗಿವೆ.

- 12 ಅತಿ ದಟ್ಟಣೆಯ ಒಟ್ಟು 190 ಕಿ.ಮೀ. ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೇರಿಸುವುದು.
- ಸ್ಮಾರ್ಟ್ ಸಿಟಿ ಯೋಜನೆಯಡಿ ರಸ್ತೆ ನಿರ್ಮಾಣ ಕಾರ್ಯ ಶೀಘ್ರ ಪೂರ್ಣಗೊಳಿಸುವುದು.
- ವಾರ್ಷಿಕ ನಿರ್ವಹಣಾ ಒಪ್ಪಂದದಡಿ 400 ಕಿ.ಮೀ. ಉದ್ದದ ಪ್ರಮುಖ ಸಂಚಾರ ರಸ್ತೆಗಳ ಅತ್ಯುತ್ತಮ ನಿರ್ವಹಣೆ.
- ರಸ್ತೆ ಸುರಕ್ಷತಾ ಪರಿಕರ ಅಳವಡಿಸಿ ಪ್ರಯಾಣಿಕರ ಸುರಕ್ಷತೆ ಖಾತರಿಪಡಿಸುವುದು.
- ಸಮನ್ವಯ ಹೊಂದಿದ ಸಿಗ್ನಲ್ ದೀಪಗಳ ಅಳವಡಿಕೆ.
- ವಿದ್ಯುತ್ ಚಾಲಿತ ಸಮೂಹ ಸಾರಿಗೆ ವ್ಯವಸ್ಥೆಗಳಿಗೆ ಉತ್ತೇಜನ.
- ಮೆಟ್ರೋ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸುವುದು.
- ಪ್ರಮುಖ ರಸ್ತೆಗಳಲ್ಲಿ ಬಸ್ ಆದ್ಯತಾ ಪಥ ಗುರುತಿಸುವುದು.
- ಉಪನಗರ ರೈಲು ಯೋಜನೆ ಕಾರ್ಯಗತಗೊಳಿಸುವುದು.

## ಹಸಿರು ಬೆಂಗಳೂರು

- ಶೇ.ಸಾರ್ವಜನಿಕ ಉದ್ದೇಶಗಳ ಭೂಮಿಯನ್ನು ನಗರದ ಹಸಿರು ಹೊದಿಕೆ ಹೆಚ್ಚಿಸಲು ಮರುಬಳಕೆ.
- ನಗರದ ಹೊರ ವಲಯದ 400 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಎರಡು ಬೃಹತ್ ವೃಕ್ಷೋದ್ಯಾನಗಳ ಅಭಿವೃದ್ಧಿ.
- ಹುಣಸಹಳ್ಳಿ, ಜೆ.ಪಿ.ನಗರ, ಹಲಗೂರು ಮತ್ತು ಮತ್ತಿಕೆರೆಯ ಕೆರೆ ಅರಣ್ಯಗಳನ್ನು ಅಭಿವೃದ್ಧಿಗೊಳಿಸುವುದು.
- ವಾಯುಮಾಲಿನ್ಯದ ಮೇಲೆ ನಿಗಾವಹಿಸಲು ವಾಯು ಗುಣಮಟ್ಟ ಪರೀಕ್ಷಾ ಉಪಕರಣಗಳ ಸಂಖ್ಯೆ 500ಕ್ಕೇರಿಕೆ.
- ಕೆ-100 ರಾಜಕಾಲುವೆ ಯೋಜನೆ ಮೂಲಕ ರಾಜಕಾಲುವೆಗಳು ಹರಿಯುವ ಪ್ರದೇಶದ ಅಭಿವೃದ್ಧಿ.
- 25 ಕೆರೆಗಳ ಪುನಶ್ಚೇತನಕ್ಕೆ ಕ್ರಮ, ಆ ಮೂಲಕ ನೀರಿನ ಗುಣಮಟ್ಟ ಸುಧಾರಿಸುವ ಜತೆಗೆ 20 ಕೆರೆಗಳಲ್ಲಿ ಪ್ರತಿ ಕ್ಷಣ ನೀರಿನ ಗುಣಮಟ್ಟದ ಮೇಲೆ ನಿಗಾ, ಜೀವವೈವಿಧ್ಯತೆ ರಕ್ಷಣೆಗೆ ಆದ್ಯತೆ.
- ಸ್ವಯಂಸೇವಕರು ಹಾಗೂ ಇತರ ಭಾಗೀದಾರರೊಂದಿಗೆ ಯೋಜನೆಯ ಅನುಷ್ಠಾನ.





## ಜನಸಂಪರ್ಕ

- ಏಕೀಕೃತ ಡಿಜಿಟಲ್ ವೇದಿಕೆಯಲ್ಲಿ ಖಾತೆ, ಆಸ್ತಿ ತೆರಿಗೆ ಪಾವತಿ, ಜನನ ಮತ್ತು ಮರಣ ಪ್ರಮಾಣಪತ್ರಗಳ ವಿತರಣೆ, ವ್ಯಾಪಾರ ಪರವಾನಗಿ ಇತ್ಯಾದಿ ನಾಗರಿಕ ಸೇವೆಗಳನ್ನು ಒದಗಿಸುವುದು.
- ನಾಗರಿಕರಿಗೆ ಆನ್‌ಲೈನ್‌ನಲ್ಲಿ ರಸ್ತೆ ಕುರಿತು ಮಾಹಿತಿ.
- ನಾಗರಿಕ ಸೇವೆಗಳು, ವಿವಿಧ ಯೋಜನೆಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳ ಕುರಿತು ಮಾಹಿತಿ.
- ಸಾರ್ವಜನಿಕ ಕುಂದುಕೊರತೆ ನಿವಾರಣೆಗೆ ಏಕೀಕೃತ ವೇದಿಕೆಯಾಗಿ ಸಹಾಯ ಪೋರ್ಟಲ್‌ನ ಮರುವಿನ್ಯಾಸ.
- ಬೆಂಗಳೂರಿನ ಸಂಸ್ಕೃತಿ, ಪರಂಪರೆ ಮತ್ತು ಕರಕುಶಲ ವಸ್ತು ಸಂಗ್ರಹಾಲಯ ಸ್ಥಾಪನೆ.
- ಸಾರ್ವಜನಿಕರಿಗೆ ಮನರಂಜನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನದ ತಾಣಗಳ ಅಭಿವೃದ್ಧಿ. ಆ ಮೂಲಕ ಕಲಾವಿದರು, ಕುಶಲಕರ್ಮಿಗಳು ಇತರ ಸ್ಥಳೀಯ ವೃತ್ತಿಯಲ್ಲಿರುವವರಿಗೆ ಅವಕಾಶಗಳನ್ನು ಒದಗಿಸುವುದು.
- ಬೆಂಗಳೂರಿನ ತಂತ್ರಜ್ಞಾನದ ಇತಿಹಾಸವನ್ನು ಪರಿಚಯಿಸುವ ಸಂವಹನಶೀಲ ಡಿಜಿಟಲ್ ಪ್ರಾತ್ಯಕ್ಷಿಕೆ ಸ್ಥಾಪನೆ.
- ಉದ್ಯಮಶೀಲತೆ, ನಾವೀನ್ಯತೆ, ಜೈವಿಕ ತಂತ್ರಜ್ಞಾನ ಉದ್ಯಮಗಳ ಮುನ್ನಡೆ ಬಿಂಬಿಸುವ ಬೆಂಗಳೂರು ಇನ್ನೊವೇಶನ್ ಕೇಂದ್ರದ ಸ್ಥಾಪನೆ.



Edit with WPS Office

ವಿಜಯವಾಣಿ

ವಿಜಯವಾಣಿ ನಂ 1

# ಸಿಲಿಕಾನ್ ಸಿಟಿ ಜನರಿಗೆ ಮಾಸಿಕ ಕಸದ ಶುಲ್ಕ ವಿಧಿಸುವುದಿಲ್ಲ

- ಬಿಬಿಎಂಪಿ ಆಡಳಿತಾಧಿಕಾರಿ ಗೌರವ ಗುಪ್ತಾ ಸ್ಪಷ್ಟನೆ
- ಬೆಂಗಳೂರು ಮಿಷನ್-2022 ಮಾಧ್ಯಮ ಸಂವಾದ



## ಸ್ಮಾರ್ಟ್‌ಸಿಟಿಗೆ ಕರೊನಾ ಛಾಯೆ

## ಬಿಬಿಎಂಪಿ ಮಸೂದೆಗೆ ಶೀಘ್ರವೇ ಅಂಕಿತ

Bengaluru Edition
Dec 18, 2020 Page No. 9
Powered by : eReleGo.com

Edit with WPS Office

ವಿಜಯವಾಣಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಪಾಲಿಕೆಗಳ ಚುನಾವಣೆ ನಡೆಸಿ

**ಬೆಂಗಳೂರು:** ಅವಧಿ ಪೂರ್ಣಗೊಂಡಿರುವ ಬಿಬಿಎಂಪಿಗೆ ಚುನಾವಣೆ ನಡೆಸುವಂತೆ ಇತ್ತೀಚೆಗೆ ಸರ್ಕಾರಕ್ಕೆ ನಿರ್ದೇಶಿಸಿದ್ದ ಹೈಕೋರ್ಟ್, ಇದೀಗ ಹುಬ್ಬಳ್ಳಿ- ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ಮಹಾನಗರ ಪಾಲಿಕೆ ಚುನಾವಣೆ ನಡೆಸುವಂತೆ ಸರ್ಕಾರ, ಚುನಾವಣಾ ಆಯೋಗಕ್ಕೆ ಆದೇಶಿಸಿದೆ.

ಹುಬ್ಬಳ್ಳಿ-ಧಾರವಾಡ ಪಾಲಿಕೆ ಚುನಾವಣೆ ನಡೆಸಲು ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ ಗುರುನಾಥ್ ಮತ್ತಿತರರು ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಸಿದ್ದರು. ಇದಲ್ಲದೆ, ಅವಧಿ ಮುಗಿದ ರಾಜ್ಯದ ಕೆಲ ನಗರ ಸ್ಥಳೀಯ ಸಂಸ್ಥೆಗಳಿಗೆ ಕಾಲಮಿತಿಯೊಳಗೆ ಚುನಾವಣೆ ನಡೆಸಲು ಸರ್ಕಾರ ಹಾಗೂ ಚುನಾವಣಾ ಆಯೋಗಕ್ಕೆ ಅಗತ್ಯ ನಿರ್ದೇಶನ ನೀಡಲು ಹೈಕೋರ್ಟ್ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡಿತ್ತು.

ಗುರುವಾರ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕ್ ನೇತೃತ್ವದ ವಿಭಾಗೀಯ ಪೀಠ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಸರ್ಕಾರ 6 ವಾರಗಳಲ್ಲಿ ವಾರ್ಡ್ ಮರು ವಿಂಗಡಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಆದಾದ 2 ತಿಂಗಳಲ್ಲಿ ಮೀಸಲು ಅಧಿಸೂಚನೆ ಹೊರಡಿಸಬೇಕು. ಸರ್ಕಾರ ಮೀಸಲು ಅಧಿಸೂಚನೆ ಪ್ರಕಟಿಸಿದ ನಂತರದ 2 ತಿಂಗಳಲ್ಲಿ ಚುನಾವಣಾ ಆಯೋಗ ಮತದಾರರ ಪಟ್ಟಿ ಸಿದ್ಧಪಡಿಸಬೇಕು. ಮತದಾರರ ಪಟ್ಟಿ ಪ್ರಕಟಿಸಿದ 45 ದಿನಗಳ ಬಳಿಕ ಚುನಾವಣಾ ವೇಳಾಪಟ್ಟಿ ಪ್ರಕಟಿಸಬೇಕು ಎಂದು ಆದೇಶಿಸಿತು.

» **ಹೈಕೋರ್ಟ್ ಆದೇಶ**

ಕಲಬುರಗಿ ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಸರ್ಕಾರ ಯಾವುದೇ ವಿಳಂಬ ಮಾಡದೆ 6 ವಾರಗಳಲ್ಲಿ ವಾರ್ಡ್ ಮರುವಿಂಗಡಣೆ ಅಧಿಸೂಚನೆ ಪ್ರಕಟಿಸಿ, ನಂತರದ 2 ತಿಂಗಳಲ್ಲಿ ಮೀಸಲು ಅಧಿಸೂಚನೆ ಪ್ರಕಟಿಸಬೇಕು. ಅಧಿಸೂಚನೆ ಪ್ರಕಟಗೊಂಡ 3 ತಿಂಗಳಲ್ಲಿ ಚುನಾವಣಾ ಆಯೋಗ ಮತದಾರರ ಪಟ್ಟಿ ಪ್ರಕಟಿಸಿ, ನಂತರದ 45 ದಿನಗಳಲ್ಲಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಬೇಕು ಎಂದು ಆದೇಶಿಸಿದೆ.

**ವೇಳಾಪಟ್ಟಿ ಪ್ರಕಟಿಸಿ** ಬೆಳಗಾವಿ ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ವಾರ್ಡ್ ಮರು ವಿಂಗಡಣೆ ಪ್ರಕ್ರಿಯೆ ಪೂರ್ಣಗೊಂಡಿದೆಯಾದರೂ ಮೀಸಲು ಅಧಿಸೂಚನೆ ಪ್ರಕಟಿಸಿಲ್ಲ. 2 ತಿಂಗಳಲ್ಲಿ ಅಂತಿಮ ಮೀಸಲು ಅಧಿಸೂಚನೆ ಹೊರಡಿಸಬೇಕು. ಆದಾದ 45 ದಿನಗಳಲ್ಲಿ ಆಯೋಗ ಚುನಾವಣಾ ವೇಳಾಪಟ್ಟಿ ಪ್ರಕಟಿಸಿಸಬೇಕು ಎಂದು ನ್ಯಾಯಪೀಠ ನಿರ್ದೇಶಿಸಿದೆ.

Bengaluru Edition
Dec 18, 2020 Page No. 9
Powered by : eReleGo.com

Edit with WPS Office

ವಿಜಯವಾಣಿ

ವಿಜಯವಾಣಿ ನಂ.1

# ಮಾಜಿ ಕಾರ್ಪೋರೇಟರ್ ವಿರುದ್ಧ ಕೇಸ್

**ಬೆಂಗಳೂರು:** ಸುಳ್ಳು ಜಾತಿ ಪ್ರಮಾಣಪತ್ರ ನೀಡಿ ಚುನಾವಣೆಯಲ್ಲಿ ಸ್ಪರ್ಧಿಸಿ 5 ವರ್ಷ ಬಿಬಿಎಂಪಿ ಸದಸ್ಯರಾಗಿದ್ದ ಗಾಯತ್ರಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ. ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಇನ್‌ಸ್ಪೆಕ್ಟರ್ ನರಸಿಂಹಯ್ಯ ನೀಡಿದ ದೂರು ಆಧರಿಸಿ ಹಲಸೂರು ಗೇಟ್ ಠಾಣೆಯಲ್ಲಿ ಎಸ್ಸಿ-ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

» ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿದ್ದ ಆರೋಪ

ಬಿಬಿಎಂಪಿಯ 2015ರ ಚುನಾವಣೆಯಲ್ಲಿ ಕೆಂಪಾಪುರ ಅಗ್ರಹಾರ ವಾರ್ಡ್‌ನಿಂದ ಸ್ಪರ್ಧಿಸಿದ್ದ ಗಾಯತ್ರಿ ಅವರ ಮೂಲಜಾತಿ ಕುರಿತು ಶಂಕೆ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ವಿಚಾರಣೆಯನ್ನೂ ನಡೆಸಲಾಗಿತ್ತು. ಬೆಂಗಳೂರು ನಗರ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಈ ಬಗ್ಗೆ ತನಿಖೆ ನಡೆಸಿದಾಗ ಜಾತಿಯ ಬಗ್ಗೆ ಸೂಕ್ತ ದಾಖಲೆಗಳನ್ನು ಮಂಡಿಸಲು ಗಾಯತ್ರಿ ವಿಫಲರಾಗಿದ್ದಾರೆ. ಹೀಗಾಗಿ, ಉತ್ತರ ತಾಲೂಕಿನ ತಹಸೀಲ್ದಾರ್ ಗ್ರೇಡ್-2 ಅವರು 2015ರ ಜೂ.30ರಂದು ನೀಡಿದ್ದ ಪರಿಶಿಷ್ಟ ಪಂಗಡ (ನಾಯಕ) ಜಾತಿ ಪ್ರಮಾಣ ಪತ್ರವನ್ನು ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ರದ್ದುಗೊಳಿಸುವಂತೆ ಆದೇಶಿಸಿದೆ. ಆದರೆ, ಜಾತಿ ಪ್ರಮಾಣಪತ್ರ ರದ್ದುಗೊಳಿಸುವ ಮುನ್ನ 2015ರ ಪಾಲಿಕೆ ಚುನಾವಣೆಯಲ್ಲಿ ನಕಲಿ ಜಾತಿ ಪ್ರಮಾಣ ಪತ್ರ ಸಲ್ಲಿಸಿದ್ದ ಗಾಯತ್ರಿ ಸದಸ್ಯರಾಗಿ ಆಯ್ಕೆಯಾಗಿದ್ದರು. ಕಳೆದ ಸೆ.10ಕ್ಕೆ ಅಧಿಕಾರಾವಧಿ ಮುಕ್ತಾಯವಾಗಿದ್ದು, ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಕೋರಲಾಗಿದೆ.

Bengaluru Edition
Dec 18, 2020 Page No. 8
Powered by : eReleGo.com

Edit with WPS Office

ವಿಜಯವಾಣಿ

ವಿಜಯವಾಣಿ ನಂ.1

# ತ್ಯಾಜ್ಯ ಸುರಿದ ಲ್ಯಾಬ್‌ಗೆ ₹50 ಸಾವಿರ ದಂಡ

**ಬೆಂಗಳೂರು:** ಕೊಟ್ಟಿಗೆಪಾಳ್ಯದ ಪೈಪ್‌ಲೈನ್ ರಸ್ತೆ ಬಳಿ ಸ್ಯಾನಿಟರಿ ಮತ್ತು ವೈದ್ಯಕೀಯ ತ್ಯಾಜ್ಯ ಸುರಿದಿದ್ದ ಲೈಫ್ ಸೆಲ್ ಇಂಟರ್‌ನ್ಯಾಷನಲ್ ಎಂಬ ಖಾಸಗಿ ಲ್ಯಾಬ್‌ಗೆ ಬಿಬಿಎಂಪಿ ಮಾರ್ಷಲ್‌ಗಳು 50 ಸಾವಿರ ರೂ. ದಂಡ ವಿಧಿಸಿದ್ದಾರೆ. ರಾಜಾಜಿನಗರದಲ್ಲಿರುವ ಈ ಲ್ಯಾಬ್‌ನಲ್ಲಿ ಉತ್ಪಾದನೆಯಾದ ವೈದ್ಯಕೀಯ ಮತ್ತು ಸ್ಯಾನಿಟರಿ ತ್ಯಾಜ್ಯವನ್ನು ರಾತ್ರಿ ವೇಳೆ ಕೊಟ್ಟಿಗೆಪಾಳ್ಯದ ರಸ್ತೆಬದಿ ಸುರಿದು ಹೋಗಿದ್ದರು. ತ್ಯಾಜ್ಯವನ್ನು ಪರಿಶೀಲಿಸಿ ಲ್ಯಾಬ್ ಪತ್ತೆಮಾಡಿದ ಮಾರ್ಷಲ್‌ಗಳು ದಂಡ ವಿಧಿಸಿ ಸೂಕ್ತವಾಗಿ ತ್ಯಾಜ್ಯ ವಿಲೇವಾರಿ ಮಾಡುವಂತೆ ಸೂಚಿಸಿದ್ದಾರೆ.

Bengaluru Edition
Dec 18, 2020 Page No. 9
Powered by : eReleGo.com

Edit with WPS Office

ವಿಶ್ವವಾಣಿ

# ರಾಜಧಾನಿಗೆ ರಾಜಕಳೆ

## ಬೆಂಗಳೂರಿನ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ | ಇನ್ನೆರಡು ವರ್ಷಗಳಲ್ಲಿ ಎಲ್ಲ ಯೋಜನೆ ಪೂರ್ಣ | ಅನುದಾನದ ಸಮಸ್ಯೆಯಾಗದಂತೆ ಅಗತ್ಯ ಕ್ರಮ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ದೇಶದ ಸಿಲಿಕಾನ್ ವ್ಯಾಲಿ ಎನಿಸಿಕೊಂಡಿರುವ ಬೆಂಗಳೂರಿನಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಮತ್ತಷ್ಟು ಹೆಸರು ಪಡೆಯುವ ಉದ್ದೇಶದಿಂದ ರಾಜ್ಯ ಸರಕಾರ ಬೆಂಗಳೂರು ಮಿಷನ್-2022 ಜಾರಿಗೊಳಿಸಿದೆ.

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಗುರುವಾರ ಈ ಯೋಜನೆಗೆ ಚಾಲನೆ ನೀಡಿದ್ದು, ಇನ್ನೆರಡು ವರ್ಷಗಳಲ್ಲಿ ಬೆಂಗಳೂರಿನ ಸರ್ವತೋಮುಖ ಅಭಿವೃದ್ಧಿಗೆ ರಾಜ್ಯ ಸರಕಾರ ಹಾಕಿಕೊಂಡಿರುವ ಯೋಜನೆಗಳನ್ನು ಸಾಕಾರಗೊಳಿಸಿ, ಬೆಂಗಳೂರನ್ನು ಇನ್ನಷ್ಟು ಸುಂದರಗೊಳಿಸುವ ನಿಟ್ಟಿನಲ್ಲಿ ಒಂದು ಹೆಜ್ಜೆ ಇಟ್ಟಿದೆ.

ತ್ವರಿತವಾಗಿ ಬೆಳೆಯುತ್ತಿರುವ ಹಾಗೂ ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಛಾಪು ಮೂಡಿಸುತ್ತಿರುವ ಬೆಂಗಳೂರನ್ನು ವ್ಯವಸ್ಥಿತವಾಗಿ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಸರಕಾರ ಈ ಯೋಜನೆ ಹಾಕಿಕೊಂಡಿದ್ದು, ಮುಂದಿನ ಎರಡು ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ.

**ಅನುದಾನದ ಸಮಸ್ಯೆ ಇಲ್ಲ:** ಯೋಜನೆಗೆ ಚಾಲನೆ ನೀಡಿದ ಬಳಿಕ ನಡೆದ ಮಾಧ್ಯಮ ಸಂವಾದದಲ್ಲಿ, ಬಹುತೇಕರು ಈ ಬೃಹತ್ ಯೋಜನೆಗೆ ಯಾವ ರೀತಿ ಅನುದಾನ ಕ್ರೋಡೀಕರಣ ಮಾಡುತ್ತಾರೆ ಎನ್ನುವ ಪ್ರಶ್ನೆಯನ್ನು ಸರಕಾರದ ಮುಂದಿಟ್ಟರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರು, 'ಯಾವುದೇ ರೀತಿಯ ಅನುದಾನದ ಸಮಸ್ಯೆಯಾಗದ ರೀತಿಯಲ್ಲಿ ಎಚ್ಚರ ವಹಿಸಲಾಗುವುದು. ಮುಂದಿನ ಬಜೆಟ್‌ನಲ್ಲಿ ಈ ಯೋಜನೆಗೆ ಅಗತ್ಯವಿರುವ ಅನುದಾನ ನೀಡಲಾಗುವುದು' ಎಂದು ಭರವಸೆ ನೀಡಿದರು.




ಬೆಂಗಳೂರಿನ ಸರ್ವತೋಮುಖ ಅಭಿವೃದ್ಧಿಗೆ ಸರ್ವಪ್ರಯತ್ನ ಮಾಡಲಾಗುವುದು. ಮಿಷನ್ ಬೆಂಗಳೂರಿನ ಪ್ರಗತಿಯನ್ನು ಆರು ತಿಂಗಳಿಗೊಮ್ಮೆ ಜನರ ಮುಂದಿಡುವ ಕೆಲಸವನ್ನು ಮಾಡುತ್ತೇವೆ. ಈ ಯೋಜನೆಗೆ ಅಗತ್ಯ ಅನುದಾನವನ್ನು ಬಜೆಟ್‌ನಲ್ಲಿ ಮೀಸಲಿಡಲಾಗುವುದು.

**-ಬಿ.ಎಸ್.ಯಡಿಯೂರಪ್ಪ** ಮುಖ್ಯಮಂತ್ರಿ

### ಪ್ರಮುಖಾಂಶಗಳೇನು?

- ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಕ್ರಮ
- ತ್ಯಾಜ್ಯ ನಿರ್ವಹಣೆಯಲ್ಲಿ ಪದೇ ಪದೆ ಎಡವುತ್ತಿರುವುದನ್ನು ತಪ್ಪಿಸಲು ಸ್ವಚ್ಛ ಬೆಂಗಳೂರು ಯೋಜನೆ
- ಉದ್ಯಾನ ನಗರಿಯಾಗಿದ್ದ ಬೆಂಗಳೂರಿನಲ್ಲಿ ಪುನಃ ವೃಕ್ಷಗಳನ್ನು ಬೆಳೆಸುವ ಮೂಲಕ ಪರಿಸರ ಸಂರಕ್ಷಣೆಗೆ ಒತ್ತು
- ರಾಜಧಾನಿಯಲ್ಲಿರುವ 1.25 ಕೋಟಿ ಜನರ ಕುಂದುಕೊರತೆ ಆಲಿಸಲು ಹಾಗೂ ಅಗತ್ಯ ಸೇವೆಗಳಿಗಾಗಿ ಆ್ಯಪ್ ಅಭಿವೃದ್ಧಿ
- 12 ಅತಿ ದಟ್ಟಣೆಯ ರಸ್ತೆಗಳನ್ನು ಗುರುತಿಸಿರುವ ಸರಕಾರ, ಈ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಲು ನಿರ್ಧರಿಸಿದೆ
- ಸಮನ್ವಯ ಹೊಂದಿದ ಸಿಗ್ನಲ್ ದೀಪಗಳ ಅಳವಡಿಕೆ, ಕಾರಿಡಾರ್ ನಿರ್ಮಾಣ
- ಹಸಿರು ಬೆಂಗಳೂರು ಯೋಜನೆಯಲ್ಲಿ ನಗರದ ಹೊರವಲಯದಲ್ಲಿ 400 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಬೃಹತ್ ವೃಕ್ಷೋದ್ಯಾನ ಅಭಿವೃದ್ಧಿ

Edit with WPS Office

ವಿಶ್ವವಾಣಿ

# ಇನ್ನು ಎರಡು ವರ್ಷಗಳಲ್ಲಿ ಬೆಂಗಳೂರು ಇನ್ನೂ ಸುಂದರ

## ರಾಜಧಾನಿಯ ಸರ್ವಾಂಗೀಣ ಅಭಿವೃದ್ಧಿ ಮಿಷನ್ ಬೆಂಗಳೂರು 2022

[illegible]

### ಆರು ತಿಂಗಳಿಗೊಮ್ಮೆ ಪರಿಶೀಲನೆ

[illegible]



[illegible]

## ಕ್ಷೇತ್ರವಾರು ಅಭಿವೃದ್ಧಿಯ ಕಾರ್ಯಕ್ರಮವೇನು?

### ಅತ್ಯುತ್ತಮ ರಸ್ತೆ ನಿರ್ವಹಣೆ

[illegible]

### ಸ್ಮಾರ್ಟ್ ಸಂಚಾರ

[illegible]

### ಸಮಗ್ರ ನಗರ ತ್ಯಾಜ್ಯ ನಿರ್ವಹಣೆ

[illegible]

### ಸಣ್ಣ ಕಸ, ಸಣ್ಣ ಜವಾಬ್ದಾರಿ

[illegible]

### ಹಸಿರು ನೆರೆಹೊರೆ

[illegible]

### ಜಲಮೂಲಗಳ ಶುದ್ಧೀಕರಣ ಹಾಗೂ ಸಂರಕ್ಷಣೆ

[illegible]

### ವಿಕೇಂದ್ರಿತ ಜನ ಸಂಪರ್ಕ ವೇದಿಕೆ

[illegible]

### ಬೆಂಗಳೂರಿಗೊಂದು ಬೆಳಕಿಂಡಿ

[illegible]

### ವಾಯುಮಾಲಿನ್ಯ ನಿಯಂತ್ರಣಕ್ಕೆ ಕ್ರಮ

[illegible]



[illegible]

- ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ

[illegible]


- ಆರ್.ಅಶೋಕ್

[illegible]

- ಗೌರವ್ ಗುಪ್ತ

[illegible]

- ಡಾ. ಹರ್ಷ



### ತಿಂಗಳಿಗೊಮ್ಮೆ ಬೆಂಗಳೂರು ರೌಂಡ್ಸ್

[illegible]

ವಿಶ್ವವಾಣಿ

# ಹಾಟ್‌ಬ್ಯಾಚ್ ಮಿಕ್ಸಿಂಗ್ ಪ್ಲಾಂಟ್ ಟೆಂಡರ್ ಅಕ್ರಮ: ರಮೇಶ್

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯ ಹಾಟ್ ಬ್ಯಾಚ್ ಮಿಕ್ಸ್ ಪ್ಲಾಂಟ್ ಹೆಸರಿನಲ್ಲಿ ನೂರಾರು ಕೋಟಿ ಅಕ್ರಮವಾಗಿದೆ ಎಂದು ಆರೋಪಿಸಿರುವ ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಈ ಹಗರಣವನ್ನು ಎಸಿಬಿ ತನಿಖೆಗೆ ವಹಿಸಬೇಕೆಂದು ಆಗ್ರಹಿಸಿದ್ದಾರೆ.

ಮಿಕ್ಸ್ ಪ್ಲಾಂಟ್ ಮೂಲ ಟೆಂಡರ್‌ನಲ್ಲಿದ್ದ ನಿಯಮ ಪಾಲಿಸದ ಗುತ್ತಿಗೆದಾರ ಎಂ.ಎಸ್. ವೆಂಕಟೇಶ್ ಅವರನ್ನು ಕಪ್ಪು ಪಟ್ಟಿಗೆ ಸೇರಿಸಿ ಅವರ ಗುತ್ತಿಗೆ ಕರಾರು ರದ್ದುಪಡಿಸಬೇಕೆಂದು ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.



ಬಿಬಿಎಂಪಿ ವ್ಯಾಪ್ತಿಯ 75 ಕಿ.ಮೀ. ಉದ್ದದ ಹೈಡೆನ್ಸಿಟಿ ರಸ್ತೆಗಳು, 606 ಕಿ.ಮೀ. ಉದ್ದದ ಆರ್ಟೀರಿಯಲ್ ರಸ್ತೆ, 796 ಕಿ.ಮೀ. ಉದ್ದದ ಸಬ್ ಆರ್ಟೀರಿಯಲ್ ರಸ್ತೆಗಳು ಸೇರಿ 12,999 ಕಿ.ಮೀ. ರಸ್ತೆಗಳಲ್ಲಿ ಸೃಷ್ಟಿಯಾಗುವ ಸಾವಿರಾರು ಗುಂಡಿಗಳನ್ನು ಮುಚ್ಚುವ ಕಾರ್ಯಕ್ಕೆ ಕರೆಯಲಾಗಿದ್ದ ಟೆಂಡರ್‌ನಲ್ಲಿ ಭಾರೀ ಅಕ್ರಮವಾಗಿದೆ.

ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಪ್ರತಿ ವರ್ಷ ನೂರಾರು ಕೋಟಿ ನಷ್ಟ ಉಂಟಾಗಲು ಕಾರಣ ವಾಗಿರುವ ಮೂಲ ಟೆಂಡರ್‌ನಲ್ಲಿರುವ ನಿಯಮ ಕಡೆಗಣಿಸಿ ಹೊಸದಾಗಿ 27 ವಿಭಾಗಗಳಲ್ಲಿನ ರಸ್ತೆ ಗುಂಡಿ ಮುಚ್ಚಲು ಗುತ್ತಿಗೆ ಕಾರ್ಮಿಕರನ್ನು ಒದಗಿಸುವ ಟೆಂಡರ್ ಕರೆದು ದೊಡ್ಡ ಮಟ್ಟದ ಕಾನೂನು ಬಾಹಿರ ಕಾರ್ಯವೆಸಗಿರುವ ರಸ್ತೆಗಳ ಮೂಲಭೂತ ಸೌಕರ್ಯಗಳ ಇಲಾಖೆ ಮುಖ್ಯ ಅಭಿಯಂತರ ಬಿ.ಎಸ್. ಪ್ರಹ್ಲಾದ್ ಮತ್ತು ಟಿವಿಸಿ ವಿಭಾಗದ ಕಾರ್ಯಪಾಲಕ ಅಭಿಯಂತರ ಶ್ರೀನಿವಾಸ್ ಸೇರಿ ಕಾನೂನು ಬಾಹಿರ ಕಾರ್ಯದಲ್ಲಿ ಭಾಗಿಯಾಗಿರುವ ಎಲ್ಲಾ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

Edit with WPS Office

ಉದಯವಾಣಿ
ಜನಮನದ ಜೀವನಾಡಿ

# ಕಾಲಮಿತಿಯಲ್ಲಿ ಮಿಷನ್‌-2022 ಜಾರಿ

**ಯೋಜನೆಗಳ ಜಾರಿಗೆ ಅಗತ್ಯ ಅನುದಾನ ■ 6 ತಿಂಗಳಿಗೊಮ್ಮೆ ಕಾರ್ಯಪ್ರಗತಿ ಮಾಹಿತಿ ನೀಡುವೆ: ಮುಖ್ಯಮಂತ್ರಿ ಯಡಿಯೂರಪ್ಪ**



Edit with WPS Office

ಉದಯವಾಣಿ
ಜನಮನದ ಜೀವನಾಡಿ

# ರಾಜಧಾನಿ ಜ್ವಲಂತ ಸಮಸ್ಯೆಗೆ 2 ವರ್ಷದಲ್ಲಿ ಪರಿಹಾರ

**ಸಂವಾದದಲ್ಲಿ ಅಧಿಕಾರಿಗಳ ಪ್ರತಿಕ್ರಿಯೆ**

ರಾಜಧಾನಿಯಲ್ಲಿ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆಗೆ ಮತ್ತೆ ಚಾಲನೆ. ಕೇಂದ್ರ-ರಾಜ್ಯ ಸರ್ಕಾರದ ಹಾಗೂ ಖಾಸಗಿ ಸಂಸ್ಥೆಗಳೊಂದಿಗೆ ಸಮನ್ವಯದ ಕಾರ್ಯ ನಿರ್ವಹಣೆ ವ್ಯವಸ್ಥೆ. 4 ತಿಂಗಳಲ್ಲಿ ಸ್ಮಾರ್ಟ್‌ಸಿಟಿ ಕಾಮಗಾರಿ ಪೂರ್ಣ, ಸದ್ಯದಲ್ಲೇ ಪಾರ್ಕಿಂಗ್-ಜಾಹೀರಾತು ನೀತಿ ಜಾರಿ. ನಗರದ ಪ್ರಮುಖ ಜ್ವಲಂತ ಸಮಸ್ಯೆ, ಸವಾಲುಗಳಿಗೆ 2 ವರ್ಷದಲ್ಲಿ ಪರಿಹಾರ ನೀಡಲು 'ಬೆಂಗಳೂರು ಮಿಷನ್- 2022' ಅನುಷ್ಠಾನಕ್ಕೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ರಚನೆ. ಇವೆಲ್ಲಾ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಸಚಿವರು, ಅಧಿಕಾರಿಗಳು ನಗರದ ಜನರಿಗೆ ನೀಡಿರುವ ಪ್ರಮುಖ ಭರವಸೆಗಳು. ನಗರದ ಅಭಿವೃದ್ಧಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ರೂಪಿಸಿರುವ 'ಬೆಂಗಳೂರು ಮಿಷನ್- 2020' ಅಭಿವೃದ್ಧಿ ನೀಲನಕ್ಷೆಯನ್ನು ಗುರುವಾರ ಬಿಡುಗಡೆಗೊಳಿಸಿದ ಸಿಎಂ, ಈ ಯೋಜನೆಗಳ ಜಾರಿಯಲ್ಲಿ ಯಾವುದೇ ಲೋಪವಾಗದಂತೆ ಎಚ್ಚರ ವಹಿಸಿ 2 ವರ್ಷದಲ್ಲಿ ಪೂರ್ಣಗೊಳಿಸುವ ವಾಗ್ದಾನ ನೀಡಿದರು.

**• ಟಿ.ಎಂ.ವಿಜಯ ಭಾಸ್ಕರ್**, ಸರ್ಕಾರದ ಮುಖ್ಯ ಕಾರ್ಯದರ್ಶಿ

■ **'ಬೆಂಗಳೂರು ಮಿಷನ್- 2022' ಯಶಸ್ವಿ ಅನುಷ್ಠಾನಕ್ಕೆ ಇಲಾಖೆಗಳ ನಡುವೆ ಸಮನ್ವಯಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ?**

ಈಗಾಗಲೇ ಬಿಬಿಎಂಪಿ, ಜಲಮಂಡಳಿ, ಬಿಎಂಆರ್‌ಸಿಎಲ್ (ಮೆಟ್ರೋ), ಬೆಸ್ಕಾಂ, ಕೆಪಿಟಿಸಿಎಲ್, ಬಿಎಸ್‌ಎನ್‌ಎಲ್, ಒಎಫ್‌ಸಿ ಸೇವಾ ಸಂಸ್ಥೆಗಳು ಸೇರಿ ನಗರಕ್ಕೆ ಸಂಬಂಧಪಟ್ಟ ಕೇಂದ್ರ, ರಾಜ್ಯ ಸರ್ಕಾರದ ಹಾಗೂ ಖಾಸಗಿ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ ಮುಂದುವರಿಯಲು ಪ್ರಾಧಿಕಾರದಂತೆ ನನ್ನ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. 15 ದಿನಕ್ಕೊಮ್ಮೆ ವಿಡಿಯೋ ಸಂವಾದದ ಮೂಲಕ ಸಂವಾದ ನಡೆಸಿ, ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

■ **ತ್ಯಾಜ್ಯ ಪ್ರಮಾಣ ಅಧಿಕ. ವಿಲೇವಾರಿಯಲ್ಲಿ ವೈಜ್ಞಾನಿಕ ಕ್ರಮ ಕೈಗೊಳ್ಳಲು ಸರ್ಕಾರ ಒತ್ತು ನೀಡುತ್ತಿದೆಯೇ?**

ತ್ಯಾಜ್ಯ ಸಂಸ್ಕರಿಸಿ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪನೆಗೆ ಈಗಾಗಲೇ ಚಾಲನೆ ನೀಡಲಾಗಿದೆ. ಇದೇ ರೀತಿ 3-4 ಹೊಸ ಘಟಕ ಆರಂಭಿಸುವ ಪ್ರಕ್ರಿಯೆ ನಡೆಯುತ್ತಿದೆ. ಮುಂದೆಯೂ ಸಂಸ್ಕರಣಾ ಘಟಕದಲ್ಲಿ ಬಯೋ ಮೈನಿಂಗ್ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಹೊಸ ಯೋಜನೆ, ಪ್ರಯತ್ನಗಳ ಮೂಲಕ ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವೈಜ್ಞಾನಿಕವಾಗಿ ಸಂಸ್ಕರಣೆಯಾಗುವ ವ್ಯವಸ್ಥೆ 2 ವರ್ಷದಲ್ಲಿ ರೂಪುಗೊಳ್ಳುವ ವಿಶ್ವಾಸವಿದೆ.

■ **ರಾಜಕಾಲುವೆ ಒತ್ತುವರಿ ತೆರವಿಗೆ ಸರ್ಕಾರ ಮುಂದಾಗುವುದೇ?**

ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು 800 ಕಿ.ಮೀ. ಉದ್ದದ ರಾಜಕಾಲುವೆ ಮಾರ್ಗವಿದ್ದು, ಸುಮಾರು 2900 ಒತ್ತುವರಿ ಗುರುತಿಸಲಾಗಿತ್ತು. ಈ ಪೈಕಿ 1900ಕ್ಕೂ ಹೆಚ್ಚು ಒತ್ತುವರಿ ತೆರವುಗೊಳಿಸಲಾಗಿದೆ. ಕೋರ್ಟ್ ಹಂತದಲ್ಲಿ ಒತ್ತುವರಿ ತೆರವಿಗೆ ಹೈಕೋರ್ಟ್ ಅನುಮತಿ ನೀಡಿದ್ದು, ಇದೀಗ ಕಾರ್ಯಾಚರಣೆ ಶುರುವಾಗಲಿದೆ. ರಾಜಕಾಲುವೆ ಅಭಿವೃದ್ಧಿಗೂ ನಗರೋತ್ಥಾನ ಯೋಜನೆಯಡಿ ಅನುದಾನ ಕಾಯ್ದಿರಿಸಲಾಗಿದ್ದು, ಹಂತ ಹಂತವಾಗಿ ಜಾರಿಯಾಗಲಿದೆ.

■ **ಪಾರ್ಕಿಂಗ್ ಸಮಸ್ಯೆ ಪರಿಹಾರದ ಬಗ್ಗೆ ನೀಲನಕ್ಷೆಯಲ್ಲಿ ಪ್ರಸ್ತಾಪವಿಲ್ಲವಲ್ಲ?**

ಹೊಸ ಪಾರ್ಕಿಂಗ್ ಕರಡು ನೀತಿ ಸಿದ್ಧವಾಗಿದ್ದು, ಶೀಘ್ರ ಅಂತಿಮಗೊಳಿಸಲಾಗುವುದು. ಈಗಾಗಲೇ 85 ಪ್ರಮುಖ ರಸ್ತೆಗಳಲ್ಲಿ ಆನ್‌ಸ್ಟ್ರೀಟ್ ಪಾರ್ಕಿಂಗ್ ವ್ಯವಸ್ಥೆಯನ್ನು ಪಿಪಿಪಿ ಮಾದರಿಯಲ್ಲಿ ರೂಪಿಸಲು ಟೆಂಡರ್ ಆಹ್ವಾನಿಸಲಾಗಿದೆ. ಹಾಗೆಯೇ ವ್ಯಾಪ್ತಿಗಳು ಕೆಲ್ಲ ಜಾಗಗಳ ನಿಲುಗಡೆ ಮಾಡಲು ಪಿಪಿಪಿ ಮಾದರಿಯಲ್ಲಿ ವ್ಯವಸ್ಥೆ ಕಲ್ಪಿಸುವ ಚಿಂತನೆ ಇದೆ. ಮನೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಇಲ್ಲದವರು ಪರ್ಮಿಟ್ ಪಡೆದು ರಸ್ತೆಯಲ್ಲಿ ನಿಲುಗಡೆ ಮಾಡಲು ಅವಕಾಶ ಕಲ್ಪಿಸುವ ಪ್ರಸ್ತಾವ ಕರಡು ನೀತಿಯಲ್ಲಿದೆ.

**• ಗೌರವ್ ಗುಪ್ತ,** ಬಿಬಿಎಂಪಿ ಆಡಳಿತಾಧಿಕಾರಿ

■ **ವೈಟ್ ಟಾಪಿಂಗ್ ಪೂರ್ಣ ಯಾವಾಗ?**

ಈ ಹಿಂದೆ ಅನುಮೋದನೆ ಆಗಿರುವ ವೈಟ್ ಟಾಪಿಂಗ್ ರಸ್ತೆ ಅಭಿವೃದ್ಧಿ ಶೀಘ್ರ ಪೂರ್ಣಗೊಳಿಸಲಾಗುತ್ತದೆ. ಹೊಸದಾಗಿ ವೈಟ್ ಟಾಪಿಂಗ್ ಬಗ್ಗೆ ಪರಿಶೀಲಿಸಲಾಗುವುದು.

■ **ಚಿಕ್ಕಪೇಟೆ ಭಾಗದಲ್ಲಿ ಸೌಕರ್ಯ ತಿಳಿಸಿದೆಯಾ?**

ಚಿಕ್ಕಪೇಟೆ ಭಾಗದ ಅವಿನ್ಯೂ ರಸ್ತೆ, ಸುತ್ತಮುತ್ತಲ ರಸ್ತೆಗಳಿಗೆ ಸಂಸದರೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್: ನಗರದ 25 ಕಡೆ ಶೌಚಾಲಯ ನಿರ್ಮಾಣಕ್ಕೆ ಅನುಮೋದನೆ ದೊರಕಿದ್ದು ಅನುದಾನ ಹಂಚಿಕೆಯಾಗಿದೆ.

■ **ಆರೋಗ್ಯ ಸೇವೆಗೆ ಒತ್ತು ನೀಡಿದ್ದೀರಾ?**

ನಗರದಲ್ಲಿ ತೃತೀಯ ಹಂತದ ಚಿಕಿತ್ಸಾ ವ್ಯವಸ್ಥೆ ಆಸ್ಪತ್ರೆ ಸೇವೆ ವಿಸ್ತರಿಸುವ ಅಗತ್ಯ ಇದೆ. ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್: 40 ಕೋಟಿ ರೂ. ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ನಿರ್ಮಾಣವಾಗಲಿದೆ.

■ **ಸಮರ್ಪಕ ತ್ಯಾಜ್ಯ ವಿಲೇವಾರಿ ಕ್ರಮಗಳೇನು?**

'ನನ್ನ ಕಸ- ನನ್ನ ಜವಾಬ್ದಾರಿ' ಯೋಜನೆ ರೂಪಿಸಲಾಗಿದ್ದು, ಸಾರ್ವಜನಿಕರ ಸಹಕಾರ ಮುಖ್ಯ.

■ **110 ಹಳ್ಳಿಗಳ ಅಭಿವೃದ್ಧಿ ಪ್ರಸ್ತಾಪವಿಲ್ಲವಲ್ಲ?**

ಬಜೆಟ್‌ನಲ್ಲಿ 1000 ಕೋಟಿ ರೂ. ಅನುದಾನ ನೀಡಲಾಗಿದೆ. 110 ಹಳ್ಳಿಗಳ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಿವೆ.

■ **ಮಿಷನ್- 2022' 2 ವರ್ಷದಲ್ಲಿ ಮುಗಿಯುತ್ತಾ?**

ಸ್ಮಾರ್ಟ್‌ಸಿಟಿ ಕಾಮಗಾರಿ 6 ತಿಂಗಳಲ್ಲಿ ಪೂರ್ಣಕ್ಕೆ ಸಾಧ್ಯವಿದ್ದು ಟಾಸ್ಕ್‌ಫೋರ್ಸ್ ರಚಿಸಲಾಗುವುದು.

**• ರಾಕೇಶ್ ಸಿಂಗ್,** ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ

■ **ಮಿಷನ್- 2022ಗೆ ಹಣಕಾಸಿನ ವ್ಯವಸ್ಥೆ ಹೇಗೆ?**

ಕೇಂದ್ರ-ರಾಜ್ಯ ಸರ್ಕಾರದ ಅನುದಾನದಲ್ಲೇ ಯೋಜನೆ ಕಾರ್ಯಗತಗೊಳಿಸಲಾಗುವುದು.

■ **ಹೈಡೆನ್ಸಿಟಿ ಕಾರಿಡಾರ್ ಪ್ರಸ್ತಾಪದ ಕತೆ ಏನು?**

ಹೈಡೆನ್ಸಿಟಿ ಕಾರಿಡಾರ್ ಯೋಜನೆ ಬಗ್ಗೆ ಸಚಿವ ಸಂಪುಟ ಸಭೆ ಚರ್ಚೆಯಾಗಿದ್ದು, 190 ಕಿ.ಮೀ. ಉದ್ದದ ರಸ್ತೆಯನ್ನು 400 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ತೀರ್ಮಾನವಾಗಿದೆ.

■ **ಕೆರೆ ಅಭಿವೃದ್ಧಿ ಎಂದರೆ?**

ವರ್ತೂರು, ಬೆಳ್ಳಂದೂರು ಕೆರೆ ಪುನಶ್ಚೇತನ ಕಾರ್ಯಕ್ಕೆ ಚಾಲನೆ ನೀಡಲಾಗುತ್ತಿದೆ. ಒತ್ತುವರಿಯಾಗಿಲ್ಲದಿದ್ದರೆ ಸೂಕ್ತ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗುವುದು.

■ **ವಾಹನ ದಟ್ಟಣೆ ಬಗ್ಗೆ ಗಮನ ಹರಿಸುವುದಿಲ್ಲವೇ?**

ಗೊರಗುಂಟೆಪಾಳ್ಯದಲ್ಲಿ ದಟ್ಟಣೆ ನಿವಾರಣೆ ಸಂಬಂಧ ಕಾಮಗಾರಿಗೆ ಶೀಘ್ರ ಚಾಲನೆ ಸಿಗಲಿದೆ. ಹೆಬ್ಬಾಳದ ಮೇಲುಸೇತುವೆ ವಿಸ್ತರಣೆ ಕಾರ್ಯ 2 ವರ್ಷದ ಹಿಂದೆ ಆರಂಭವಾಗಿತ್ತು. ಹೈಕೋರ್ಟ್‌ನಲ್ಲಿನ ಪ್ರಕರಣ ಡಿ.23ಕ್ಕೆ ಇತ್ಯರ್ಥವಾಗುವ ನಿರೀಕ್ಷೆ ಇದ್ದು, ಇತ್ಯರ್ಥವಾದರೆ ಕೂಡಲೇ ಕಾಮಗಾರಿ ಶುರುವಾಗಲಿದೆ.

■ **ಜಾಹೀರಾತು ನೀತಿ ಬಗ್ಗೆ ಸರ್ಕಾರದ ನಿಲುವೇನು?**

ಜಾಹೀರಾತು ನೀತಿಯ ಕರಡು 2019ರ ಜುಲೈನಲ್ಲಿ ಪ್ರಕಟವಾಗಿದ್ದು ಆಕ್ಷೇಪಣೆ ಆಹ್ವಾನಿಸಲಾಗಿತ್ತು. 2 ವಾರದಲ್ಲಿ ಅಂತಿಮಗೊಳಿಸಲಾಗುವುದು.



Edit with WPS Office

ಉದಯವಾಣಿ
ಜನಮನದ ಜೀವನಾಡಿ

## ಸುಗಮ ಸಂಚಾರ, ಸ್ವಚ್ಛತೆ, ಹಸಿರೀಕರಣಕ್ಕೆ ಒತ್ತು

# ಬೆಂಗಳೂರು ಮಿಷನ್ 2022ಗೆ ನಕಾಶೆ ಸಿದ್ಧ




- ಎನ್‌ಜಿಇಎಫ್, ಮೈಸೂರು ಲ್ಯಾಂಪ್ ಜಾಗದಲ್ಲಿ ಬೃಹತ್ ಉದ್ಯಾನವನ
- 25 ಕೆರೆ, ರಾಜಕಾಲುವೆ ಅಭಿವೃದ್ಧಿ
- ಎರಡು ವರ್ಷಗಳಲ್ಲಿ ರಾಜಧಾನಿ ಅಭಿವೃದ್ಧಿಯ ಚಿತ್ರಣ ಬದಲು: ಬಿ.ಎಸ್.ಯಡಿಯೂರಪ್ಪ

ಬೆಂಗಳೂರು: ರಾಜಧಾನಿಯಲ್ಲಿ ಸುಗಮ ಸಂಚಾರ, ಸ್ವಚ್ಛತೆ, ಹಸಿರೀಕರಣಕ್ಕೆ ಒತ್ತು ನೀಡುವ ಮೂಲಕ ಮುಂದಿನ 2 ವರ್ಷಗಳಲ್ಲಿ ಬೆಂಗಳೂರನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುವ ಎಂಟು ಅಂಶಗಳ ಮಿಷನ್-2022 ನೀಲ ನಕ್ಷೆ ಸಿದ್ಧಗೊಂಡಿದೆ.

ಎನ್‌ಜಿಇಎಫ್ ಹಾಗೂ ಮೈಸೂರು ಲ್ಯಾಂಪ್ ಜಾಗದಲ್ಲಿ ಬೃಹತ್ ಉದ್ಯಾನವನ ಹಾಗೂ ಬೆಂಗಳೂರಿನ ಸಂಸ್ಕೃತಿ ಪರಂಪರೆ ಬಿಂಬಿಸುವ ಸಾಂಸ್ಕೃತಿಕ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿನ ಪ್ರಗತಿ ಬಿಂಬಿಸುವ ಡಿಜಿಟಲ್ ಪ್ರಾತ್ಯಕ್ಷಿಕೆಯ 'ಎಕ್ಸ್‌ಪೀರಿಯನ್ಸ್ ಸೆಂಟರ್' ಸ್ಥಾಪಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಬೆಂಗಳೂರಿನ ಹಿರಿಮೆ ಪ್ರತಿಬಿಂಬಿಸಲಾಗುವುದು ಇದರಲ್ಲಿ ಸೇರಿದೆ.

ಹೊರವಲಯದಲ್ಲಿ 400 ಎಕರೆ ಪ್ರದೇಶದಲ್ಲಿ ವೃಕ್ಷೋದ್ಯಾನ, ಕಿರು ಅರಣ್ಯ ಬೆಳೆಸುವುದು, ನಗರದ ಸೌಂದರ್ಯಕ್ಕೆ ಪ್ರಮುಖ ರಾಜಕಾಲುವೆಗಳ ಅಭಿವೃದ್ಧಿ, 25 ಕೆರೆಗಳ ಪುನಶ್ಚೇತನ, ದಕ್ಷ ಹಾಗೂ ಸಮರ್ಥವಾಗಿ ತ್ಯಾಜ್ಯ ವಿಲೇವಾರಿ, 12 ಅತಿ ದಟ್ಟಣೆಯ ರಸ್ತೆಗಳ ಅಭಿವೃದ್ಧಿ, ಆರು ವರ್ಷಗಳಲ್ಲಿ ಉಪನಗರ ರೈಲು ಯೋಜನೆ ಅನುಷ್ಠಾನ 'ಮಿಷನ್-2022'ರಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಲಾಗಿದೆ.

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಿಷನ್-2022ಗೆ ಚಾಲನೆ ನೀಡಿ, ನೀಲ ನಕಾಶೆಯ ಪ್ರಕಾರ ಎರಡು ವರ್ಷಗಳಲ್ಲಿ ಇದನ್ನು ಸಾಕಾರಗೊಳಿಸಲಾಗುವುದು. ಪ್ರತಿ ಆರು ತಿಂಗಳಿಗೊಮ್ಮೆ ಖುದ್ದಾಗಿ ನಾನೇ ಸ್ಥಳಕ್ಕೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಲಿದ್ದೇನೆ. ಇದರಿಂದ ಬೆಂಗಳೂರಿನ ಚಿತ್ರಣ ಬದಲಾಗಲಿದೆ ಎಂದು ಹೇಳಿದರು.

ಈ ಎಲ್ಲ ಯೋಜನೆಗಳಿಗೆ ಯಾವುದೇ ಹಣಕಾಸಿನ ಸಮಸ್ಯೆ ಎದುರಾಗದು. ಬಜೆಟ್‌ನಲ್ಲಿ ಅಗತ್ಯ ಅನುದಾನ ಒದಗಿಸುವ ಜತೆಗೆ ನಿಗದಿ ಇಟ್ಟುಕೊಂಡ ಕಾಲ ಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಬದ್ಧವಾಗಿದೆ. ಇದರಲ್ಲಿ ಯಾವುದೇ ಅನುಮಾನ ಬೇಡ ಎಂದು ತಿಳಿಸಿದರು.

▸ 5ನೇ ಪುಟಕ್ಕೆ

> ರಾಜ್ಯಕ್ಕೆ ಪ್ರಧಾನಿ ಮೋದಿ ಅವರು ಬಂದ ಸಂದರ್ಭದಲ್ಲಿ ಬೆಂಗಳೂರನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಕಾರ್ಯತಂತ್ರ ರೂಪಿಸುವಂತೆ ಹೇಳುತ್ತಿದ್ದರು. ಅವರ ಮಾತುಗಳಿಂದ ಪ್ರಭಾವಿತನಾಗಿ ಬೆಂಗಳೂರಿನ ಅಭಿವೃದ್ಧಿಗೆ ಪಣ ತೊಟ್ಟಿದ್ದೇನೆ.
>
> • ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ




Edit with WPS Office

ಉದಯವಾಣಿ
ಜನಮನದ ಜೀವನಾಡಿ

## ರಸ್ತೆಗುಂಡಿ ಮುಚ್ಚಿರುವ ಕಾಮಗಾರಿ ಗುಣಮಟ್ಟ ಪರಿಶೀಲನೆ

# 'ಕೋರ್ಟ್ ಕಮಿಷನರ್' ನೇಮಕ ಮಾಡಿದ ಹೈಕೋರ್ಟ್

**ಬೆಂಗಳೂರು:** 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಿರುವ ಕಾಮಗಾರಿಯ ಗುಣಮಟ್ಟ ಪರಿಶೀಲನೆ, ಪಾದಚಾರಿ ಮಾರ್ಗ ಮತ್ತು ಸಾರ್ವಜನಿಕ ಜಾಗಗಳ ನಿರ್ವಹಣೆ ಪರಿಶೀಲನೆಗೆ ಹೈಕೋರ್ಟ್ 'ಕೋರ್ಟ್ ಕಮಿಷನರ್'ಗಳನ್ನು ನೇಮಕ ಮಾಡಿದೆ.



ಈ ಕುರಿತು ಕೋರಮಂಗಲದ ವಿಜಯ್ ಮೆನನ್ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕ್ ಅವರ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಆದೇಶ ನೀಡಿದ್ದು, ಈ ಕೆಲಸಕ್ಕೆ ಅರೆ ನ್ಯಾಯಿಕ ಸ್ವಯಂಸೇವಕರು (ಪ್ಯಾರಾ ಲೀಗಲ್ ವಾಲಂಟಿಯರ್) ಹಾಗೂ ಪ್ಯಾನಲ್ ಅಡ್ವೋಕೇಟ್‌ಗಳ ತಂಡವನ್ನು ರಚಿಸುವಂತೆ ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರಿಗೆ ನಿರ್ದೇಶನ ನೀಡಿರುವ ಹೈಕೋರ್ಟ್, ಇದಕ್ಕಾಗಿ ಬೆಂಗಳೂರು ನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗ ಪಡೆದುಕೊಳ್ಳುವಂತೆ ಸೂಚಿಸಿದೆ.

ಕೋರ್ಟ್ ಕಮಿಷನರ್‌ಗಳು ಬಿಬಿಎಂಪಿ ರಸ್ತೆ ಗುಂಡಿಗಳನ್ನು ಸಂಪೂರ್ಣವಾಗಿ ಮುಚ್ಚಲಾಗಿದೆ ಎಂದು ನೀಡಿರುವ 74 ರಸ್ತೆಗಳಿಗೆ ಭೇಟಿ ನೀಡಿ ಅಲ್ಲಿ ಗುಣಮಟ್ಟದ ಕಾಮಗಾರಿ ನಡೆದಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿ, ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ನ್ಯಾಯಾಲಯ ಆದೇಶಿಸಿದೆ.

ಕಳೆದ ವಿಚಾರಣೆ ವೇಳೆ ನ್ಯಾಯಾಲಯ, ರಸ್ತೆ ಗುಂಡಿ ಮುಚ್ಚಿರುವ ಕಾಮಗಾರಿಯ ಗುಣಮಟ್ಟದ ಪರಿಶೀಲನೆಗೆ ಐಐಎಸ್ಸಿ ತಜ್ಞರ ತಂಡ ಅಥವಾ ನೀರಿ ಸಂಸ್ಥೆಯನ್ನು ನೇಮಕ ಮಾಡಲು ಕ್ರಮ ಕೈಗೊಳ್ಳುವಂತೆ ಬಿಬಿಎಂಪಿಗೆ ಸೂಚನೆ ನೀಡಿತ್ತು.

ಗುರುವಾರ ಪಾಲಿಕೆ ಪರ ಹಾಜರಾದ ಹಿರಿಯ ವಕೀಲ ಕೆ.ಎನ್.ಪುಟ್ಟೇಗೌಡ, ರಸ್ತೆ ಗುಂಡಿ ಮುಚ್ಚುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿದರು. ಅಲ್ಲದೆ, ನ್ಯಾಯಾಲಯ ನಿರ್ದೇಶಿಸಿದಂತೆ ಗುಣಮಟ್ಟದ ಪರಿಶೀಲನೆಗೆ ಐಐಎಸ್ಸಿಯ ತಾಂತ್ರಿಕ ವಿಭಾಗವನ್ನು ನೇಮಕ ಮಾಡಿಕೊಳ್ಳಲು ಅವರಿಗೆ ಮನವಿ ಸಲ್ಲಿಸಲಾಗಿತ್ತು, ಸಂಸ್ಥೆ ಅಂದಾಜು 4.78 ಕೋಟಿ ಮತ್ತು ಶೇ.18ರಷ್ಟು ವೆಚ್ಚವಾಗುತ್ತದೆ ಎಂದು ಹೇಳಿದೆ. ಆ ರಸ್ತೆಗಳ ಕಾಮಗಾರಿಗೆ ಖರ್ಚು ಮಾಡಿರುವ ವೆಚ್ಚ 44.15 ಲಕ್ಷ, ಆದರೆ ಗುಣಮಟ್ಟ ಪರಿಶೀಲನೆಗೆ ಅಷ್ಟು ದೊಡ್ಡ ಮೊತ್ತ ಖರ್ಚು ಮಾಡಲಾಗದು ಎಂದರು.

ಆ ಅಂಶವನ್ನು ಪರಿಗಣಿಸಿದ ನ್ಯಾಯಾಲಯ, ಕೋರ್ಟ್ ಕಮಿಷನರ್ ಗಳ ನೇಮಕಕ್ಕೆ ಆದೇಶ ಹೊರಡಿಸಿತು.

ಉದಯವಾಣಿ Fri, 18 December 2020
https://epaper.udayavani.com/c/57183513

Edit with WPS Office

ಉದಯವಾಣಿ
ಜನಮನದ ಜೀವನಾಡಿ

# ಬೆಳ್ಳಂದೂರು, ವರ್ತೂರು ಕೆರೆ ಪುನಶ್ಚೇತನಕ್ಕೆ ಚಾಲನೆ

**ಮಹದೇವಪುರ:** ನೊರೆ ಮತ್ತು ಬೆಂಕಿಯಿಂದ ಕುಖ್ಯಾತಿಗೆ ಒಳಗಾಗಿದ್ದ ಬೆಳ್ಳಂದೂರು ಹಾಗೂ ವರ್ತೂರು ಕೆರೆಗಳ ಪುನಶ್ಚೇತನ ಕಾಮಗಾರಿಗೆ ಸಮಗ್ರ ಅಭಿವೃದ್ಧಿ ಯೋಜನೆಯಡಿ ಶಾಸಕ ಅರವಿಂದ ಲಿಂಬಾವಳಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕ್ಷೇತ್ರದ 96 ಕೆರೆಗಳಲ್ಲಿ 41 ಕೆರೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು ಕೆರೆಗಳ ರಕ್ಷಣೆಗೆ ಹೆಚ್ಚು ಒತ್ತು ನೀಡಲಾಗಿದೆ ಎಂದರು.

ನಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿದ್ದರೆ ನಮ್ಮ ಆರೋಗ್ಯ ಉತ್ತಮವಾಗಿರಲಿದೆ. ಕೆರೆಗಳ ಅಭಿವೃದ್ಧಿಗೆ ಸಾರ್ವಜನಿಕರ ಪಾತ್ರ ಮಹತ್ವವಾಗಿದೆ. ಈ ಹಿನ್ನೆಲೆಯಲ್ಲಿ ಅಭಿವೃದ್ಧಿ ಪ್ರದೇಶದಲ್ಲಿ ಅಕ್ರಮ ಚಟುವಟಿಕೆ ಬಗ್ಗೆ ಜಾಗೃತಿ ಮೂಡಿಸಬೇಕೆಂದರು.

916.17 ಗುಂಟೆ ವಿಸ್ತೀರ್ಣ ಹೊಂದಿರುವ



ಬೆಳ್ಳಂದೂರು ಹಾಗೂ ವರ್ತೂರು ಕೆರೆಗಳ ಪುನಶ್ಚೇತನ ಕಾಮಗಾರಿಗೆ ಶಾಸಕ ಅರವಿಂದ ಲಿಂಬಾವಳಿ ಚಾಲನೆ ನೀಡಿದರು. ಮುಖಂಡರಾದ ರಾಜರೆಡ್ಡಿ, ಜಯಚಂದ್ರರೆಡ್ಡಿ ಇದ್ದರು.

ಬೆಳ್ಳಂದೂರು ಕೆರೆ ಅಭಿವೃದ್ಧಿಗೆ ಮೊದಲನೇ ಹಂತದಲ್ಲಿ 103.66 ಲಕ್ಷ, 439.94ಗುಂಟೆ ವಿಸ್ತೀರ್ಣ ಹೊಂದಿರುವ ವರ್ತೂರು ಕೆರೆ ಅಭಿವೃದ್ಧಿಗೆ 53.81 ಲಕ್ಷ ಅನುದಾನ ಒದಗಿಸಲಾಗಿದೆ ಎಂದರು.

ನಮ್ಮ ಬೆಂಗಳೂರು ಫೌಂಡೇಷನ್ ವತಿಯಿಂದ ರಾಜ್ಯಸಭಾ ಸದಸ್ಯ ರಾಜೀವ್ ಚಂದ್ರಶೇಖರ್ ರಾಷ್ಟ್ರೀಯ ಹಸಿರು ನ್ಯಾಯಪೀಠದಲ್ಲಿ ದಾವೆ ಹೂಡಿದ ಪರಿಣಾಮ ಮತ್ತು ಮಾಜಿ ಲೋಕಾಯುಕ್ತ ಸಂತೋಷ ಹೆಗ್ಡೆ ಶ್ರಮ ಹಾಗೂ ನಮ್ಮ ಪಕ್ಷ ಮತ್ತು ಸಂಘ ಸಂಸ್ಥೆಗಳ ಸತತ ಹೋರಾಟದ ಫಲವಾಗಿ ಕೆರೆಗೀಗ ಕಾಯಕಲ್ಪ ಕಲ್ಪಿಸಲಾಗಿದೆ ಎಂದರು.

ಕಾರ್ಪೊರೇಟರ್ ಅಜಿತ್ ರೈ, ಪಾಲಿಕೆ ಮಾಜಿ ಸದಸ್ಯರಾದ ಆಶಾ, ಪುಷ್ಪಾ, ಕ್ಷೇತ್ರ ಅಧ್ಯಕ್ಷ ಮನೋಹರ ರೆಡ್ಡಿ ಮುಖಂಡರಾದ ರಾಜರೆಡ್ಡಿ, ಜಯಚಂದ್ರರೆಡ್ಡಿ, ಶ್ರೀಧರರೆಡ್ಡಿ, ಮಹೇಂದ್ರ ಮೋದಿ, ವೆಂಕಟೇಶ್, ಬಿಡಿಎ ಅಧಿಕಾರಿಗಳಾದ ಮಾದೇಗೌಡ, ಅರವಿಂದ, ಗುರುರಾಜ್, ಗೋಪಿಕೃಷ್ಣಮತ್ತಿತರರಿದ್ದರು.

per.udayavani.com

Edit with WPS Office

ಉದಯವಾಣಿ
ಜನಮನದ ಜೀವನಾಡಿ

# 216 ಬೀದಿಬದಿ ವ್ಯಾಪಾರಿಗಳಿಗೆ ಕಿರು ಸಾಲಸೌಲಭ್ಯ



ಮಾದನಾಯಕನಹಳ್ಳಿ ಪುರಸಭೆಯಲ್ಲಿ ಬೀದಿಬದಿ ಫಲಾನುಭವಿಗಳಿಗೆ ಸಾಲಪತ್ರ ಹಾಗೂ ಗುರುತಿನ ಚೀಟಿಯನ್ನು ಪುರಸಭೆ ಆಡಳಿತಾಧಿಕಾರಿ ರಂಗನಾಥ್ ವಿತರಿಸಿದರು.

**ಯಲಹಂಕ:** ಪ್ರಧಾನ ಮಂತ್ರಿಗಳ ಆತ್ಮ ನಿರ್ಭರ ಯೋಜನೆಯಡಿ 216 ಬೀದಿ ಬದಿ ವ್ಯಾಪಾರಿಗಳಿಗೆ ಕಿರು ಸಾಲಸೌಲಭ್ಯ ಒದಗಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಹನುಮಂತೇಗೌಡ ಹೇಳಿದರು.

ಮಾದನಾಯಕನಹಳ್ಳಿ ಪುರಸಭೆಯಲ್ಲಿ ಬೀದಿಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಮತ್ತು ಆತ್ಮ ನಿರ್ಭರ ಯೋಜನೆಯಡಿ ನಡೆದ ಸಾಲ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕೋವಿಡ್ -19 ಸೋಂಕು ಹಿನ್ನೆಲೆಯಲ್ಲಿ ಬೀದಿ ಬದಿ ವ್ಯಾಪಾರಿಗಳು ಸಂಕಷ್ಟಕ್ಕೀಡಾಗಿದ್ದಾರೆ. ಅವರ ಸಣ್ಣ ವಹಿವಾಟುಗಳಿಗೆ ಅನುಕೂಲವಾಗುವಂತೆ ಆತ್ಮ ನಿರ್ಭರ ಯೋಜನೆಯಡಿ 10 ಸಾವಿರ ರೂ. ಕಿರು ಸಾಲಸೌಲಭ್ಯ ನೀಡಲಾಗುತ್ತಿದೆ. ಪುರಸಭೆ ವ್ಯಾಪ್ತಿ ಅರ್ಹರು ಸದುಪಯೋಗಪಡಿಸಿಕೊಳ್ಳಬೇಕೆಂದರು.

ಬೆಂಗಳೂರು ನಗರ ಜಿಲ್ಲೆಯ ಯೋಜನಾಧಿಕಾರಿ ರುದ್ರಮುನಿ ಮಾತನಾಡಿ, ರಸ್ತೆ ಬದಿ ತಳ್ಳುವ ಬಂಡಿ, ಆಟೋಗಳಲ್ಲಿ ತಿಂಡಿ ಊಟ, ಪಾನೀಯ ಮಾರಾಟ ಮಾಡುವವರು ಮತ್ತು ಮನೆಗಳ ಬಳಿ ತೆರಳಿ ತರಕಾರಿ ಹೂ ಕಾಯಿ ಮಾರುವವರು, ರಸ್ತೆ ಬದಿ ಬುಟ್ಟಿ ವ್ಯಾಪಾರಿಗಳು ಈ ಸಾಲ ಸೌಲಭ್ಯ ಪಡೆಯಬಹುದು ಎಂದರು.

ಇದೇ ಸಂದರ್ಭದಲ್ಲಿ ಪೌರ ಕಾರ್ಮಿಕರಿಗೆ ಹಾಗೂ ವಾಟರ್ ಮೆನ್‌ಗಳಿಗೆ 20 ಲಕ್ಷ ರೂ.ಗಳ ಅಪಘಾತ ವಿಮೆ ಪತ್ರ, ಸಮವಸ್ತ್ರ ವಿತರಣೆ, ಡಿಜಿಟಲ್ ಪೇಮೆಂಟ್ ಉತ್ತೇಜಿಸುವ ನಿಟ್ಟಿನಲ್ಲಿ ಡಿಜಿಟಲ್ ಯುಪಿಐ ಗುರುತಿನ ಚೀಟಿ ವಿತರಣೆ, ಪ್ಲಾಸ್ಟಿಕ್ ಮುಕ್ತಗೊಳಿಸುವ ನಿಟ್ಟಿನಲ್ಲಿ ರಿಯಾಯ್ತಿ ದರದಲ್ಲಿ ಬಟ್ಟೆ ಬ್ಯಾಗ್ ತಯಾರಿಸಿ ವಿತರಿಸಲು ಪುರಸಭೆ ವತಿಯಿಂದ ವಿವಿಧ ಸ್ವಸಹಾಯ ಸಂಘದ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಣೆ, ಪ್ಲಾಸ್ಟಿಕ್ ತ್ಯಜಿಸಿ ಪರಿಸರ ಉಳಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಮುಖ್ಯ ಅತಿಥಿಗಳಾಗಿ ಪುರಸಭೆ ಆಡಳಿತಾಧಿಕಾರಿ ರಂಗನಾಥ್, ಬೆಂಗಳೂರು ನಗರ ಲೀಡ್ ಬ್ಯಾಂಕ್ ವ್ಯವಸ್ಥಾಪಕರಾದ ಸುಬ್ಬಾನಾಯಕ್, ಅಧಿಕಾರಿಗಳಾದ ಕೃಷ್ಣಮೂರ್ತಿ ಇದ್ದರು.

Edit with WPS Office

ಉದಯವಾಣಿ
ಜನಮನದ ಜೀವನಾಡಿ

# ನಗರದಲ್ಲಿ ಕಸ ಸೇವಾ ಶುಲ್ಕ ಪ್ರಸ್ತಾವನೆ ಇಲ್ಲ: ಗೌರವ್ ಗುಪ್ತ

**ಬೆಂಗಳೂರು:** ನಗರದಲ್ಲಿ ಗೃಹ ಮತ್ತು ವಾಣಿಜ್ಯ ಕಟ್ಟಡಗಳಿಂದ ಕಸ ಸಂಗ್ರಹ ಮಾಡುವುದಕ್ಕೆ ಪ್ರತಿ ತಿಂಗಳು 'ಕಸ ಸೇವಾ ಶುಲ್ಕ' ವಿಧಿಸುವ ಪ್ರಸ್ತಾವನೆಗೆ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಪಾಲಿಕೆ ಪ್ರಸ್ತಾವನೆ ಕೈಬಿಟ್ಟಿದೆ. ಈ ಸಂಬಂಧ ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್‌ಗುಪ್ತ, ನಗರದಲ್ಲಿ ಮನೆ ಮತ್ತು ವಾಣಿಜ್ಯೋದ್ಯಮಗಳಿಂದ ಕಸ ಸಂಗ್ರಹಕ್ಕೆ ಕಸ ಸೇವಾ ಶುಲ್ಕ ಸಂಗ್ರಹ ಪ್ರಸ್ತಾವನೆ ಇಲ್ಲ ಎಂದು ಸ್ಪಷ್ಟಪಡಿಸಿದರು. ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ಉಪವಿಧಿ -2019ರಲ್ಲಿ ಉಲ್ಲೇಖವಾಗಿರುವಂತೆ ನಗರದಲ್ಲಿ ಪ್ರತಿ ಮನೆಯಿಂದ (ಗೃಹ ತ್ಯಾಜ್ಯ ಸಂಗ್ರಹ) ಬೆಸ್ಕಾಂ ಬಿಲ್‌ನೊಂದಿಗೆ ಪ್ರತಿ ತಿಂಗಳು 200 ರೂ., ವಾಣಿಜ್ಯ ಕಟ್ಟಡಗಳಿಂದ ಕಸ ಉತ್ಪತ್ತಿ ಪ್ರಮಾಣದ ಆಧಾರದ ಮೇಲೆ 500ರೂ. ನಿಂದ 14 ಸಾವಿರ ರೂ. ವರೆಗೆ ಸೇವಾ ಶುಲ್ಕ ಸಂಗ್ರಹ ಬಹುತೇಕ ಅಂತಿಮ ವಾಗಿತ್ತು. ಈ ಸಂಬಂಧ ಬೆಸ್ಕಾಂ ಅಧಿಕಾರಿಗಳೊಂದಿಗೂ ಪಾಲಿಕೆ ಅಧಿಕಾರಿಗಳು ಚರ್ಚಿಸಿದ್ದರು. ಪ್ರತಿಪಕ್ಷ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿತ್ತು. ಅಲ್ಲದೆ, ಪಾಲಿಕೆ ಚುನಾವಣೆ ಸನ್ನಿಹಿತದಲ್ಲಿ ಇರುವುದರಿಂದ ಕಸ ಸಂಗ್ರಹಕ್ಕೆ ಸೇವಾ ಶುಲ್ಕ ಸಂಗ್ರಹ ಪ್ರಸ್ತಾವನೆ ಕೈಬಿಡಲಾಗಿದೆ ಎನ್ನಲಾಗಿದೆ.

ಉ ಫಲಶ್ರುತಿ

## ಪ್ರಸ್ತಾಪಿತ ಸೇವಾ ಶುಲ್ಕ

(ಬೃಹತ್ ತ್ಯಾಜ್ಯ ಉತ್ಪಾದಕರನ್ನು ಹೊರತುಪಡಿಸಿ)

| ವರ್ಗ | ಶುಲ್ಕ |
|---|---|
| ಗೃಹ ತ್ಯಾಜ್ಯ ಉತ್ಪಾದಕರು | 200ರೂ. |
| ವಾಣಿಜ್ಯ ಮತ್ತು ಸಾಂಸ್ಥಿಕ ತ್ಯಾಜ್ಯ ಉತ್ಪಾದಕರು | (ಪ್ರತಿದಿನ) |
| 5ಕೆ.ಜಿ ಅಥವಾ 5ಕ್ಕಿಂತ ಕಡಿಮೆ | 500ರೂ. |
| 10ಕೆ.ಜಿ ಅಥವಾ 10ಕ್ಕಿಂತ ಕಡಿಮೆ | 1,400ರೂ. |
| 25ಕೆ.ಜಿ ಅಥವಾ 25ಕ್ಕಿಂತ ಕಡಿಮೆ | 3,500ರೂ. |
| 50 ಕೆ.ಜಿ ಅಥವಾ 50ಕ್ಕಿಂತ ಕಡಿಮೆ | 7 ಸಾವಿರ |
| 100 ಕೆ.ಜಿ ಅಥವಾ 100ಕ್ಕಿಂತ ಕಡಿಮೆ | 14, ಸಾವಿರ |
| ಖಾಲಿ ನಿವೇಶನ | 0.20 ರೂ. (ಚ.ಅ). |
| ಕಟ್ಟಡ ನಿರ್ಮಾಣ ತ್ಯಾಜ್ಯ | ಸಮಯಾನುಸಾರ ನಿರ್ಧಾರ |

Edit with WPS Office

ಸಂಯುಕ್ತ ಕರ್ನಾಟಕ

# ಬೆಂಗಳೂರಿಗೆ ವಿಶ್ವನಗರದ ರೂಪ-ಸರ್ಕಾರದ ಬಂಗಾರದ ಕನಸು





Edit with WPS Office

ಸಂಯುಕ್ತ ಕರ್ನಾಟಕ

# ಕಸದ ಶುಲ್ಕ ಕೈಬಿಟ್ಟ ಬಿಬಿಎಂಪಿ

ಸಂ.ಕ. ಸಮಾಚಾರ ಬೆಂಗಳೂರು

ಬೆಸ್ಕಾಂ ಬಿಲ್‌ಮೊತ್ತದೊಂದಿಗೆ ಕಸಕ್ಕೂ ಶುಲ್ಕ ಸಂಗ್ರಹಿಸಲು ಯೋಜಿಸಿದ್ದ ಬಿಬಿಎಂಪಿ ಈಗ ಅಂತಹ ಯೋಜನೆಯಿಂದ ಹಿಂದೆ ಸರಿದಿದೆ.

ಕಸ ಸೇವಾ ಶುಲ್ಕ ವಿಧಿಸುವ ಬಿಬಿಎಂಪಿ ಪ್ರಸ್ತಾವನೆಗೆ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪಾಲಿಕೆ ಕೈಬಿಟ್ಟಿದೆ. ಇದರಿಂದ ನಾಗರಿಕರು ನಿರಾಳರಾಗುವಂತಾಗಿದೆ.

ನಗರದಲ್ಲಿನ ಕಸದ ಸಮಸ್ಯೆ ನಿವಾರಣೆಗಾಗಿ ಹಾಗೂ ಕಸ ನಿರ್ವಹಣೆಗೆ ಹೆಚ್ಚು ಹೊರೆಯಾಗುತ್ತಿದ್ದ ಹಿನ್ನೆಲೆಯಲ್ಲಿ ಪ್ರತಿ ಮನೆ, ವಾಣಿಜ್ಯ ಸಂಕೀರ್ಣಗಳಿಂದ, ಕಲ್ಯಾಣ ಮಂಟಪಗಳಿಗೆ ಪ್ರತಿ ತಿಂಗಳು ಕಸ ಸೇವಾ ಶುಲ್ಕ ವಿಧಿಸಲು ತಯಾರಿ ನಡೆಸಲಾಗಿತ್ತು. ಇದಕ್ಕಾಗಿ ಬೆಸ್ಕಾಂ ಜೊತೆ ಒಡಂಬಡಿಕೆ ಮಾಡಿಕೊಳ್ಳಲು ಚಿಂತನೆ ನಡೆಸಲಾಗಿತ್ತು.



ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ಉಪವಿಧಿ-2019ರಲ್ಲಿ ಉಲ್ಲೇಖವಾಗಿರುವಂತೆ ನಗರದಲ್ಲಿ ಪ್ರತಿ ಮನೆಯಿಂದ ತ್ಯಾಜ್ಯ ಸಂಗ್ರಹ ಮಾಡಿದ್ದಕ್ಕೆ ಬೆಸ್ಕಾಂ ಬಿಲ್‌ನೊಂದಿಗೆ ಪ್ರತಿ ತಿಂಗಳು 200 ರೂ., ವಾಣಿಜ್ಯ ಕಟ್ಟಡಗಳಿಂದ ಕಸ ಉತ್ಪತ್ತಿ ಪ್ರಮಾಣದ ಆಧಾರದ ಮೇಲೆ 500ರೂ. ನಿಂದ 14 ಸಾವಿರ ರೂ.ವರೆಗೆ ಸೇವಾ ಶುಲ್ಕ ಸಂಗ್ರಹ ಮಾಡುವುದು ಬಹುತೇಕ ಅಂತಿಮವಾಗಿತ್ತು. ಈ ಸಂಬಂಧ ಬೆಸ್ಕಾಂನ ಅಧಿಕಾರಿಗಳೊಂದಿಗೂ ಪಾಲಿಕೆಯ ಅಧಿಕಾರಿಗಳು ಚರ್ಚೆ ಮಾಡಿದ್ದರು. ಇನ್ನೇನು ಜನವರಿ ತಿಂಗಳಿನಿಂದ ಈ ಪದ್ಧತಿ ಅನುಷ್ಠಾನಕ್ಕೆ ಬರಲಿದೆ ಎಂದು ಭಾವಿಸಲಾಗಿತ್ತು.

ಕೊರೊನಾ ಸಂಕಷ್ಟದಲ್ಲಿ ಈಗಾಗಲೇ ವಿದ್ಯುತ್ ಬಿಲ್ ಸೇರಿದಂತೆ ಹಲವು ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿರುವ ಸಂದರ್ಭದಲ್ಲಿ ಇಂತಹ ವ್ಯವಸ್ಥೆ ಜಾರಿಗೆ ತಂದಲ್ಲಿ ಸಾರ್ವಜನಿಕರ ಟೀಕೆಗೆ ಒಳಗಾಗುವುದು ಖಚಿತ ಎಂದು ತಿಳಿದಿದ್ದರಿಂದ ಮುಖ್ಯಮಂತ್ರಿಗಳೇ ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಸದ್ಯಕ್ಕೆ ಇಂತಹ ಯೋಜನೆಯನ್ನು ಜಾರಿಗೆ ತರುವುದು ಬೇಡ ಎಂದು ಬಿಬಿಎಂಪಿ ಆಯುಕ್ತರಿಗೆ ಸೂಚಿಸಿದ್ದರು ಎನ್ನಲಾಗಿದೆ. ಇದರಿಂದ ಈಗ ಇಂತಹ ವ್ಯವಸ್ಥೆ ಜಾರಿಗೆ ತರುವ ಪ್ರಸ್ತಾವನೆಯನ್ನು ಕೈಬಿಡಲಾಗಿದೆ ಎಂದು ಗೊತ್ತಾಗಿದೆ.

### ಪ್ರಸ್ತಾಪಿಸಿದ್ದ ಸೇವಾ ಶುಲ್ಕ

- ಮನೆಗೆ 200 ರೂ.
- ವಾಣಿಜ್ಯ 5ರಿಂದ 50 ಕೆ.ಜಿ. ಕಸಕ್ಕೆ 500 ರೂ.
- ವಾಣಿಜ್ಯಕ್ಕೆ 10 ಕೆ.ಜಿಗೆ 1400 ರೂ.
- 25ಕೆ.ಜಿಗೆ 3,500 ರೂ.
- 50 ಕೆ.ಜಿ.ಗೆ 7 ಸಾವಿರ
- 100 ಕೆ.ಜಿಗೆ 14 ಸಾವಿರ
- ಖಾಲಿ ನಿವೇಶನದಲ್ಲಿ ಚದರ ಅಡಿಗೆ 20 ರೂ.



Edit with WPS Office

ಸಂಯುಕ್ತ ಕರ್ನಾಟಕ

# ಕಟ್ಟಡ ಉಲ್ಲಂಘನೆ ಮಿತಿ ಶೇ.15ಕ್ಕೆ ಏರಿಕೆಗೆ ಮನವಿ

**ಸಂ.ಕ.ಸಮಾಚಾರ, ಬೆಂಗಳೂರು**

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣದ ಸಮಯದಲ್ಲಿನ ಉಲ್ಲಂಘನೆ ಮಿತಿಯನ್ನು ಶೇ.5ರಿಂದ ಶೇ.15ಕ್ಕೆ ಹೆಚ್ಚಳ ಮಾಡುವಂತೆ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಅವರು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಅವರಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ನಗರದಲ್ಲಿ ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಬಿಬಿಎಂಪಿ ಕಟ್ಟಡ ಉಪವಿಧಿ -2003 ನಿಯಮ ಅನುಸಾರ ಶೇ. 5ರಷ್ಟು ಮಾತ್ರ ವಿನಾಯಿತಿ ನೀಡಲಾಗುತ್ತಿದೆ. ಈ ಮಿತಿಯನ್ನು ಶೇ.15ಕ್ಕೆ ಹೆಚ್ಚಳ ಮಾಡಿ ತಿದ್ದುಪಡಿ ತರಲು ಕ್ರಮ ವಹಿಸುವಂತೆ ಆಯುಕ್ತರು ಕೋರಿದ್ದಾರೆ.

ನಗರದಲ್ಲಿ ಕಟ್ಟಡ ನಿರ್ಮಾಣ ಮಾಡುವ ಸಂದರ್ಭದಲ್ಲಿ ಶೇ.5ಕ್ಕಿಂತ ಹೆಚ್ಚಾಗಿ ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಾಣ ಮಾಡುತ್ತಿರುವುದು ಕಂಡು ಬಂದಿದೆ. ಶೇ.5ಕ್ಕಿಂತ ಹೆಚ್ಚು ಕಟ್ಟಡ ನಿಯಮ ಉಲ್ಲಂಘನೆಯಾದರೆ, ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವುದಿಲ್ಲ. ಅಲ್ಲದೆ, ಸ್ವಾಧೀನಾನುಭವ ಪತ್ರ ಪಡೆಯದೆ ಇರುವಂತಹ ಕಟ್ಟಡಗಳಿಗೆ ಬೆಸ್ಕಾಂ ಇಲಾಖೆಯಿಂದ ವಿದ್ಯುತ್ ಸಂಪರ್ಕ ನೀಡದೆ ಇರುವುದು ಸಹ ಗಣನೀಯವಾಗಿ ಏರಿಕೆಯಾಗಿದೆ. ಇದರಿಂದ ನಗರದಲ್ಲಿ ಹಲವು ಮನೆಗಳ ಮಾಲೀಕರು ಸಮಸ್ಯೆ ಎದುರಿಸುತ್ತಿದ್ದಾರೆ. ಒಟ್ಟಾರೆ ಪಾಲಿಕೆಯ ಆದಾಯ ಮೂಲಕ್ಕೂ ಇದರಿಂದ ಹಿನ್ನಡೆ ಉಂಟಾಗಿದೆ.

ಪ್ರಸ್ತುತ ನಿರ್ಮಾಣ ಮಾಡುತ್ತಿರುವ ಕಟ್ಟಡಗಳಲ್ಲಿ ನಿಯಮ ಉಲ್ಲಂಘನೆ ಪ್ರಮಾಣವನ್ನು ಶೇ.15ಕ್ಕೆ ಏರಿಕೆ ಮಾಡುವುದರಿಂದ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ದಂಡ ವಿಧಿಸಿ ಕ್ರಮಬದ್ಧಗೊಳಿಸಲು ಅವಕಾಶ ಇದೆ. ಇದರಿಂದ ಪಾಲಿಕೆಗೆ ಆದಾಯ ಬರಲಿದ್ದು, ಬೆಸ್ಕಾಂ ಸಹ ಶಾಶ್ವತವಾಗಿ ವಿದ್ಯುತ್ ಸಂಪರ್ಕ ನೀಡಬಹುದಾಗಿದೆ ಎಂದು ಆಯುಕ್ತರು ಪತ್ರದಲ್ಲಿ ವಿವರಿಸಿದ್ದಾರೆ.



Edit with WPS Office

ಸಂಯುಕ್ತ ಕರ್ನಾಟಕ

# ಕಸಮುಕ್ತ ಶಿವಾಜಿನಗರ ವಾರ್ಡ್

## ವೈಜ್ಞಾನಿಕ ರೀತಿಯ ಕಸ ವಿಲೇವಾರಿ | 750 ಮನೆಗೊಂದರಂತೆ ಬ್ಲಾಕ್ ರಚನೆ

ಸಂ.ಕ. ಸಮಾಚಾರ ಬೆಂಗಳೂರು

ಬಿಬಿಎಂಪಿಯ ಪೂರ್ವ ವಲಯ ವ್ಯಾಪ್ತಿಯ ಶಿವಾಜಿನಗರದಲ್ಲಿ ನಗರದ ಉಳಿದ ಭಾಗಕ್ಕಿಂತ ಹೆಚ್ಚು ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಕಸ ಮುಕ್ತ ಶಿವಾಜಿ ನಗರಕ್ಕೆ 'ಪ್ರೊಜೆಕ್ಟ್ ಶಿವಾಜಿನಗರ' ಎಂಬ ವಿಶೇಷ ಯೋಜನೆ ರೂಪಿಸಿಕೊಳ್ಳಲಾಗಿದೆ ಎಂದು ಶಾಸಕ ರಿಜ್ವಾನ್ ಅರ್ಷದ್ ತಿಳಿಸಿದರು.



ಪ್ರೊಜೆಕ್ಟ್ ಶಿವಾಜಿನಗರ' ತ್ಯಾಜ್ಯ ನಿರ್ವಹಣೆ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಶಾಸಕರು, ಶಿವಾಜಿ ನಗರದಲ್ಲಿ ರಸೆಲ್ ಮಾರುಕಟ್ಟೆ ಹಾಗೂ ಹೆಚ್ಚು ವಾಣಿಜ್ಯ ಮಳಿಗೆಗಳು ಇರುವುದರಿಂದ ಹೆಚ್ಚು ಕಸ ಉತ್ಪತ್ತಿಯಾಗುತ್ತಿದೆ. ಹೀಗಾಗಿ, ಶಿವಾಜಿನಗರ ವಾರ್ಡ್‌ನಲ್ಲಿ ಮೈಕ್ರೋಪ್ಲಾನ್ ರೂಪಿಸಲಾಗಿದ್ದು, ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡಲು ಕ್ರಮವಹಿಸಲಾಗುತ್ತಿದೆ. 750 ಮನೆಗಳಿಗೊಂದರಂತೆ ಬ್ಲಾಕ್ ರಚಿಸಲಾಗಿದ್ದು, ಈಗಾಗಲೇ 200 ಸ್ವಯಂಸೇವಕರು ಈ ಯೋಜನೆಗೆ ಕೈಜೋಡಿಸಿದ್ದಾರೆ ಎಂದರು.

ಮನೆ-ಮನೆಗೆ ತೆರಳಿ ಕಸ ಸಂಗ್ರಹಿಸಲಾಗುತ್ತದೆ. ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಕಸ ಹಾಕಿದವರಿಗೆ ದಂಡ ವಿಧಿಸಲಾಗುತ್ತದೆ. ಕಸ ಸಂಗ್ರಹಿಸುವ ಆಟೋ ಟಿಪ್ಪರ್‌ಗಳಿಗೆ ಜಿಪಿಎಸ್ ಅಳವಡಿಸಲಾಗಿದ್ದು, ಯಾವ ಆಟೋ ಯಾವ ಸಮಯಕ್ಕೆ ತೆರಳಲಿದೆ, ಯಾವ ಮನೆ ಬಳಿ ಇದೆ ಎನ್ನುವ ಮಾಹಿತಿ ಲಭ್ಯವಾಗಲಿದೆ. ಕಸ ಮುಕ್ತ ವೃತ್ತಕ್ಕೆ ರೂಪಿಸಲು ಸಾರ್ವಜನಿಕರು ಸಹ ಸಹಕಾರ ನೀಡಬೇಕು. ಈ ಬಗ್ಗೆ ಸಾರ್ವಜನಿಕರಿಗೆ ಆಟೋಗಳಲ್ಲಿ ಧ್ವನಿವರ್ಧಕಗಳ ಮೂಲಕ ಜಾಗೃತಿ ಮೂಡಿಸಲಾಗುವುದು ಎಂದು ಹೇಳಿದರು.

ಕಸಮುಕ್ತ ಶಿವಾಜಿನಗರ ಯೋಜನೆಯಲ್ಲಿ ಭಾಗವಹಿಸಲು ಇಚ್ಛಿಸುವವರು 8884414425 ವಾಟ್ಸಾಪ್ ಮೂಲಕ ಸಂದೇಶ ಕಳುಹಿಸಿ ಅಗತ್ಯ ಮಾಹಿತಿ ಪಡೆಯಬಹುದಾಗಿದೆ.

### ಶೀಘ್ರವೇ ದೂರಿಗೆ ಮಾಹಿತಿ

ಆಟೋ ಟಿಪ್ಪರ್ ಚಾಲಕರು ಮತ್ತು ಸಹಾಯಕರು ನಿಗದಿತ ಸಮಯದಲ್ಲಿ ಮನೆ ಮನೆಗಳಲ್ಲಿ ಕಸ ಸಂಗ್ರಹ ಮಾಡಲಿದ್ದಾರೆ. ವಾಹನ ಬರದೆ ಇದ್ದರೆ ಯಾರಿಗೆ ದೂರು ನೀಡಬೇಕು ಎನ್ನುವ ಬಗ್ಗೆ ಶೀಘ್ರ ಮಾಹಿತಿ ನೀಡಲಾಗುವುದು.

■ ಡಿ. ರಂದೀಪ್ | ಬಿಬಿಎಂಪಿ ವಿಶೇಷ ಆಯುಕ್ತ



Edit with WPS Office

ಸಂಯುಕ್ತ ಕರ್ನಾಟಕ

# ಸಂಪತ್‌ರಾಜ್ ವಿರುದ್ಧ ಕಾಂಗ್ರೆಸ್ ಕ್ರಮ

- ಶಿಸ್ತು ಸಮಿತಿಗೆ ಡಿಕೆಶಿ ಶಿಫಾರಸು
- ಪಕ್ಷದ ಹಿತದೃಷ್ಟಿಯಿಂದ ಕ್ರಮ
- ಡಿ.ಜೆ ಹಳ್ಳಿ, ಕೆ.ಜಿ.ಹಳ್ಳಿ ಗಲಭೆ ಹಿನ್ನೆಲೆ

**ಸಂಕ ಸಮಾಚಾರ ಬೆಂಗಳೂರು**

ಡಿ.ಜೆ ಹಳ್ಳಿ, ಕೆ.ಜಿ. ಹಳ್ಳಿ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಮಾಜಿ ಮೇಯರ್ ಸಂಪತ್‌ರಾಜ್ ವಿರುದ್ಧ ಕ್ರಮಕ್ಕೆ ಕೆಪಿಸಿಸಿ ಮುಂದಾಗಿದೆ.



ಸಂಪತ್ ರಾಜ್ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಶಿಸ್ತು ಪಾಲನಾ ಸಮಿತಿಗೆ ಡಿ.ಕೆ. ಶಿವಕುಮಾರ್ ಶಿಫಾರಸು ಮಾಡಿರುವ ಹಿನ್ನೆಲೆಯಲ್ಲಿ ಮಾಜಿ ಮೇಯರ್ ಸಂಪತ್ ರಾಜ್ ವಿರುದ್ಧ ಕ್ರಮಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕೊನೆಗೂ ಮುಂದಾಗಿದ್ದಾರೆ ಎಂದು ಗೊತ್ತಾಗಿದೆ.

ಗಲಭೆ ಪ್ರಕರಣ ಕುರಿತು ಶಾಸಕ ಅಖಂಡ ಶ್ರೀನಿವಾಸ್, ಸಂಪತ್ ರಾಜ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಡಿಕೆಶಿಯವರಿಗೆ ಮನವಿ ಮಾಡಿದ್ದರು. ಕ್ರಮ ಕೈಗೊಳ್ಳದಿದ್ದರೆ ಹೈಕಮಾಂಡ್ ಮೊರೆ ಹೋಗುವುದಾಗಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಇಂಗಿತ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಡಿಕೆಶಿ, ಸಂಪತ್ ರಾಜ್ ವಿರುದ್ಧ ತಡವಾಗಿಯಾದರೂ ಕ್ರಮಕ್ಕೆ ಮುಂದಾಗಿದ್ದಾರೆ.

ಆಗಸ್ಟ್ ತಿಂಗಳಲ್ಲಿ ನಡೆದ ಗಲಭೆ ವೇಳೆ ಶಾಸಕರ ಮನೆ ಹಾಗೂ ಎರಡು ಪೊಲೀಸ್ ಠಾಣೆಗಳಿಗೆ ಬೆಂಕಿ ಹಚ್ಚಲಾಗಿತ್ತು. ಇದೇ ವೇಳೆ ಗಲಭೆಕೋರರು ಕೆಲವು ಮಾರ್ಗಗಳ ಬಳಿ ನಿಲ್ಲಿಸಿದ್ದ ವಾಹನಗಳಿಗೆ ಬೆಂಕಿ ಹಚ್ಚಿದ್ದರು. ಇದರಿಂದ ಈ ಪ್ರದೇಶ ಕೆಲ ದಿನಗಳ ಕಾಲ ಉದ್ವಿಗ್ನವಾಗಿತ್ತು.

ಈ ಬಗ್ಗೆ ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ 300ಕ್ಕೂ ಹೆಚ್ಚು ಗಲಭೆಕೋರರನ್ನು ಬಂಧಿಸಿ ವಿಚಾರಣೆ ನಡೆಸಿದ್ದರು. ಗಲಭೆಯಲ್ಲಿ ಎಸ್‌ಡಿಪಿಐ ಕೈವಾಡ ಇರುವುದರ ಜೊತೆಗೆ ಉಗ್ರ ಸಂಘಟನೆ ಜೊತೆ ಸಂಪರ್ಕ ಇರುವವರೂ ಪತ್ತೆಯಾಗಿದ್ದರು. ವಿಚಾರಣೆ ವೇಳೆ ಗಲಭೆ ಪ್ರಕರಣದಲ್ಲಿ ಮಾಜಿ ಮೇಯರ್ ಸಂಪತ್‌ರಾಜ್, ಪಾಲಿಕೆ ಮಾಜಿ ಸದಸ್ಯ ಜಾಕೀರ್ ಕೂಡಾ ಭಾಗಿಯಾಗಿರುವ ಆರೋಪ ಕೇಳಿಬಂದಿದ್ದರಿಂದ ಅವರನ್ನು ವಿಚಾರಣೆಗೆ ಕರೆಸಲಾಗಿತ್ತು. ತದನಂತರ ಇಬ್ಬರೂ ನಾಪತ್ತೆಯಾಗಿದ್ದರು. ಈ ವೇಳೆ ಕಾಂಗ್ರೆಸ್‌ನ ಶಿಸ್ತುಪಾಲನಾ ಸಮಿತಿ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸಿ ಸಂಪತ್‌ರಾಜ್ ಕೂಡಾ ಆರೋಪಿತರಾಗಿದ್ದು ಅವರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಿತ್ತು.

ಇದೇ ವೇಳೆ ಅಖಂಡ ಶ್ರೀನಿವಾಸಮೂರ್ತಿ ಅವರು ತಮ್ಮ ಮನೆಗೆ ಬೆಂಕಿ ಹಚ್ಚಲು ಮಾಜಿ ಮೇಯರ್ ಸಂಪತ್‌ರಾಜ್ ಕಾರಣವಾಗಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿಕೊಂಡಿದ್ದರು. ತದನಂತರ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಗಲಭೆ ಹಾಗೂ ತಮ್ಮ ಮನೆ ಸುಟ್ಟುಹೋದ ಬಗ್ಗೆ ಮಾಹಿತಿ ಒದಗಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿಕೊಂಡಿದ್ದರು. ಕ್ರಮಕ್ಕೆ ವಿಳಂಬವಾಗಿದ್ದರಿಂದ ಅಸಮಾಧಾನ ವ್ಯಕ್ತಪಡಿಸಿದ್ದ ಅಖಂಡ ಶ್ರೀನಿವಾಸ ಮೂರ್ತಿ ಹೈಕಮಾಂಡ್ ಮೊರೆ ಹೋಗುವುದಾಗಿ ತಿಳಿಸಿದ್ದರು.



Edit with WPS Office

# 3.90 ಲಕ್ಷ ಮಾಲೀಕರಿಂದ ತಪ್ಪು ಮಾಹಿತಿ

- ಪಾಲಿಕೆಯ ಸ್ವಯಂ ಆಸ್ತಿ ಘೋಷಣೆ ಯೋಜನೆ
- ವಿವರ ಸಲ್ಲಿಕೆ ಸಂದರ್ಭದಲ್ಲಿ ಮಾಲೀಕರ ವಂಚನೆ
- ಪಾಲಿಕೆಗೆ ಕೋಟ್ಯಂತರ ರೂ ಆದಾಯ ಖೋತಾ
- ಕಂದಾಯ ಇಲಾಖಾ ಅಧಿಕಾರಿಗಳ ಶಾಮೀಲಾತಿ ಶಂಕೆ

ಸಂ.ಕ. ಸಮಾಚಾರ ಬೆಂಗಳೂರು

ಸ್ವಯಂ ಆಸ್ತಿ ಘೋಷಣೆ ಸಂದರ್ಭದಲ್ಲಿ ನಗರದ 3.90 ಲಕ್ಷ ಮಂದಿ ತಪ್ಪಾಗಿ ಮಾಹಿತಿ ನೀಡಿರುವುದನ್ನು ಬಿಬಿಎಂಪಿ ಪತ್ತೆ ಮಾಡಿದೆ.

ಆಸ್ತಿ ಮಾಲೀಕರು ತಮ್ಮ ಆಸ್ತಿ ವಿವರ ಸಲ್ಲಿಸುವ ಸಂದರ್ಭದಲ್ಲಿ ತಪ್ಪಾದ ವಲಯ ನಮೂದಿಸುವ ಮೂಲಕ ಪಾಲಿಕೆಗೆ ವಂಚನೆ ಮಾಡುತ್ತಿರುವುದು ಬೆಳಕಿಗೆ ಬಂದಿದೆ. ಇದರಿಂದ ಪಾಲಿಕೆಗೆ ಬರಬೇಕಾದ ಕೋಟ್ಯಂತರ ರೂ. ಬರದಂತಾಗಿದೆ.

ಈ ಕುರಿತು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಮಾಧ್ಯಮದವರಿಗೆ ಮಾಹಿತಿ ನೀಡಿದ್ದು, ನಗರದಲ್ಲಿ ಸ್ವಯಂ ಆಸ್ತಿ ಘೋಷಣೆ ಅಡಿ ಸಾರ್ವಜನಿಕರಿಗೆ ಆಸ್ತಿ ವ್ಯಾಪ್ತಿ ಘೋಷಣೆ ಮಾಡಿಕೊಳ್ಳಲು ಅವಕಾಶ ನೀಡಲಾಗಿತ್ತು. ಆದರೆ, ಸಾರ್ವಜನಿಕರು ಆಸ್ತಿ ಮಾಹಿತಿ ಘೋಷಣೆ ಮಾಡುವ ಸಂದರ್ಭದಲ್ಲಿ ತಪ್ಪಾದ ವಲಯ ಆಯ್ಕೆ ಮಾಡಿಕೊಂಡು ಪಾಲಿಕೆಗೆ ಕೋಟ್ಯಂತರ ರೂ. ನಷ್ಟ ಉಂಟು ಮಾಡಿದ್ದಾರೆ. ಇದರಲ್ಲಿ ಪಾಲಿಕೆಯ ಕೆಲವು ಕಂದಾಯ ಅಧಿಕಾರಿಗಳು ಶಾಮೀಲಾಗಿದ್ದು, ಕೆಲವು ಆಸ್ತಿ ಮಾಲೀಕರಿಗೆ ನೆರವಾಗಿದ್ದಾರೆ ಎಂದಿದ್ದಾರೆ.

ವಿಶೇಷ ಎಂದರೆ ವಾಣಿಜ್ಯ ಕಟ್ಟಡವನ್ನು ವಸತಿ ಕಟ್ಟಡ ಎಂದು, ಬಹುಮಹಡಿ ಕಟ್ಟಡವನ್ನು ಸಾಮಾನ್ಯ ಕಟ್ಟಡ ಎಂದು ನಮೂದು ಮಾಡುವ ಮೂಲಕ ಆಸ್ತಿ ತೆರಿಗೆ ವಂಚನೆ ಮಾಡಲಾಗಿದೆ. ಈ ಪಟ್ಟಿಯಲ್ಲಿ ಸಂಬಂಧಪಟ್ಟ ಮಾಲೀಕರಿಗೆ ಮಾತ್ರವಲ್ಲದೆ, ಇಂತಹ ಲೋಪ ಗೊತ್ತಿದ್ದೂ ಕ್ರಮ ತೆಗೆದುಕೊಳ್ಳದ ಅಧಿಕಾರಿಗಳ ವಿರುದ್ಧವೂ ಕ್ರಮಕ್ಕೆ ಮುಂದಾಗಿದ್ದು, ಈಗಾಗಲೇ ಆಸ್ತಿ ಮಾಲೀಕರಿಗೆ ಹಾಗೂ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಆಸ್ತಿ ತೆರಿಗೆ ಮಾಹಿತಿ ತಪ್ಪಾಗಿ ನಮೂದಿಸುವುದು, ತಪ್ಪಾದ ವಲಯ ನಮೂದು ಮಾಡುವ ಮೂಲಕ ಆಸ್ತಿ ತೆರಿಗೆಯಿಂದ ನುಣುಚಿಕೊಂಡಿದ್ದ 3.90 ಲಕ್ಷ ಜನ ಬಾಕಿ ಆಸ್ತಿ ತೆರಿಗೆ ಪಾವತಿ (ನೈಜ ವಲಯದನುಸಾರ) ಮತ್ತು ಈ ತಪ್ಪಿಗೆ ದಂಡ ಪಾವತಿ ಮಾಡುವಂತೆ ನೋಟಿಸ್ ಜಾರಿ ಮಾಡಲಾಗುತ್ತಿದೆ. ಸ್ವಯಂ ವಿಸ್ತೀರ್ಣದ ತೆರಿಗೆ ಆಧರಿಸಿ ದುಪ್ಪಟ್ಟು ತೆರಿಗೆ ಮತ್ತು ಮಾಸಿಕ ಶೇ.2 ಬಡ್ಡಿಯನ್ನು ವಿಧಿಸಲಾಗುವುದು ಎಂದು ತಿಳಿಸಿದ್ದಾರೆ.

ಆಸ್ತಿ ತೆರಿಗೆ ಮಾಹಿತಿ ದಾಖಲಿಸಲು ಜಿಯೋ ಮ್ಯಾಪಿಂಗ್ ವ್ಯವಸ್ಥೆ ಜಾರಿ ಮಾಡಲಾಗಿದ್ದು, ಇದರಲ್ಲಿ ವಲಯದ ಆಯ್ಕೆಯನ್ನು ಕಂದಾಯ ಅಧಿಕಾರಿಗಳಿಗೆ ಅಥವಾ ಸಾರ್ವಜನಿಕರಿಗೆ ನಮೂದಿಸಲು ಸಾಧ್ಯವಿಲ್ಲ. ಒಮ್ಮೆ ಸಾರ್ವಜನಿಕರು ನಿರ್ದಿಷ್ಟ ಪ್ರದೇಶದ ಮಾಹಿತಿ ದಾಖಲಿಸಿದ ತಕ್ಷಣವೇ ವಲಯ ಕಾಣಿಸಲಿದೆ ಎಂದರು.

ಹೊಸ ದಿಗಂತ

ಹೊಸ ದಿಗಂತ

18 Dec 2020

### ಮುಂದಿನ 2 ವರ್ಷದಲ್ಲಿ ಸಾಕಾರ | ಮಿಷನ್ 2022ಕ್ಕೆ ಸಿಎಂ ಚಾಲನೆ

# ಬೆಂಗ್ಳೂರಿಗೆ ನವಚೈತನ್ಯ

▪ ದಿಗಂತ ವರದಿ, ಬೆಂಗಳೂರು

[illegible]

ಬೆಂಗಳೂರು ಮಿಷನ್ 2022

[illegible]

[illegible]



- ಜಗತ್ತಿನ ಅತ್ಯುತ್ತಮ ನಗರಗಳ ಸಾಲಿಗೆ ಬೆಂಗಳೂರು
- ಪಾರ್ಕ್ ಮತ್ತು ಸುಗಮ ಸಂಚಾರ, ರಸ್ತೆಗಳ ಅತ್ಯುತ್ತಮ ನಿರ್ವಹಣೆ
- ಸ್ವಚ್ಛ ಕಸ, ಸ್ವಚ್ಛ ಜವಾಬ್ದಾರಿ ಮೂಲಕ ಸ್ವಚ್ಛ ಬೆಂಗಳೂರು ನಿರ್ಮಾಣ
- ಹೊರವಲಯದ 400 ಎಕರೆಯಲ್ಲಿ ಬೃಹತ್ ವೃಕ್ಷೋದ್ಯಾನಗಳ ಅಭಿವೃದ್ಧಿ
- ಜಲಮೂಲಗಳ ಪುನಶ್ಚೇತನ, ಸಂಸ್ಕರಣೆಗೆ ಆದ್ಯತೆ, ಕುಡಿವ ನೀರು ಪೂರೈಕೆ
- ಸೃಜನಶೀಲ ವ್ಯಕ್ತಿಗಳಿಗಾಗಿ ಬೆಂಗಳೂರು ಮೂಲಕ ಸಂಗ್ರಹಾಲಯ, ಸಾಂಸ್ಕೃತಿಕ ಕಾರ್ಯಕ್ರಮ

**ಮಿಷನ್ 2022 ಅನುಷ್ಠಾನದ ಕುರಿತು ಮುಂದಿನ ದಿನಗಳಲ್ಲಿ ಪ್ರತಿ 6 ತಿಂಗಳಿಗೊಮ್ಮೆ [illegible]**

▪ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ

### 6 ತಿಂಗಳಿಗೊಮ್ಮೆ ನಗರ ಪ್ರದಕ್ಷಿಣೆ

[illegible]

### ನಗರಾಭಿವೃದ್ಧಿಗೆ ಸ್ಪಷ್ಟ ಯೋಜನೆ: ಅಶೋಕ

[illegible]


Edit with WPS Office

## ಸಂಸ್ಕೃತಿ, ಪರಂಪರೆ ಮತ್ತು ಕರಕುಶಲ ವಸ್ತು ಸಂಗ್ರಹಾಲಯ ಸ್ಥಾಪನೆ: ಜನಸ್ನೇಹಿ ಮೂಲಕ ನಾಗರಿಕ ಸೇವೆ

# ಆಡಳಿತ ನಿರ್ವಹಣೆಗಾಗಿ ಬಿಬಿಎಂಪಿ ಕಾಯ್ದೆ

▪ ದಿಗಂತ ವರದಿ, ಬೆಂಗಳೂರು






### ಮಾಲಿನ್ಯ ಕಡಿತ, ಸುಗಮ ಸಂಚಾರ

### ರಸ್ತೆಗಳಿಗೆ ಆಧುನಿಕ ಸ್ಪರ್ಶ

- ಬೆಂಗಳೂರಿನ ಸಂಸ್ಕೃತಿ, ಪರಂಪರೆಯನ್ನು ಅನಾವರಣಗೊಳಿಸುವ ಕೇಂದ್ರ ಸ್ಥಾಪನೆ.
- ಖಾತೆ, ಆಸ್ತಿ ತೆರಿಗೆ ಪಾವತಿ, ಜನನ ಮತ್ತು ಮರಣ ಪ್ರಮಾಣ ಪತ್ರಗಳ ವಿತರಣೆ, ವ್ಯಾಪಾರ ಪರವಾನಗಿ ವಿತರಣೆ ಮೊದಲಾದ ನಾಗರಿಕ ಸೇವೆಗಳು ಏಕೀಕೃತ ಡಿಜಿಟಲ್ ವೇದಿಕೆಯಲ್ಲಿ ಒದಗಿಸುವುದು
- ನಾಗರಿಕರಿಗೆ ರಸ್ತೆ ಕುರಿತ ಮಾಹಿತಿ ಆನ್‌ಲೈನ್‌ನಲ್ಲಿ ಒದಗಿಸುವುದು. ನಾಗರಿಕ ಸೇವೆಗಳು, ವಿವಿಧ ಯೋಜನೆಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳ ಕುರಿತು ಮಾಹಿತಿ ಒದಗಿಸುವುದು. ಸಾರ್ವಜನಿಕ ಕುಂದುಕೊರತೆ ನಿವಾರಣೆಗೆ ಏಕೀಕೃತ ವೇದಿಕೆಯಾಗಿ ಸಹಾಯ ಪೋರ್ಟಲ್‌ನ ಮರುವಿನ್ಯಾಸ. ಆ ಮೂಲಕ ಬೆಂಗಳೂರಿನ ನಾಗರಿಕರಿಗೆ ಸುಧಾರಿತ ಸೇವೆ ಒದಗಿಸುವುದು.
- ಸಾರ್ವಜನಿಕರಿಗೆ ಮನರಂಜನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನ ತಾಣಗಳ ಅಭಿವೃದ್ಧಿ.
- ಕಲಾಕಾರರು, ಕುಶಲಕರ್ಮಿಗಳು ಹಾಗೂ ಇತರ ಸೃಜನಶೀಲ ವೃತ್ತಿಯಲ್ಲಿರುವವರಿಗೆ ಅವಕಾಶಗಳನ್ನು ಒದಗಿಸುವುದು.
- ಇತಿಹಾಸ-ಬೆಂಗಳೂರಿನ ತಂತ್ರಜ್ಞಾನದ ಇತಿಹಾಸವನ್ನು ಪರಿಚಯಿಸುವ ಸಂವಹನಶೀಲ ಡಿಜಿಟಲ್ ಪ್ರಾತ್ಯಕ್ಷಿಕೆಯನ್ನು ಸ್ಥಾಪಿಸುವುದು.
- ಉದ್ಯಮಶೀಲತೆ, ನಾವೀನ್ಯತೆ ಮತ್ತು ಜೈವಿಕ ತಂತ್ರಜ್ಞಾನ ಉದ್ಯಮಗಳ ಮುನ್ನಡೆಯನ್ನು ಬಿಂಬಿಸುವ ಬೆಂಗಳೂರು ಇನ್ನೋವೇಷನ್ ಕೇಂದ್ರದ ಸ್ಥಾಪನೆ.
- ಜನಸ್ನೇಹಿ ಕ್ರಮಗಳ ಮೂಲಕ ಅತ್ಯುತ್ತಮ ನಾಗರಿಕ ಸೇವೆ ಒದಗಿಸುವುದರೊಂದಿಗೆ ಸಾರ್ವಜನಿಕ ಕುಂದು ಕೊರತೆಗಳ ತ್ವರಿತ ನಿವಾರಣೆ ಸರ್ಕಾರದ ಆದ್ಯತೆ.

### ಉದ್ಯಾನ ನಗರಿಯ ಹೆಗ್ಗಳಿಕೆ ಉಳಿಕೆ

### ನಿತ್ಯ ಕಸ-ನಿತ್ಯ ಜವಾಬ್ದಾರಿಯಿಂದ ಸ್ವಚ್ಛ ಬೆಂಗಳೂರು



Edit with WPS Office

ಹೊಸ ದಿಗಂತ

ಹೊಸ ದಿಗಂತ



18 Dec 2020

# ಕಸದ ಸಮಸ್ಯೆ ನಿವಾರಣೆಗೆ ನಾಗರಿಕರ ಸಹಕಾರ ಅಗತ್ಯ



Edit with WPS Office

ಹೊಸ ದಿಗಂತ

ಹೊಸ ದಿಗಂತ 12
18 Dec 2020

# ಕೆರೆಗಳ ಪುನಶ್ಚೇತನ ಕಾರ್ಯಕ್ಕೆ ಚಾಲನೆ



Edit with WPS Office

ಹೊಸ ದಿಗಂತ

## ಮಾರ್ಷಲ್‌ಗಳಿಂದ 50 ಸಾವಿರ ರೂ.ದಂಡ

**ಬೆಂಗಳೂರು:**

Edit with WPS Office

ಹೊಸ ದಿಗಂತ

## ಕೆರೆಗಳ ಅಭಿವೃದ್ಧಿಗೆ ಶೀಘ್ರವೇ ಆರಂಭ



[illegible]

Edit with WPS Office

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ಬೆಂಗಳೂರು ಸಮಗ್ರ ಅಭಿವೃದ್ಧಿಗೆ ಆದ್ಯತೆ: ಸಿಎಂ

ಬೆಂಗಳೂರು, ಡಿ. 17: 'ಬೆಂಗಳೂರು ಮಿಷನ್-2022' ಅಡಿಯಲ್ಲಿ ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿದ್ದು, ಮುಂದಿನ ಎರಡು ವರ್ಷಗಳಲ್ಲಿ ಈ ಗುರಿ ಸಾಧಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಗುರುವಾರ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿದ್ದ 'ಬೆಂಗಳೂರು ಮಿಷನ್-2022' ಸಮಾರಂಭದಲ್ಲಿ ಮಾತನಾಡಿದ ಅವರು, ಸಾರಿಗೆ, ಸ್ವಚ್ಛತೆ, ಹಸಿರು ಸಂರಕ್ಷಣೆ, ಘನ ತ್ಯಾಜ್ಯ ವಿಲೇವಾರಿ, ರಾಜ ಕಾಲುವೆಗಳ ಸಮಗ್ರ ನಿರ್ವಹಣೆ, ಕೆರೆಗಳ ಅಭಿವೃದ್ಧಿ, ಜನಸಂಪರ್ಕ ಸೇರಿದಂತೆ ಇನ್ನಿತರ ಯೋಜನೆಗಳನ್ನು ಕೈಗೊಳ್ಳಲಾಗುವುದು ಎಂದರು.

ನಗರದ ಸಮಸ್ಯೆಗಳನ್ನು ಕೂಲಂಕಷವಾಗಿ ಅಧ್ಯಯನ ನಡೆಸಿ, ಸ್ಪಷ್ಟ ಮುನ್ನೋಟದೊಂದಿಗೆ ಸಿದ್ಧಪಡಿಸಿರುವ ಯೋಜನೆಯು ಬೆಂಗಳೂರನ್ನು ಎಲ್ಲ ಆಯಾಮಗಳಲ್ಲಿಯೂ ವಿಶ್ವದರ್ಜೆಯ ನಗರವಾಗಿ ರೂಪಿಸಲಾಗುವುದು ಎಂದ ಅವರು, ಹೊಸ ಉದ್ಯಾನಗಳು ಮತ್ತು ಬೃಹತ್ ವೃಕ್ಷ ಉದ್ಯಾನಗಳನ್ನೂ ನಿರ್ಮಿಸಲಾಗುವುದು ಎಂದು ತಿಳಿಸಿದರು.



ಬೆಂಗಳೂರು ನಗರದಲ್ಲಿರುವ ಮೈಸೂರು ಲ್ಯಾಂಪ್ಸ್ ಕಾರ್ಖಾನೆ ಮತ್ತು ಎನ್‌ಜಿಇಎಫ್ ಕಾರ್ಖಾನೆಗಳ ಜಮೀನಿನಲ್ಲಿ ಕಲೆ, ರಂಗಭೂಮಿಗೆ ಸಂಬಂಧಿಸಿದ ಸಾಂಸ್ಕೃತಿಕ ಮ್ಯೂಸಿಯಂ ನಿರ್ಮಿಸಲಾಗುವುದು. ಬೆಂಗಳೂರಿನ ಇತಿಹಾಸ ದಾಖಲಿಸುವ ಮ್ಯೂಸಿಯಂ ನಿರ್ಮಾಣವಾಗಲಿದೆ ಎಂದು ಯಡಿಯೂರಪ್ಪ ಘೋಷಿಸಿದರು.

ನಗರದ ವಾಹನ ದಟ್ಟಣೆ ತಪ್ಪಿಸಿ, ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಲು ಪ್ರಮುಖ 12 ಮಾರ್ಗಗಳನ್ನು ಕಾರಿಡಾರ್ ಆಗಿ ಅಭಿವೃದ್ಧಿಪಡಿಸಲಾಗುವುದು. 400 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ ಎಂದ ಅವರು, ರಸ್ತೆಗಳ ಅತ್ಯುತ್ತಮ ನಿರ್ವಹಣೆ, ಸಂಚಾರ ಪರಿಕರಗಳ ಅಳವಡಿಕೆ ಹಾಗೂ ಸಮನ್ವಯ ಹೊಂದಿದ ಸಿಗ್ನಲ್ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು.

ಉಪಮುಖ್ಯಮಂತ್ರಿ ಡಾ.ಅಶ್ವತ್ಥ ನಾರಾಯಣ, ಕಂದಾಯ ಸಚಿವ ಆರ್. ಅಶೋಕ, ನಗರಾಭಿವೃದ್ಧಿ ಭೈರತಿ ಬಸವರಾಜ, ಆಹಾರ ಸಚಿವ ಕೆ.ಗೋಪಾಲಯ್ಯ, ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಸರಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್, ಹೆಚ್ಚುವರಿ ಮುಖ್ಯಕಾರ್ಯದರ್ಶಿ ರಾಕೇಶ್ ಸಿಂಗ್, ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ ಮತ್ತಿತರರು ಉಪಸ್ಥಿತರಿದ್ದರು.

## ನನ್ನ ಕಸ-ನನ್ನ ಜವಾಬ್ದಾರಿ

ಘನ ತ್ಯಾಜ್ಯವನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಲು 'ನನ್ನ ಕಸ-ನನ್ನ ಜವಾಬ್ದಾರಿ' ಎಂಬ ಯೋಜನೆ ರೂಪಿಸಲಾಗಿದೆ. ಘನ ತ್ಯಾಜ್ಯ ನಿರ್ವಹಣೆ ಕುರಿತು ಸಾರ್ವಜನಿಕರಿಗೆ ತರಬೇತಿಯನ್ನೂ ನೀಡಲಾಗುವುದು ಎಂದು ಯಡಿಯೂರಪ್ಪ , ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಲಾಗಿದ್ದು, ಇನ್ನು ಎರಡು ವರ್ಷಗಳಲ್ಲಿ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ದೇಶದ ಪ್ರಮುಖ ಆರ್ಥಿಕ ಕೇಂದ್ರವಾಗಿರುವ ಬೆಂಗಳೂರಿನ ಬದುಕಿನಲ್ಲಿ ಚೇತನಶೀಲತೆಯೂ ಚಿಮ್ಮುತ್ತಿರಬೇಕು. ಅಂತಹ ಅಭಿವೃದ್ಧಿ ಸಾಧ್ಯವಾಗಬೇಕೆನ್ನುವುದು ಬೆಂಗಳೂರು ಮಿಷನ್-2022 ಆಶಯ. ಭವಿಷ್ಯದ ಬೆಂಗಳೂರನ್ನು ಕೇಂದ್ರೀಕರಿಸಿ ಯೋಜನೆ ಮಿಷನ್ 2022 ರೂಪಿಸಿದ್ದು, ಎಲ್ಲರೂ ಸೇರಿ ನಿಗದಿತ ಅವಧಿಯೊಳಗೆ ಇದನ್ನು ಅನುಷ್ಠಾನಗೊಳಿಸಲಾಗುವುದು.

। ಬಿ.ಎಸ್.ಯಡಿಯೂರಪ್ಪ,
ಮುಖ್ಯಮಂತ್ರಿ



Edit with WPS Office

ಜನದನಿಯ ಸಾರಥಿ
ವಾರ್ತಾ ಭಾರತಿ

ವಾರ್ತಾ ಭಾರತಿ

# ‘ಕಸ ವಿಲೇವಾರಿಯಲ್ಲಿ ನಾಗರಿಕರು ತೊಡಗಿಕೊಳ್ಳಬೇಕು’



ಬೆಂಗಳೂರು, ಡಿ.17: ಕಸ ವಿಲೇವಾರಿ ಮಾಡುವುದು ಬಿಬಿಎಂಪಿ ಅಥವಾ ಪೌರ ಕಾರ್ಮಿಕರ ಕೆಲಸವಲ್ಲ. ಅದರೊಂದಿಗೆ ನಾಗರಿಕರು ಸಹ ತೊಡಗಿಕೊಳ್ಳಬೇಕು. ಆಗ ಮಾತ್ರ ಸ್ವಚ್ಛ ವಾತಾವರಣ ನಿರ್ಮಿಸಲು ಸಾಧ್ಯ ಎಂದು ಶಾಸಕ ರಿಝ್ವಾನ್ ಅರ್ಶದ್ ಹೇಳಿದ್ದಾರೆ.

ಗುರುವಾರ ಶಿವಾಜಿನಗರದ ಖಾಸಗಿ ಹೋಟೆಲ್‌ನಲ್ಲಿ ಬಿಬಿಎಂಪಿ ವತಿಯಿಂದ ಆಯೋಜಿಸಿದ್ದ ಘನ ತ್ಯಾಜ್ಯ ನಿರ್ವಹಣೆ ಯೋಜನೆ ಚಾಲನೆ ಹಾಗೂ ಪೌರ ಕಾರ್ಮಿಕರಿಗೆ ತರಬೇತಿ ಕಾರ್ಯಾಗಾರದ ಉದ್ಘಾಟಿಸಿ ಅವರು ಮಾತನಾಡಿದರು.

ಕಸ ವಿಲೇವಾರಿ ಸಂಬಂಧ ಶಿವಾಜಿನಗರ ವಾರ್ಡ್‌ನಲ್ಲಿ ಮೈಕ್ರೋಪ್ಲಾನ್ ಮಾಡಿದ್ದು, ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡಲು ಕ್ರಮವಹಿಸಲಾಗುತ್ತಿದೆ. 750 ಮನೆಗೊಂದರಂತೆ ಬ್ಲಾಕ್ ರಚನೆ ಮಾಡಲಾಗಿದ್ದು, ಈಗಾಗಲೇ 200 ಸ್ವಯಂಸೇವಕರು ಈ ಯೋಜನೆಗೆ ಕೈಜೋಡಿಸಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಬಿಬಿಎಂಪಿ ವಿಶೇಷ ಆಯುಕ್ತ(ಘನತ್ಯಾಜ್ಯ) ಡಿ.ರಂದೀಪ್, ಜಂಟಿ ಆಯುಕ್ತ (ಘನತ್ಯಾಜ್ಯ) ಸರ್ಫರಾಜ್ ಖಾನ್, ಅಭಿಯಂತರ ಕಾರ್ಯಪಾಲಕ ಮುಹಮ್ಮದ್ ಝೂಫೀದ್ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

Bengaluru Edition
Dec 18, 2020 Page No.7

Edit with WPS Office

ಸಂಜೆವಾಣಿ
1982



ವಿಧಾನಸೌಧದಲ್ಲಿ ಇಂದು ನಡೆದ ಬೆಂಗಳೂರು ಮಿಷನ್ 2022 ನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಉದ್ಘಾಟಿಸಿದರು. ಡಿಸಿಎಂ ಡಾ. ಸಿ.ಎನ್. ಅಶ್ವತ್ಥನಾರಾಯಣ್, ಸಚಿವರಾದ ಎಸ್. ಸುರೇಶ್ ಕುಮಾರ್, ಆರ್. ಅಶೋಕ್, ಭೈರತಿ ಬಸವರಾಜು, ಕೆ. ಗೋಪಾಲಯ್ಯ ಇದ್ದಾರೆ.

### ನಗರಕ್ಕೆ ಹೊಸ ರೂಪ

# ಬೆಂಗಳೂರು ಮಿಷನ್ ಜಾರಿ

ಬೆಂಗಳೂರು,ಡಿ.17– ಬೆಂಗಳೂರು ನಗರಕ್ಕೆ ವಿಶ್ವ ದರ್ಜೆಯ ನಾಗರೀಕ ಸೌಲಭ್ಯಗಳನ್ನು ಕಲ್ಪಿಸಿ ನಗರದ ವ್ಯವಸ್ಥಿತ ಅಭಿವೃದ್ಧಿಗೆ ಬೆಂಗಳೂರು ಮಿಷನ್ 2022 ಸರ್ಕಾರ ಜಾರಿ ಮಾಡಿರುವ ಯೋಜನೆಯನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅವರು

ಯೋಜನೆಗೆ ಚಾಲನೆ ನೀಡಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಬೆಂಗಳೂರು ಮಿಷನ್ 2022 ಕಾರ್ಯಕ್ರಮ ಚಾಲನೆ ಸಮಾರಂಭದಲ್ಲಿ ಮಾತನಾಡಿದ ಅವರು, ವಿಶ್ವಮಾನ್ಯ ನಗರವಾಗಿರುವ ಬೆಂಗಳೂರಿಗೆ ವಿಶ್ವದರ್ಜೆಯ ನಾಗರೀಕ ಸೌಲಭ್ಯಗಳನ್ನು ಕಲ್ಪಿಸುವ ಗುರಿಯೊಂದಿಗೆ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಮುಂದಿನ 2 ವರ್ಷಗಳಲ್ಲಿ ಬೆಂಗಳೂರು ಮಿಷನ್ 2022 ಕಾರ್ಯಕ್ರಮಗಳು ಸಂಪೂರ್ಣಗೊಂಡು ಬೆಂಗಳೂರಿನ ಅಭಿವೃದ್ಧಿಯ ಚಿತ್ರಣ ಹೊಸ ರೂಪ ಪಡೆಯಲಿದೆ ಎಂದರು. ಈ ಯೋಜನೆಗೆ ಅಗತ್ಯ ಹಣಕಾಸು ಒದಗಿಸಲಾಗಿದ್ದು, 6 ತಿಂಗಳಿಗೊಮ್ಮೆ ಈ ಯೋಜನೆಯ ಪ್ರಗತಿ ಪರಿಶೀಲಿಸಲಾಗುವುದು ಎಂದರು. ಮುಂದಿನ 2 ವರ್ಷಗಳಲ್ಲಿ ಬೆಂಗಳೂರು ನಗರದ ಅಭಿವೃದ್ಧಿಗೆ ಬೆಂಗಳೂರು ಮಿಷನ್ 2022 ಮೂಲಕ ನೀಲ ನಕ್ಷೆಯನ್ನು ಸಿದ್ಧಪಡಿಸಿದ್ದೇವೆ ಎಂದವರು ಹೇಳಿದರು.

ದೇಶದಲ್ಲಿ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ಬೆಂಗಳೂರು ಸ್ವಾತಂತ್ರ್ಯೋತ್ಸವದ 75ನೇ ವರ್ಷ ಅಂದರೆ 2022ರಲ್ಲಿ ಹೇಗಿರಬೇಕು, ಯಾವ ರೀತಿ ಅಭಿವೃದ್ಧಿ ಹೊಂದಬೇಕು ಎಂಬ ಬಗ್ಗೆ ಕಾರ್ಯಸೂಚಿ ನೀಲ ನಕ್ಷೆಯನ್ನು ಬೆಂಗಳೂರು ಮಿಷನ್ 2022 ಒಳಗೊಂಡಿದೆ ಎಂದರು.

ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಂಡ ತಕ್ಷಣವೇ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದಾಗಲೆಲ್ಲ ಪ್ರಧಾನಿಗಳು ಬೆಂಗಳೂರು ಸದಾ ಅಭಿವೃದ್ಧಿಯ ಮುಂಚೂಣಿಯಲ್ಲಿರಬೇಕು ಎಂದು ಅವರು ಸದಾ ಹೇಳಿದ್ದಾರೆ.

|ಎರಡನೇ ಪುಟ ನೋಡಿ|

Edit with WPS Office

ಸಂಜೆವಾಣಿ
1982



ಸ್ತಿ ತೆರಿಗೆ ಹೆಚ್ಚಳ ಮತ್ತು ಕಸ ಸಂಗ್ರಹಣೆಗೆ ತೆರಿಗೆ ವಿಧಿಸಿರುವುದನ್ನು ಹಿಂಪಡೆಯುವಂತೆ ಶಾಸಕಿ ಸೌಮ್ಯರೆಡ್ಡಿ ನೇತೃತ್ವದ ನಿಯೋಗ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಅವರಿಗೆ ಮನವಿ ಸಲ್ಲಿಸಿತು. ಮಾಜಿ ಮೇಯರ್‌ಗಳಾದ ಮಂಜುನಾಥ ರೆಡ್ಡಿ, ಎಂ. ರಾಮಚಂದ್ರಪ್ಪ, ಬೆಂಗಳೂರು ಕೇಂದ್ರ ದಕ್ಷಿಣ ಮತ್ತು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಜಿ. ಶೇಖರ್, ಜಿ. ಕೃಷ್ಣಪ್ಪ ಇದ್ದಾರೆ.

# ತ್ಯಾಜ್ಯ ನಿರ್ವಹಣೆಗೆ ತೆರಿಗೆ ರದ್ದಿಗೆ ಆಗ್ರಹ

ಬೆಂಗಳೂರು, ಡಿ 17– ಈಗಾಗಲೇ ಕೊರೋನಾ ಸೋಂಕಿನಿಂದ ಜನರು ತತ್ತರಿಸಿ ಹೋಗಿದ್ದಾರೆ. ಇವರ ಮಧ್ಯೆ ಆಸ್ತಿ ತೆರಿಗೆ ಮತ್ತು ತ್ಯಾಜ್ಯ ಸಂಗ್ರಹಣೆಗೆ ತೆರಿಗೆ ವಿಧಿಸಿರುವುದನ್ನು ಬೆಂಗಳೂರು ಕೇಂದ್ರ ದಕ್ಷಿಣ ಮತ್ತು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿ ತೀವ್ರವಾಗಿ ಖಂಡಿಸಿದೆ.

ತ್ಯಾಜ್ಯ ಉತ್ಪಾದಕರಾದ ಹೋಟೆಲ್, ಕಲ್ಯಾಣ ಮಂಟಪ ಶಾಪಿಂಗ್ ಮಾಲ್‌ಗಳಲ್ಲಿ ವಹಿವಾಟಿಲ್ಲದೇ ಸಂಕಷ್ಟದಲ್ಲಿದೆ.

ಇವಲ್ಲದೇ ಅಗತ್ಯ ವಸ್ತುಗಳ ಬೆಲೆ ಕೂಡ ಗಗನಕ್ಕೇರಿದೆ. ಇಂತಹ ಸಂದರ್ಭದಲ್ಲಿ ನಾಗರಿಕರಿಗೆ ನೆರವಾಗಬೇಕಾದ ಆಸ್ತಿತೆರಿಗೆ, ಕಟ್ಟಡ ನಕ್ಷೆ ತ್ಯಾಜ್ಯ ಇವುಗಳ ಮೇಲೆ ಶುಲ್ಕ ಹೆಚ್ಚಿಸಿ ಜನರ ಬದುಕಿನಲ್ಲಿ ಚೆಲ್ಲಾಟವಾಡುತ್ತಿದೆ ಎಂದು ದೂರಿದ್ದಾರೆ.

ಇಂತಹ ಸಂದರ್ಭದಲ್ಲಿ ಕಸ ಸಂಗ್ರಹದಲ್ಲಿ ಪ್ರತಿ ಮನೆಗೆ ಹಾಗೂ ಖಾಸಗಿ ತ್ಯಾಜ್ಯ ಉತ್ಪಾದಕರಿಗೆ ಮಾಸಿಕ 200 ರೂ 14000 ರೂ ಶುಲ್ಕ ವಿಧಿಸಲು ಹೊರಟಿರುವುದು ನಿಜಕ್ಕೂ ದುರಾದೃಷ್ಟಕರ,

ಈ ಯೋಜನೆಗಳನ್ನು ಬಿಬಿಎಂಪಿ ಸಮರ್ಪಕವಾಗಿ ರೂಪಿಸಬೇಕಿ ಹೊರತು. ಪೌರಕಾರ್ಮಿಕರ ವೇತನ, ತ್ಯಾಜ್ಯ ನಿರ್ವಹಣೆ ನೆಪದಲ್ಲಿ ಪ್ರತ್ಯೇಕ ಮಂಡಳಿ ನಿರ್ಮಿಸಲು ಹೊರಟಿರುವುದು ಸಮರ್ಪಕವಲ್ಲ ಎಂದು ಶಾಸಕಿ ಸೌಮ್ಯರೆಡ್ಡಿ ಅವರು ಆರೋಪಿಸಿದ್ದಾರೆ.

ಈ ಸಂಬಂಧ ಸೌಮ್ಯರೆಡ್ಡಿ ಅವರ ನಿಯೋಗ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಅವರಿಗೆ ಮನವಿ ಸಲ್ಲಿಸಿ, ತೆ-ರಿಗೆ ವಿಧಿಸಿರುವುದನ್ನು ಹಿಂಪಡೆಯುವಂತೆ ಒತ್ತಾಯಿಸಿದೆ.

ಮಾಜಿ ಮೇಯರ್ ಮಂಜುನಾಥ್ ರೆಡ್ಡಿ, ಎಂ.ರಾಮಚಂದ್ರಪ್ಪ, ಸಮಿತಿ [illegible] ಜಿ.ಶೇಖರ್, ಜಿ.ಕೃಷ್ಣಪ್ಪ ಇದ್ದಾರೆ.

Edit with WPS Office

ಸಂಜೆವಾಣಿ

# ಕಸ ನಿರ್ವಹಣೆ ಪಾರ್ಕ್ ನಾಗರಿಕರ ಸಹಕಾರಕ್ಕೆ ಮನವಿ

ಬೆಂಗಳೂರು, ಡಿ.17–ಕಸ ವಿಲೇವಾರಿ ಮಾಡುವುದು ಪಾಲಿಕೆಯ ಜವಾಬ್ದಾರಿ ಮಾತ್ರವಲ್ಲ,ಬದಲಾಗಿ, ನಾಗರೀಕರು ಕೈಜೋಡಿಸಬೇಕೆಂದು ಶಾಸಕ ರಿಜ್ವಾನ್ ಆರ್ಷದ್ ಅಭಿಪ್ರಾಯಪಟ್ಟರು.

ನಗರದಲ್ಲಿಂದು ಬಿಬಿಎಂಪಿವತಿಯಿಂದ ಶಿವಾಜಿನಗರ ವಾರ್ಡ್–92ರಲ್ಲಿ ಘನತ್ಯಾಜ್ಯ ವಿಲೇವಾರಿ ಮಾಡುವ ಸಂಬಂಧ ಘನ ತ್ಯಾಜ್ಯ ನಿರ್ವಹಣೆ ಯೋಜನೆ ಜಾರಿ ಹಾಗೂ ಪೌರ ಕಾರ್ಮಿಕರ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಸ ವಿಲೇವಾರಿ ಮಾಡುವುದು ಪಾಲಿಕೆಯ ಜವಾಬ್ದಾರಿ ಮಾತ್ರವಲ್ಲ. ಪಾಲಿಕೆಯ ಜೊತೆ ನಾಗರೀಕರು ಸಹಭಾಗಿತ್ವದಿಂದ ಒಟ್ಟಾಗಿ ಕೈಜೋಡಿಸಿ ಕಸದ ಸಮಸ್ಯೆ ನಿವಾರಣೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಸರ್ವರೂ ಜೊತೆಗೂಡಿ ಶಿವಾಜಿನಗರ ವಾರ್ಡ್ ವ್ಯಾಪ್ತಿಯಲ್ಲಿ ಕಸಮುಕ್ತ ಪ್ರದೇಶವಾಗಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಪಾಲಿಕೆ ಜೊತೆ ನಾಗರೀಕರು ಪಣತೊಟ್ಟು ಕೆಲಸ ಮಾಡಿದಾಗ ಕಸದ ಸಮಸ್ಯೆ ನಿವಾರಣೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಕಸ ವಿಲೇವಾರಿ ಮಾಡುವ ಸಂಬಂಧ ಪಾಲಿಕೆಯು ಶಿವಾಜಿನಗರ ವಾಯರ್ಡ್ನಲ್ಲಿ ಮೈಕ್ರೋಪ್ಲನ್ ಮಾಡಿದ್ದು, ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡಲು ಕ್ರಮವಹಿಸಲಾಗುತ್ತಿದೆ. 750 ಮನೆಗೊಂದರಂತೆ ಬ್ಲಾಕ್ ರಚನೆ ಮಾಡಲಾಗಿದ್ದು, ಈಗಾಗಲೇ 200 ಸ್ವಯಂಸೇಕರು ಈ ಯೋಜನೆಗೆ ಕೈಜೋಡಿಸಿದ್ದಾರೆ ಎಂದರು.

ಪೂರ್ವ ವಲಯ ವ್ಯಾಪ್ತಿಯ ಶಿವಾಜಿನಗರ ವ್ಯಾಪ್ತಿಯಲ್ಲಿ ರಸಲ್ ಮಾರುಕಟ್ಟೆ, ಹೆಚ್ಚು ವಾಣಿಜ್ಯ ಪ್ರದೇಶಗಳಿದ್ದು, ಅತಿ ಹೆಚ್ಚು ಕಸ ಉತ್ಪತ್ತಿ ಆಗುವ ಪ್ರದೇಶವಾಗಿದೆ. ಈ ಪೈಕಿ ಶಿವಾಜಿನಗರ ವಾರ್ಡ್ ನಿಂದಲೇ ಸಮರ್ಪಕ ಕಸ ವಿಲೇವಾರಿ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತಿದೆ.

ಮನೆ–ಮನೆಗೆ ತೆರಳಿ ಕಸ ಸಂಗ್ರಹಿಸಲಾಗುತ್ತದೆ. ಈ ಬಗ್ಗೆ ನಾಗರೀಕರಲ್ಲಿ ಹೆಚ್ಚು ಅರಿವು ಮೂಡಿಸಲಾಗುತ್ತದೆ. ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಕಸ ಹಾಕಿದವರಿಗೆ ದಂಡ ವಿಧಿಸಲಾಗುತ್ತದೆ. ಹಾಗೂ ಶಿವಾಜಿನಗರ ವ್ಯಾಪ್ತಿಯಲ್ಲಿರುವ ಕಸ ಸುರಿಯುವ ಸ್ಥಳ(ಬ್ಲಾಕ್ ಸ್ಪಾಟ್)ಗಳನ್ನು ತೆರವುಗೊಳಿಸಿ ಆ ಸ್ಥಳವನ್ನು ಸುಂದರೀಕರಣ ಮಾಡಲಾಗುವುದು.

ಕಸ ಸಂಗ್ರಹಿಸುವ ಆಟೋ ಟಿಪ್ಪರ್‌ಗಳಿಗೆ ಜಿಪಿಎಸ್ ಅಳವಡಿಸಲಾಗಿದ್ದು, ಯಾವ ಆಟೋ ಯಾವ ಸಮಯಕ್ಕೆ, ಯಾವ ಮನೆ ಬಳಿ ಇದೆ ಎಂಬುದನ್ನು ನೋಡಬಹುದಾಗಿದೆ. ಆಟೋಗಳಲ್ಲಿ ಧ್ವನಿವರ್ಧಕಗಳ ಮೂಲಕ ಸ್ಥಳೀಯ ನಾಗರೀಕರಿಗೆ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಬಿಬಿಎಂಪಿ ವಿಶೇಷ ಆಯುಕ್ತ(ಘನತ್ಯಾಜ್ಯ) ಡಿ.ರಂದೀಪ್, ಜಂಟಿ ಆಯುಕ್ತ(ಘನತ್ಯಾಜ್ಯ)ಸರ್ಫರಾಜ್ ಖಾನ್, ಅಭಿಯಂತರ ಕಾರ್ಯಪಾಲಕ ಮಹಮ್ಮದ್ ಜಾವೀದ್ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

Edit with WPS Office

ಸಂಜೆವಾಣಿ

# ಬೆಂಗಳೂರು ಮಿಷನ್ ಜಾರಿ

ಹಾಗೆಯೇ ಇಲ್ಲಿನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಕ್ಷೇತ್ರದ ನೂತನ ಆವಿಷ್ಕಾರದ ಬಗ್ಗೆ ಪ್ರಧಾನಿಗಳು ಪ್ರಸ್ತಾಪಿಸಿ ಬೆಂಗಳೂರು ಸದಾ ಅಭಿವೃದ್ಧಿಯಲ್ಲಿ ಮುನ್ನಡೆಯುವಂತೆ ಕಾರ್ಯಸೂಚಿಯನ್ನು ರೂಪಿಸಿ ಎಂದು ಪ್ರಧಾನಿ ಹೇಳಿದ್ದಾರೆ.

ಪ್ರಧಾನಿಗಳ ಮಾತುಗಳಿಂದ ಪ್ರೇರಿತರಾಗಿ ಅಭಿವೃದ್ಧಿಯಲ್ಲಿ ಬೆಂಗಳೂರಿನ ಸ್ಥಾನಕ್ಕೆ ಧಕ್ಕೆಯಾಗದಂತೆ ಕ್ರಮಕೈಗೊಳ್ಳುವ ಪಣ ತೊಟ್ಟು ಬೆಂಗಳೂರಿನ ಅಭಿವೃದ್ಧಿಗೆ ಆದ್ಯತೆ ನೀಡಿ ಬೆಂಗಳೂರು ಮಿಷನ್ 2022 ರೂಪಿಸಿದ್ದೇವೆ ಎಂದರು.

ಸಂಚಾರ ದಟ್ಟಣೆ ಕಡಿಮೆ ಮಾಡಲು ಸುಗಮ ಸಂಚಾರ, ಸ್ವಚ್ಛ ಬೆಂಗಳೂರು, ಹಸಿರು ಬೆಂಗಳೂರು, ಜನ ಸಂಪರ್ಕ–ಸಾರ್ವಜನಿಕ ಕುಂದುಕೊರತೆ ನಿವಾರಣೆ ಹೀಗೆ 4 ವಲಯಗಳನ್ನು ಗುರುತಿಸಿ ಕಂಕಣಬದ್ಧರಾಗಿ ಎಂದು ಅವರು ಹೇಳಿದರು. ಬೆಂಗಳೂರಿನ ಬೆಂಗಳೂರು ಅಭಿವೃದ್ಧಿಗೆ ರಾಜ್ಯ ಸರ್ಕಾರ ರೂಪಿಸಿರುವ ಬೆಂಗಳೂರು ಮಿಷನ್ 2022 ನಲ್ಲಿ ಸುಗಮ ಸಂಚಾರ, ಸ್ವಚ್ಛ ಬೆಂಗಳೂರು, ಹಸಿರು ಬೆಂಗಳೂರು, ಜನ ಸಂಪರ್ಕ ಸಾರ್ವಜನಿಕ ಕುಂದು–ಕೊರತೆ 4 ವಲಯಗಳನ್ನು ಗುರುತಿಸಿ ಪ್ರತಿ ವಲಯಕ್ಕೂ ತನ್ನದೇ ಆದ ಕಾರ್ಯಸೂಚಿಯನ್ನು ಇಟ್ಟುಕೊಂಡು ಅಭಿವೃದ್ಧಿಯನ್ನು ಸಾಕಾರಗೊಳಿಸುವ ಅಂಶಗಳಿವೆ.

ಸುಗಮ ಸಂಚಾರ ವಲಯದಡಿ ಅತ್ಯುತ್ತಮ ರಸ್ತೆ ನಿರ್ವಹಣೆ, ಸ್ಮಾರ್ಟ್ ಸಂಚಾರ, ಕಾರಿಡಾರ್‌ಗಳ ನಿರ್ಮಾಣ, ಮೆಟ್ರೊ

ಕಾಮಗಾರಿಗೆ ಮತ್ತಷ್ಟು ವೇಗ, ವಿದ್ಯುತ್‌ಚಾಲಿತ ಸಮೂಹ ಸಾರಿಗೆ ವ್ಯವಸ್ಥೆಗೆ ಒತ್ತು, ಉಪನಗರ ರೈಲ್ವೆ ಯೋಜನೆ ಹೀಗೆ ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಸ್ವಚ್ಛ ಬೆಂಗಳೂರು ಅಡಿ ಸಮಗ್ರ ತ್ಯಾಜ್ಯ ನಿರ್ವಹಣೆ, ನನ್ನ ಕಸ ನನ್ನ ಜವಾಬ್ದಾರಿ, ಈ ಅಂಶಗಳನ್ನು ಪ್ರಮುಖವಾಗಿ ಇಟ್ಟುಕೊಂಡು ತ್ಯಾಜ್ಯ ವಿಲೇವಾರಿಯನ್ನು ಮಾಡುವ ಆಶಯ ಹೊಂದಲಾಗಿದೆ. ಹಸಿರು ಬೆಂಗಳೂರು ಅಡಿ ಬೆಂಗಳೂರು ನಗರ ಹೊರ ವಲಯದಲ್ಲಿ 400 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಲಾಲ್‌ಬಾಗ್, ಕಬ್ಬನ್ ಪಾರ್ಕ್ ಉದ್ಯಾನವನ ಅಭಿವೃದ್ಧಿ, ವೃಕ್ಷ ಉದ್ಯಾನವನ ಅಭಿವೃದ್ಧಿ, ಕೆರೆಗಳ ಪುನಶ್ಚೇತನ ಕಾರ್ಯಕ್ರಮಗಳು ಸೇರಿವೆ. ಜನಸಂಪರ್ಕ ವಲಯದಡಿ ನಾಗರೀಕರ ಸೇವೆಗಳನ್ನು ಹಾಗೂ ಕುಂದುಕೊರತೆಗಳನ್ನು ನಿವಾರಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಸಂಸ್ಕೃತಿ ಮತ್ತು ಪರಂಪರೆಯನ್ನು ಬಿಂಬಿಸಲು ವಸ್ತು ಸಂಗ್ರಹಾಲಯ ಸ್ಥಾಪನೆ ಮತ್ತಿತರ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಮೈಸೂರು ಲ್ಯಾಂಪ್ಸ್ ಮತ್ತು ಎನ್‌ಜಿಎಫ್ ಜಾಗದಲ್ಲಿ ಬೃಹತ್ ಉದ್ಯಾವನಗಳು ರೂಪುಗೊಳ್ಳಲಿವೆ.

Edit with WPS Office

ಈ ಸಂಜೆ

● ಬಿಬಿಎಂಪಿ ಚುನಾವಣೆ: ಸುಪ್ರೀಂನಲ್ಲಿ ನಾಳೆ ವಿಚಾರಣೆ

# ಆಕಾಂಕ್ಷಿಗಳಲ್ಲಿ ತಳಮಳ..

**ಬೆಂಗಳೂರು,ಡಿ.17-** ಬಿಬಿಎಂಪಿ ಚುನಾವಣೆ ಮುಂದೂಡಬೇಕೆಂದು ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಮೇಲ್ಮನವಿ ನಾಳೆ ವಿಚಾರಣೆಗೆ ಬರಲಿರುವ ಹಿನ್ನೆಲೆಯಲ್ಲಿ ಎಲ್ಲರ ಚಿತ್ತ ಸುಪ್ರೀಂಕೋರ್ಟ್‌ನತ್ತ ನೆಟ್ಟಿದ್ದು, ಬಿಬಿಎಂಪಿ ಮಾಜಿ ಸದಸ್ಯರು, ಆಕಾಂಕ್ಷಿಗಳಲ್ಲಿ ತಳಮಳ ಸೃಷ್ಟಿಯಾಗಿದೆ.

ಬಿಬಿಎಂಪಿ ಚುನಾವಣೆ ಮುಂದೂಡಿಕೆಯಾಗಬೇಕೆಂಬುದು ಪಕ್ಷಾತೀತವಾಗಿ ಬಹುತೇಕ ಶಾಸಕರ ಒಲವಾಗಿದೆ. ಆದರೆ ರೀತಿ ಬಿಬಿಎಂಪಿಗೆ ಚುನಾವಣೆ ನಡೆಯಬೇಕೆಂಬುದು ಬಹುತೇಕ ಎಲ್ಲ ಮಾಜಿ ಸದಸ್ಯರ ಅಭಿಪ್ರಾಯವಾಗಿದೆ.

ಒಂದು ತಿಂಗಳೊಳಗೆ ಮೀಸಲಾತಿ ಅಧಿಸೂಚನೆ ಹೊರಡಿಸಿ ನಂತರ ಆರು ವಾರದೊಳಗೆ ಬಿಬಿಎಂಪಿಗೆ ಚುನಾವಣೆ ನಡೆಸಬೇಕೆಂದು ಚುನಾವಣಾ ಆಯೋಗಕ್ಕೆ ಹೈಕೋರ್ಟ್ ಸ್ಪಷ್ಟ ಆದೇಶ ನೀಡಿತ್ತು.

...ಪುಟ 2

Edit with WPS Office

ಈ ಸಂಜೆ

# ತಳಮಳ..

ಅದರಂತೆ ಹಾಲಿ ಇರುವ 198 ವಾರ್ಡ್‌ಗಳಿಗೆ ಸರ್ಕಾರ ಚುನಾವಣೆ ನಡೆಸಬೇಕಾಗಿತ್ತು. ಆದರೆ ಕೆಎಂಸಿ ಕಾಯ್ದೆ ತಿದ್ದುಪಡಿ ಮಾಡಿ ವಾರ್ಡ್‌ಗಳ ಸಂಖ್ಯೆ ಹೆಚ್ಚಳ ಮಾಡಿ ಮೇಯರ್ ಅವಧಿ ಹೆಚ್ಚಳ, ಸ್ಥಾಯಿ ಸಮಿತಿಗಳ ಸಂಖ್ಯೆ ಕಡಿತಗೊಳಿಸಿ, ರಾಜ್ಯ ಸರ್ಕಾರ ಮಸೂದೆ ಮಂಡನೆ ಮಾಡಿ ಚುನಾವಣೆ ಮುಂದೂಡಲು ಮಾಡಿದ ಪ್ರಯತ್ನಕ್ಕೆ ಹೈಕೋರ್ಟ್ ಸೊಪ್ಪು ಹಾಕಲಿಲ್ಲ. ಹೀಗಾಗಿ ರಾಜ್ಯ ಸರ್ಕಾರ ಸಲ್ಲಿಸಿರುವ ಮೇಲ್ಮನವಿ ಅರ್ಜಿ ವಿಚಾರಣೆ ನಾಳೆ ಬರಲಿದೆ. ಹಾಗಾಗಿ ಎಲ್ಲರ ಚಿತ್ತ ಸುಪ್ರೀಂಕೋರ್ಟ್‌ನತ್ತ ನೆಟ್ಟಿದೆ. 1976ರ ಕೆಎಂಸಿ ಕಾಯ್ದೆಗೆ ತಿದ್ದುಪಡಿ ತಂದು ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸುವ ಉದ್ದೇಶದಿಂದ ಸರ್ಕಾರ ಬಿಬಿಎಂಪಿ ಚುನಾವಣೆಯನ್ನು ಈ ಹಿಂದಿನ ಚುನಾಯಿತ ಕೌನ್ಸಿಲ್ ಅವಧಿ ಮುಗಿಯುವ ಮುನ್ನ ಅಂದರೆ ಸೆ.10ರೊಳಗೆ ನಡೆಸಲಿಲ್ಲ. ಚುನಾವಣೆಯನ್ನು ವಿಳಂಬ ಮಾಡುವ ಉದ್ದೇಶದಿಂದಲೇ ಈ ಪ್ರಯತ್ನ ಮಾಡಿದೆ ಎಂದು ಕಾಂಗ್ರೆಸ್ ಮುಖಂಡರಾದ ಎಂ.ಶಿವರಾಜ್ ಹಾಗೂ ಅಬ್ದುಲ್ ವಾಜೀದ್ ಸಲ್ಲಿಸಿದ್ದ ರಿಟ್ ಅರ್ಜಿ ಪರ ಹಿರಿಯ ವಕೀಲರಾದ ಪ್ರೊ.ರವಿವರ್ಮಕುಮಾರ್ ವಾದಿಸಿದ್ದರು.

ಜುಲೈನಲ್ಲಿಯೇ 198 ವಾರ್ಡ್‌ಗಳ ಪುನರ್ ವಿಂಗಡಣೆಯನ್ನು ಸರ್ಕಾರ ಮಾಡಿದ್ದು, ಆಯೋಗ ಚುನಾವಣಾ ಸಿದ್ಧತೆಗಳನ್ನು ಮಾಡಿಕೊಂಡಿದೆ. ಮತದಾರರ ಪಟ್ಟಿಯನ್ನು ತಯಾರು ಮಾಡಿದೆ. ಅದಕ್ಕೆ ಸಂಬಂಧಿಸಿದಂತೆ ಮೂರು ಕೋಟಿ ರೂ.ಗಳನ್ನು ಕೂಡ ವೆಚ್ಚ ಮಾಡಿದೆ ಎಂದು ಚುನಾವಣಾ ಆಯೋಗದ ಪರ ಫಣೀಂದ್ರ ವಾದಿಸಿದ್ದರು. ನಗರದ ಜನಸಂಖ್ಯೆಯಲ್ಲಿ ಭಾರೀ ಹೆಚ್ಚಳವಾಗಿದೆ. ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯತೆ ಹೊಂದುವ ಉದ್ದೇಶದಿಂದ ವಾರ್ಡ್‌ಗಳ ಸಂಖ್ಯೆ ಹೆಚ್ಚಿಸುವ ಅಗತ್ಯವಿದೆ. ನಗರದಲ್ಲಿ ಪರಿಣಾಮಕಾರಿ ಆಡಳಿತದ ದೃಷ್ಟಿಯಿಂದ ಇದು ಅನಿವಾರ್ಯ. ದೇಶದ ಪ್ರಮುಖ ಮಹಾನಗರಗಳಲ್ಲಿ ಒಂದಾದ ಬೆಂಗಳೂರಿನ ಆಡಳಿತ ಸುಧಾರಣೆಗಾಗಿ ವಾರ್ಡ್‌ಗಳ ಸಂಖ್ಯೆಯನ್ನು ಕನಿಷ್ಠ 243ಕ್ಕೆ ಹೆಚ್ಚಿಸುವ ಉದ್ದೇಶದಿಂದ ಕೆಎಂಸಿ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ತಿದ್ದುಪಡಿಯು ಸಂವಿಧಾನದ 243(ಯು) ವಿಧಿಯ ಆಶಯಗಳಿಗೆ ವಿರುದ್ಧವಾಗಿಲ್ಲ. ಚುನಾವಣಾ ಸಂಬಂಧ ಕಾನೂನು ರೂಪಿಸುವ ಅಧಿಕಾರ ಶಾಸಕಾಂಗಕ್ಕಿದೆ ಎಂದು ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ನಾವದಗಿ ಪ್ರಬಲ ವಾದ ಮಂಡಿಸಿದ್ದರು. ಈ ಎಲ್ಲ ವಾದ-ವಿವಾದಗಳನ್ನು ಆಲಿಸಿದ್ದ ಹೈಕೋರ್ಟ್ ಬಿಬಿಎಂಪಿಗೆ ಒಂದು ತಿಂಗಳೊಳಗೆ ಮೀಸಲಾತಿ ಅಧಿಸೂಚನೆ ಹೊರಡಿಸಿ 6 ವಾರಗಳೊಳಗೆ ಚುನಾವಣೆ ನಡೆಸುವಂತೆ ಸ್ಪಷ್ಟ ಆದೇಶ ನೀಡಿತ್ತು.

ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಡಿ.10ರಂದು ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆಯನ್ನು ನಾಳೆ ಸುಪ್ರೀಂಕೋರ್ಟ್ ಕೈಗೆತ್ತಿಕೊಳ್ಳಲಿದೆ. ಈ ಹಿಂದೆಯೂ ಕೂಡ ಹಲವಾರು ಬಾರಿ ಬಿಬಿಎಂಪಿಗೆ ಚುನಾವಣೆ ನಡೆಯದ ಸಂದರ್ಭದಲ್ಲಿ ಕಾನೂನು ಹೋರಾಟ ಮಾಡಲಾಗಿತ್ತು. 2007ರಲ್ಲಿ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 198ಕ್ಕೆ ಹೆಚ್ಚಿಸಲಾಗಿತ್ತು. ಆ ಬಳಿಕ ನಗರದಲ್ಲಿ ಜನಸಂಖ್ಯೆಯಲ್ಲಿ ಭಾರೀ ಹೆಚ್ಚಳವಾಗಿದೆ.

ಅದಕ್ಕೆ ಅನುಗುಣವಾಗಿ ವಾರ್ಡ್ ಸಂಖ್ಯೆ ಹೆಚ್ಚಿಸುವ ಅಗತ್ಯವಿದೆ. ಹೀಗಾಗಿ ತಿದ್ದುಪಡಿ ಮಾಡಲಾಗಿದೆ ಎಂದು ಸರ್ಕಾರ ಸಲ್ಲಿಸಿರುವ ಮೇಲ್ಮನವಿಯಲ್ಲಿ ತಿಳಿಸಿದೆ.

ಸುಪ್ರೀಂಕೋರ್ಟ್ ಯಾವ ರೀತಿ ಪರಿಗಣಿಸುತ್ತದೆ ಎಂಬುದನ್ನು ಕಾದುನೋಡಬೇಕು. ಈ ಕುರಿತು ಪ್ರತಿಕ್ರಿಯಿಸಿದ ಮೂಲ ಅರ್ಜಿದಾರರಾದ ಎಂ.ಶಿವರಾಜ್ ಅವರು, ಸ್ಥಳೀಯ ಆಡಳಿತಗಳಿಗೆ ಬಲ ತುಂಬುವ ಉದ್ದೇಶದಿಂದ ಕೆಎಂಸಿ(1976) ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಆದರೆ ಬೃಹತ್ ನಗರಗಳಲ್ಲಿ ಆಡಳಿತದ ಹಿಡಿತವನ್ನು ತಿದ್ದುಪಡಿ ನೆಪದಲ್ಲಿ ಅಧಿಕಾರರೂಢ ಸರ್ಕಾರಗಳು ತೆಗೆದುಕೊಳ್ಳಲು ಇಂತಹ ಪ್ರಯತ್ನಗಳನ್ನು ಪದೇ ಪದೇ ಮಾಡುತ್ತಿರುತ್ತವೆ. ಹಾಗಾಗಿ ನ್ಯಾಯಾಲಯದ ಮೊರೆ ಹೋಗುವುದು ಅನಿವಾರ್ಯವಾಗಿರುತ್ತದೆ. ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಕೆಯಾಗಿದೆ. ಸುಪ್ರೀಂಕೋರ್ಟ್ ನೀಡುವ ತೀರ್ಪನ್ನು ನಾವು ಸ್ವಾಗತಿಸುತ್ತೇವೆ ಎಂದು ಹೇಳಿದರು.

ಬಿಜೆಪಿ ಮುಖಂಡ ಎನ್.ಆರ್.ರಮೇಶ್ ಮಾತನಾಡಿ, ಸುಪ್ರೀಂಕೋರ್ಟ್ 198 ವಾರ್ಡ್‌ಗಳಿಗೆ ಚುನಾವಣೆ ನಡೆಸಿ ಎಂದರೆ ಸರ್ಕಾರ ಸಿದ್ಧವಿದೆ. ಕಾಲಾವಕಾಶ ನೀಡಿ 243 ವಾರ್ಡ್‌ಗಳಿಗೆ ಚುನಾವಣೆ ನಡೆಸಿದರೆ ಹೊಸ ರೂಪ ಪಡೆದುಕೊಳ್ಳಲಿದೆ ಎಂದು ಹೇಳಿದರು.

ಈ ಸಂಜೆ

# ಬಿಬಿಎಂಪಿ ಚುನಾವಣೆ: ಬೆಂಗಳೂರಿಗೆ ಆಕರ್ಷಕ ಕೊಡುಗೆಗಳು

# ಮಿಷನ್ 2022ಗೆ ಚಾಲನೆ

ಬೆಂಗಳೂರು, ಡಿ.17- ಮುಂಬರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡಿರುವ ಸರ್ಕಾರ, ನಗರದ ಜನತೆಗೆ ಸ್ವಚ್ಛನಗರ, ಸುಗಮ ಸಂಚಾರ, ಹಸಿರು, ಸಾರ್ವಜನಿಕರ ಕುಂದುಕೊರತೆ ನಿವಾರಣೆಗಾಗಿ ಜನಸಂಪರ್ಕ ಸೇರಿದಂತೆ ಬೆಂಗಳೂರಿಗೆ ನವಚೈತನ್ಯ ನೀಡುವ ಆಕರ್ಷಕ ಯೋಜನೆಗಳನ್ನು ಜಾರಿ ಮಾಡಲು ಮುಂದಾಗಿದೆ.

ಬೆಂಗಳೂರು ಮಿಷನ್ 2020-2022 ಯೋಜನೆಯಡಿ ಈ ಎಲ್ಲ ಕಾರ್ಯಕ್ರಮಗಳು ಮುಂದಿನ 2 ವರ್ಷದ ಅವಧಿಯೊಳಗೆ ಪೂರ್ಣಗೊಳ್ಳಲಿದ್ದು ಬೆಂಗಳೂರಿನ ಪ್ರಚಲಿತ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ನೀಡುವುದು ಇದರ ಮೂಲ ಉದ್ದೇಶವಾಗಿದೆ.



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿದ್ದ ಬೆಂಗಳೂರು ಮಿಷನ್ 2020-2022 ಕಾರ್ಯಕ್ರಮವನ್ನು ಉದ್ಘಾಟಿಸಿ ಸಿಎಂ ಮಾತನಾಡಿದರು.

2022ರಲ್ಲಿ ಬೆಂಗಳೂರು ನಗರ ಹೇಗಿರಬೇಕು ಎಂಬ ಸಂಕಲ್ಪದೊಂದಿಗೆ ಬೆಂಗಳೂರು ಮಿಷನ್ 2022 ಕಾರ್ಯಯೋಜನೆಯ ನೀಲನಕ್ಷೆಯನ್ನು ರೂಪಿಸಲಾಗಿದೆ. ಅಭಿವೃದ್ಧಿ ಕ್ಷೇತ್ರದಲ್ಲಿ ಬೆಂಗಳೂರಿನ ಸ್ಥಾನಮಾನಕ್ಕೆ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳುವ ಪಣ ತೊಟ್ಟಿದ್ದೇನೆ. ಬೆಂಗಳೂರಿನ ಪ್ರಗತಿ ನಮ್ಮ ಸರ್ಕಾರದ ಅತೀವ ಕಾಳಜಿ ಮತ್ತು ಆದ್ಯತೆಯ ವಿಷಯವಾಗಿದೆ ಎಂದು ತಿಳಿಸಿದರು.

ವಿಶ್ವಮಾನ್ಯತೆ ಪಡೆದ ವಿಶ್ವದ ನಾಲ್ಕು ತಂತ್ರಜ್ಞಾನ ನೆಲೆಗಳಲ್ಲಿ ಒಂದು ಎಂಬ ಪ್ರಸಿದ್ಧಿ ಹೊಂದಿರುವ ನಮ್ಮ ನಗರದಲ್ಲಿ ಫಾರ್ಚ್ಯೂನ್-500 ಕಂಪೆನಿಗಳಿಗೆ ನೆಲೆಯಾಗಿದೆ. ಇಂತಹ ವಿಶ್ವಮಾನ್ಯತೆ ಪಡೆದ ನಗರದಲ್ಲಿ ವಿಶ್ವದರ್ಜೆ ಸೌಲಭ್ಯ ಕಲ್ಪಿಸುವುದು ನಮ್ಮ ಮುಖ್ಯ ಆದ್ಯತೆಯಾಗಿದೆ. ಮುಂದಿನ 2 ವರ್ಷದಲ್ಲಿ ಈ ಗುರಿ ಸಾಧಿಸಲೇಬೇಕೆಂಬ ಮಹತ್ವಾಕಾಂಕ್ಷೆಯಿಂದ ಬೆಂಗಳೂರು ಮಿಷನ್ 2022 ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ ಎಂದು ಸಿಎಂ ತಿಳಿಸಿದರು.

ಕಾರ್ಯಕ್ರಮದಲ್ಲಿ ಡಿಸಿಎಂ ಡಾ.ಅಶ್ವತ್ಥ ನಾರಾಯಣ, ಸಚಿವರಾದ ಆರ್.ಅಶೋಕ್, ಭೈರತಿ ಬಸವರಾಜ್, ಕೆ.ಗೋಪಾಲಯ್ಯ, ಡಾ.ಕೆ.ಸುಧಾಕರ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಿಜಯಭಾಸ್ಕರ್, ವಾರ್ತಾ ಮತ್ತು ಪ್ರಚಾರ ಇಲಾಖೆಯ ಅಧಿಕಾರಿಗಳು ಮತ್ತು ಬೆಂಗಳೂರನ್ನು ಪ್ರತಿನಿಧಿಸುವ ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು ಪಾಲ್ಗೊಂಡಿದ್ದರು.



Edit with WPS Office



ದತ್ತಾತ್ರೇಯ ವಾರ್ಡ್ ನಂ.77ರಲ್ಲಿ ರಾಜಕಾಲುವೆ ಹಾಗೂ ಪೈಪ್‌ಲೈನ್ ಕಾಮಗಾರಿಗಳು ಆಮೆಗತಿಯಲ್ಲಿ ನಡೆಯುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ.

Thu, 17 December 2020
https://epaper.eesanje.com/c/57094771